ಎ.ಬಿ. ಇಬ್ರಾಹಿಂ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ

ಕರ್ನಾಟಕ ಸರ್ಕಾರದ ಸಚಿವಾಲಯ
ಅಲ್ಪಸಂಖ್ಯಾತರ ಕಲ್ಯಾಣ,
ಹಜ್ ಮತ್ತು ವಕ್ಫ್ ಇಲಾಖೆ

## ದಿನಾಂಕ: 21.08.2020 ಯಾದಗಿರಿ ಜಿಲ್ಲೆಯ ಜಿಲ್ಲಾಧಿಕಾರಿಯವರ ಜೊತೆ ಪರಿಶೀಲನಾ ಸಭೆ ಕೋವಿಡ್ -19ರ ಬಗ್ಗೆ ಹಾಗೂ ವರದಿ.

1. ಯಾದಗಿರಿ ಜಿಲ್ಲೆಯ ಕೋವಿಡ್-19 ರ ಸಾಂಕ್ರಾಮಿಕ ಪ್ರವಾಹದ ಪರಿಸ್ಥಿತಿ ಹಾಗೂ ಇತರ ವಿಷಯಗಳ ಬಗ್ಗೆ ಪರಿಶೀಲಿಸಲಾಯಿತು.
2. ಜಿಲ್ಲೆಗೆ ಇತರೆ ರಾಜ್ಯಗಳಿಂದ ಹಾಗೂ ಇತರೆ ಜಿಲ್ಲೆಗಳಿಂದ ವಲಸೆ ಬರುವವರ ಸಂಖ್ಯೆ ಸ್ಥಗಿತವಾಗಿರುತ್ತದೆ.
3. ಕೆಲವೊಂದು ಪ್ರಕರಣಗಳಲ್ಲಿ ಇತರ ರಾಜ್ಯಗಳಿಗೆ ಹಾಗೂ ರಾಜ್ಯದ ಜಿಲ್ಲೆಗಳಿಗೆ ವಲಸೆ ಹೋಗುವವರು ಕಂಡು ಬರುತ್ತದೆ.
4. ಜಿಲ್ಲೆಯ Unlock ನಿಂದ ಪ್ರಕ್ರೀಯೆಗೆ ಸಂಪೂರ್ಣವಾಗಿ ಚಾಲನೆ ನೀಡಲಾಗಿರುತ್ತದೆ.
5. ಜಿಲ್ಲೆಯಲ್ಲಿ ಒಟ್ಟು ಇಲ್ಲಿಯತನಕ 4120 ಪ್ರಕರಣಗಳು ಪತ್ತೆಯಾಗಿದ್ದು, ಅದರಲ್ಲಿ 2850 ಪ್ರಕರಣಗಳು ರೋಗದಿಂದ ಮುಕ್ತವಾಗಿದ್ದು ಹಾಗೂ ಹಾಲಿ 1241 ಪ್ರಕರಣಗಳು ಸೋಂಕಿತರಾಗಿರುತ್ತಾರೆ. ಜಿಲ್ಲೆಯ ಸುಮಾರು 400 ಮಂದಿ ಆಸ್ಪತ್ರೆಯಲ್ಲಿ ಹಾಗೂ 800 ಮಂದಿ ಮನೆಯಲ್ಲಿಯೇ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದಾರೆ.
6. ಜಿಲ್ಲೆಯಲ್ಲಿ ಒಟ್ಟು 30 ಮಂದಿ ಮರಣ ಹೊಂದಿರುತ್ತಾರೆ. ಯಾದಗಿರಿ ಟೌನ್‌ನಲ್ಲಿ ಹೆಚ್ಚಿನ ಸೋಂಕಿತರ ಪ್ರಕರಣಗಳು ವರದಿ ಆಗಿರುತ್ತವೆ.
7. ಜಿಲ್ಲೆಯಲ್ಲಿ ಚಿಕಿತ್ಸೆ ಸಾಕಷ್ಟು ಪ್ರಮಾಣದಲ್ಲಿ ಆಸ್ಪತ್ರೆಗಳು ಲಭ್ಯವಿರುತ್ತದೆ. ಆದರೆ ಜಿಲ್ಲೆಯಲ್ಲಿ ಲಿಕ್ವೀಡ್ ಆಕ್ಸಿಜನ್ ಸರಬರಾಜು ಕೊರತೆ ವರದಿಯಾಗುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿದೆ.

ಕೊಠಡಿ ಸಂಖ್ಯೆ: 205, 2ನೇ ಮಹಡಿ, ವಿಕಾಸಸೌಧ, ಬೆಂಗಳೂರು – 560 001
ಕಛೇರಿ: 080-22200623/22034440, ಫ್ಯಾಕ್ಸ್: 080-22257602, ಇ-ಮೇಲ್ : secy-mw@karnataka.gov.in

8. ಜಿಲ್ಲೆಯಲ್ಲಿ ಸರ್ಕಾರಿ ವೈದ್ಯರ ಕೊರತೆ ಇರುವುದರಿಂದ ಖಾಸಗಿ ವೈದ್ಯರ ಸೇವೆಯನ್ನು ಬಳಸಿಕೊಳ್ಳಲಾಗಿದೆ.

9. ಒಟ್ಟಾರೆ ಕೊವೀಡ್-19 ಸೋಂಕು ಸದ್ಯದ ಪರಿಸ್ಥಿತಿಯಲ್ಲಿ ಹತೋಟಿಯಲ್ಲಿರುತ್ತದೆ.

10. ಪ್ರವಾಹ/ಮಳೆ: ಜಿಲ್ಲೆಯಲ್ಲಿ ವಾಡಿಕೆಗಿಂತ ಶೇಕಡಾ 60 ರಷ್ಟು ಹೆಚ್ಚುವರಿ ಮಳೆಯಾಗಿರುತ್ತದೆ.

11. ಈಗಾಗಲೇ ಶೇಕಡಾ 90 ರಷ್ಟು ಬಿತ್ತನೆ ಪೂರ್ಣಗೊಂಡಿರುತ್ತದೆ.

12. ಕೃಷ್ಣ ನದಿಯಲ್ಲಿ ಪ್ರವಾಹದ ಪರಿಸ್ಥಿತಿ ನದಿ ದಡದಲ್ಲಿ ಇರುವ ಎಲ್ಲಾ ಜನರಿಗೆ ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿರುತ್ತದೆ . ಯಾವುದೇ ಪುನರ್‌ವಸತಿ ಕಾರ್ಯಕ್ರಮದ ಅವಶ್ಯಕತೆ ಉದ್ಭವಿಸುವುದಿಲ್ಲ.

13. ಇನ್ನಿತರರಿಗೆ ಪ್ರವಾಹ ಪರಿಸ್ಥಿಯನ್ನು ಎದುರಿಸಲು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ.

**ದಿನಾಂಕ: 21.08.2020**

**(ಎ.ಬಿ. ಇಬ್ರಾಹಿಂ)**
ಸರ್ಕಾರದ ಕಾರ್ಯದರ್ಶಿಗಳು ಅಲ್ಪಸಂಖ್ಯಾತರ
ಕಲ್ಯಾಣ ಇಲಾಖೆ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು

**ಮುನೀಶ್ ಮೌದಗಿಲ್**
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಆಡಳಿತ ಸುಧಾರಣೆ)
ಬಹುಮಹಡಿ ಕಟ್ಟಡ
ಬೆಂಗಳೂರು.

9-8-20

## Review of flood situation in Uttara Kannada district

Uttara Kannada District has around 16Lakh population (As per projections from 2011 census). The geographical area of the district is 10,291km$^2$ out of which 80% is forest and 20% is non forest area. The district has 12 taluks, 3 CMCs, 4 TMCs, 5 TPs, 12 Taluk Panchayats, and 231 GPs. 71% of population are in rural areas and 29% in urban areas. The density of the district is 140/km$^2$. The rural population is scattered and population density is low in rural areas. Apart from District Magistrate, there are 4 Assistant Commissioners, 12 Tahsildars, and 35 Revenue Inspectors.

The rainfall pattern in the district from 1st January to 6th August 2020 is given elaborately in Annexure 1. Upto 31st July 2020 the district witnessed 16% deficient rainfall. Even after the start of monsoon only Karwar and Ankola taluks was having a slight fear of some villages getting flooded. But due to the recession in the rainfall patterns and also due to the intervention of District Administration there was no problem, and the same was indicated in my earlier report on the district visit. Actual excess rainfall was witnessed in the first week of August, which made the deficient of 16% to excess of 107% of rainfall. The rainfall was mostly in the Upper Ghat areas and especially on the taluks of Mundgod and Sirsi witnessed heavy downpour resulting in Mundgod receiving 258% of excess rainfall, and Sirsi receiving 193% than the normal rainfall. This sudden downpour resulted in the water going into all the water channels including the rivers, streams, canals etc.

The district has 5 rivers viz Kali, Bedti, Varadha, Ganagavali, Aghanashini, and Sharavati. These rivers and their well connected streams and canals provide an efficient draining of the excess rainfall that lashes in this part of the Western Ghats regularly. Apart from that, the biggest river Kali has a chain of 5 dams starting being Supa and the end Kadra. Kodsalli, Tatihalla, and Bommanahali are the other 3 dams on that river. In the same way Sharavati rivier is having Linganmakki dam in Shimoga district and Gerusoppa dam in UK district. These dams are able to absorb the sudden inflow of water into these rivers and store them for their activities. Hence the water released from network of these dams decides the flooding of the villages in these river basins.

In last year (2019), 2 factors compounded for the unprecedented flooding in the district. One factor is sudden excess rainfall in the first 15 days of the August month and also the unregulated and unplanned way of water release from the reservoirs. Whereas, both these factors are favorable this year. The rainfall as such is 50% less than the last year's rainfall for the same period and also the rainfall is fairly distributed for 4 or 5 days, unlike the heavy downpour witnessed in last year in the 4 to 9 of August, this is shown in annexure 2. Apart from that the District Administration proactively has taken up the task of coordination with dam authorities (KPCL) which resulted in a good coordination in the activities of the dam authorities and the District Administration so far. The comparative statements of the water levels inflow outflow of water in last year and this year is given in Annexure 3a and 3b.

In the First week of August there was 1 human loss, 1 animal loss, and 209 partially damaged houses, 11 completely damages houses. The district administration has made an analysis of the villages that can be submerged in the two rivers of Kali and Sharavati depending on the various levels of water releases this is shown in Annexure 4 and 5. The District Administration also has identified 137 probable villages that can be affected due to floods and also the probable 206 places where the relief centers can be opened, and also identified 404 Volunteers in these villages (Annexure 6).

Also in the first week of August (1 to 8) the agricultural crop loss was 125 hectares, Horticulture loss was 536 hectares spanning over 4 taluks and 26 villages. In these affected areas the District Administration has opened 16 relief centers housing 622 persons in Ankola, Honnavar and Siddapur taluks, in 13 villages. The list is shown in Annexure 7. The District Administration has opened Control room in all Taluk centers and one in DC office to report any incidents of flooding and submergence. Adequate rescue equipments are at the dispose of District Administration for handling the rescue operations. Annexure 8a, 8b, 8c, 8d, and 8e shows the loss of Human lives, Animal loss, House damage and crop loss (Agriculture and Horticulture) in each taluks and also the distribution of relief so far and balance relief respectively.

The loss reported by HESCOM is Rs.143 Lakhs and the details are attached in Annexure 9. The PWD department has estimated 220 km of damage in State Highway, 228 km of damage in Major District Road, 72 bridges and various other government structures. The total estimated loss reported is Rs.5422 Lakhs (Annexure 10). PRED has reported damages of 134km of roads, 9 bridges / culverts, 2 Anganawadi building amounting to total estimated loss of Rs. 748 Lakhs (Annexure 11).

Currently, out of 16 relief centers, only 3 are active with 142 members. All other relief centers are closed. Overall the entire situation is under control with the rains reducing in intensity day by day and the preparedness of the District Administration to handle this situation.

KPM 09/8/20

**(K P Mohan Raj IAS)**
Inspector General of
Registration & Commissioner of Stamp
&
District Incharge Secretary,
Uttara Kannada district, Karwar

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 701, 7ನೇ ಮಹಡಿ
3ನೇ ಹಂತ, ಬಹುಮಹಡಿಗಳ ಕಟ್ಟಡ
ಬೆಂಗಳೂರು – 560 001
ದೂ : 080-22252352, 22032726
ಇ-ಮೇಲ್: acsplanningkar@gmail.com

ಸಂಖ್ಯೆ: ಯೋಇ/ಅಮುಕಾ/381/2020

ದಿನಾಂಕ: 24.08.2020

ಮಾನ್ಯರೇ,

ಮಾನ್ಯ ಮುಖ್ಯ ಕಾರ್ಯದರ್ಶಿಯವರ ಸೂಚನೆಯಂತೆ ಆರೋಗ್ಯ ಇಲಾಖೆಯು ವರದಿಯನ್ನು ನಿಗಧಿತ ನಮೂನೆಯಲ್ಲಿ ನೀಡಿದ್ದು, ಸದರಿ ವರದಿಯನ್ನು ಇದರೊಂದಿಗೆ ಲಗತ್ತಿಸಿ, ಅವಗಾಹನೆಗಾಗಿ ಸಲ್ಲಿಸಲಾಗಿದೆ. ಜಿಲ್ಲೆಯಲ್ಲಿ ದಿನಾಂಕ: 17.08.2020 ರಂದು 45 ವರ್ಷದವರಾದ ಶ್ರೀಮತಿ ಅಖ್ತರ್ ರವರು ಕೋವಿಡ್ ಸೋಂಕಿನಿಂದ ಮೃತಪಟ್ಟಿರುವುದಾಗಿ ತಿಳಿದುಬಂದಿರುತ್ತದೆ. ವಿವರಗಳನ್ನು ಲಗತ್ತಿಸಿದೆ. **ಸದರಿ ವಿವರಗಳನ್ನು ಡಾ: ತ್ರಿಲೋಕ್, ಭಾ.ಆ.ಸೇ., ಇವರ ಜೊತೆಗೆ ಚರ್ಚಿಸಿದಾಗ ರೋಗಿಯ Blood culture, Sputum culture ಮತ್ತು Antibiogram Sensitivity ನ್ನು ಮಾಡಿದ್ದರೆ ತಜ್ಞರ ವಿಮರ್ಶೆಯಂತೆ ಬಹುಶ: ಅವರನ್ನು ಉಳಿಸಬಹುದಾಗಿತ್ತು ಎಂದು ತಿಳಿಸಿರುತ್ತಾರೆ. ಆದರೆ ಜಿಲ್ಲೆಯಲ್ಲಿ ಸದರಿ ವ್ಯವಸ್ಥೆ ಲಭ್ಯವಿರುವುದಿಲ್ಲ**. ಆದುದರಿಂದ, ಮೆಡಿಕಲ್ ಕಾಲೇಜುಗಳು ಇಲ್ಲದೇ ಇರುವ ಜಿಲ್ಲೆಗಳಲ್ಲಿ ಇಂತಹ ಸುಧಾರಿತ (Advanced) ಪ್ರಯೋಗಾಲಯಗಳ ಅನುಕೂಲತೆಗಳನ್ನು ಒದಗಿಸಲು ಕ್ರಮವಹಿಸಿದ್ದಲ್ಲಿ ಕೆಲವು ಪ್ರಾಣಗಳನ್ನು ಉಳಿಸಬಹುದಾಗಿದೆ ಎಂದು ಶಿಫಾರಸ್ಸು ಮಾಡಿದೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,

ಶ್ರೀ ಮುನಿಶ್ ಮೌದ್ಗಿಲ್, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಸು)

DS

# Report by District In-charge Secretary

Date: 17-08-2020

A. Name of District: **CHIKKAMAGALURU**

**B.** Name of District In-charge Secretary:

**DR SHALINI RAJANEESH, I.A.S., ADDITIONAL CHIEF SECRETARY TO THE GOVERNMENT PLANNING, PROGRAMME MONITORING AND STATISTICS DEPARTMENT**

## I. Contact Tracing of Covid-19 positive persons:

1. Have sufficient no. of Contact Tracing teams formed to enable tracing of contacts of Covid-19 positive person within 24 hours?

   **Team 1 –250**
   **Team 2 - 200**

   | YES | |
   |---|---|

2. Any suggestions on improving contact tracing in the district (In not more than 50 words).

   | YES | |
   |---|---|

   **The Testing Team doing RAT should be accompanied by CT Team so that PC/SC can be taken as soon as positive results are obtained, on the spot. This information will reduce time gap in contact tracing.**

3. No. of primary and secondary contacts per COVID positive case:

| Total No of Positive Cases | Total No of Primary Contact | Total No of Secondary Contact |
|---|---|---|
| 2,272 | 14,178 | 11,469 |

4. Has the district administration done exhaustive contact tracing without leaving out any contacts?

| YES | |
|---|---|

**(For Primary and Secondary Contact of Covid-19 Positive cases from within the District)**

5. Any shortcoming notice in Contract Tracing (In not more than 50 words).

**NO**

6. Whether the Hospitals and Hostels where Primary contacts are kept in isolation are in good and hygienic conditions?

| YES | |
|---|---|

7. Whether the tests on 12th day of Primary and Secondary contacts before release from isolation are being done?

| YES | |
|---|---|

**II. <u>Containment and Buffer Zones:</u>**

1. Whether all Containment and Buffer Zones have been notified for various Covid-19 positive cases (within 14 days of them being identified)?

As on 17-08-2020

No. of Total Containment Zones in the District: 652

No. of Withdrawn Containment Zones: 194.

No. of Active Containment Zones: 458.

| YES | |
|---|---|

2. Have you checked the maps of all Containment Zone and visited few (with necessary precaution)?

| YES | |
|---|---|

Details of Containment Zone visited:

Observation (In not more than 50 words): Nil

3. Whether Incident Commander/Executive Magistrate is appointed for Containment Zone and Buffer Zone?

| YES | |
|---|---|

4. Whether there is effective surveillance for ILIs/SARI in Containment Zone and Buffer Zone?

| YES | |
|---|---|

Any improvements required / Observations (In not more than 50 words).

**Drones may be deployed for better surveillance**

| YES | |
|---|---|

## III. Surveillance and Facilities for Covid:

1. Whether any reports on samples sent for testing to the designated lab are pending in the districts?

   (Your suggestions on lab tests: (In not more than 50 words)).

| Sl No | Details | Till 16-08-2020 | 17-08-2020 | Total |
|---|---|---|---|---|
| 1 | Total Samples Collected | 26311 | 632 | 26943 |
| 2 | Total Negative Cases | 23907 | 764 | 24671 |
| 3 | Total Positive Cases | 2181 | 91 | 2272 |

**A total number of 26943 Samples have been sent till 17-08-2020 out of which 2272 Samples have received with Positive, 24671 Samples Negative and no samples report are pending.**
**Average 325 Samples are tested per day. Blood culture facility is not there in Chikkamagaluru District. We have to send the samples to HIMS Hassan.**

2. Whether Hydroxy Chloroquine Sulphate (HCQ) been given to health workers/health staff as per circular issued by HFW?

| | |
|---|---|
| **Yes** | |

3. Whether you have visited the dedicated Covid Hospitals?

| | |
|---|---|
| **Yes** | |

Observation on dedicated Covid Hospital (In not more Than 100 words)

**There are 2 dedicated Covid Hospitals.**
**1) District Hospital 2) WCD Hospital.**

**COVID HOSPITALS DETAILES**

| | | | |
|---|---|---|---|
| 01 | KSOU | CCC | 100 BEDS |
| 02 | MATERNITY | DCHC | 80 BEDS |
| 03 | PEDIATRIC | DCH | 45 BEDS (18 VENTILATORS) |
| 04 | IN PATIENT BLOCK | DCHC | 150 BEDS (10 VENTILATORS) |

**Advise to Increase the No of Ventilators to at least 10.**

4. Whether Contingency plan as per targets given by state is prepared?

| | |
|---|---|
| **Yes** | |

5. (a) Whether staff required for Contingency Plan has been identified.

| | |
|---|---|
| **Yes** | |

(b) Whether staff above is trained?

| | |
|---|---|
| **Yes** | |

**Overall Observation:**

1. Chikkamagaluru District is well prepared in terms of Planning, Logistics & Personal Protective Equipments.
2. Cloth masks have been provided to all the citizens, free of cost
3. 54 Contact Tracing teams have been tracing primary and secondary contacts under team 01 and team 02
4. Team-01 contains 250 members and Team-02 contains 200 members
5. Out of 2272 Positive cases; 1415 cases were declared cured and discharged, 49 Cases were death and remaining 808 cases were in under treatment.

**Date: 17-08-2020**

**Name of the District In-charge Secretary**
**Designation**

Mrs. Akthar, Aged 45 years she was admitted on 09.08.2020 at 09.00 PM, she was a known diabetic on irregular treatment.

Admitted with H/o Fever since 3 days

All her inflammatory markers were elevated and she was categorised as Category C patient on 12.08.2020 when her saturation dropped to 94%.

| | | |
|---|---|---|
| D-dimer | - | 5637 mg/ml |
| HbA1c | - | 12.8% |
| IL-6 | - | 5.3 pg/ml |
| LDH | - | 1500 |
| Pro calcitonin | - | 13.3 ng/ml |
| Troponin | - | 880.1 pg/ml |

She worsened and was put on NIV on 15.08.2020 Re clarified as category D patient

| | | |
|---|---|---|
| D-dimer | - | 1637.06 mg/ml |
| C Reactive | - | 41.98 mg/dl |
| Magnesium | - | 1.7 mg/dl |
| HbA1c | - | 6.17 mg/dl |
| IL – 6 | - | 5.3 pg/ml |
| LDH | - | 274 U/L |
| Ferritein | - | 163 |
| Pro calcitonin | - | 1.3 |
| Troponin-1 | - | 23ps/ml |
| CRP | - | 41.98mg/L |
| Magnesium | - | 1.7 mg/dl |

**CHIKKAMAGALURU COVID-19 REPORT DATED: 17-08-2020**

| Sl. No. | Details | Till 16-08-2020 | 17-08-2020 | Total |
|---|---|---|---|---|
| 1 | Total Positive | 2181 | 91 | **2272** |
| 2 | Total Active case | 717 | 91 | **808** |
| 3 | Total Discharge | 1355 | 80 | **1415** |
| 4 | Death Case | 47 | 2 | **49** |
| 5 | Total Samples collected | 26311 | 632 | **26943** |
| 6 | Total Negative Cases | 23907 | 764 | **24671** |

**POSITIVE CASES DETAILS AS ON 17-08-2020**

| Sl. No. | Name of the Taluk | No. of Positive Cases |
|---|---|---|
| 1 | CHIKKAMAGALUR | 997 |
| 2 | KADUR | 513 |
| 3 | TARIKERE (AJJAMPURA) | 441 |
| 4 | MUDIGERE | 103 |
| 5 | KOPPA | 91 |
| 6 | N.R.PURA | 61 |
| 7 | SHRINGERI | 66 |
| **TOTAL** | | **2272** |

**Details of Death case reported on 17-08-2020**

| Name of the deased | Reason for death |
|---|---|
| Sri Siddegowda (70 Years), Hiregowja, Chikkamagaluru | DCH co morbidity is T2DM |
| Smt Akthar (45 Years), Kote, Chikkamagaluru | DCH co morbidity is T2DM |

She was treated accordingly including Inj. Ramdesnavir and her serial x Ray's showed worsening.

CCC she had breathlessness on 11th August and Shifted to DCHC started Group B treatment

She had drop in Spo2 and was shifted DCH on 15th August

**Blood culture and sputum culture and sensitivity not done because of non-availabilities of services**

E-1571745/PD/2020

ಕರ್ನಾಟಕ ಸರ್ಕಾರ

ಸಂಖ್ಯೆ: ಯೋಇ 161 ಅಮುಕಾ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 02.08.2020

# ಟಿಪ್ಪಣಿ

ಸಿಆಸು ಇಲಾಖೆಯ ಪತ್ರ ಸಂಖ್ಯೆ: ಸಿಆಸುಇ 02 ಇಸಪ 2019, ದಿನಾಂಕ: 22.04.2020 ರನ್ವಯ, ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಜಿಲ್ಲೆಯ ವರದಿಯನ್ನು ದಿನಾಂಕ: 02.08.2020 ರಂತೆ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ

ಶ್ರೀ ಮುನಿಶ್ ಮೌದ್ಗಿಲ್, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು,
ಸಿ.ಆ.ಸು.ಇಲಾಖೆ (ಆಸು)

# Report by District In-charge Secretary

**Date: 02-08-2020**

A. Name of District: **CHIKKAMAGALURU**

**B.** Name of District In-charge Secretary: **DR SHALINI RAJANEESH, IAS., ADDITIONAL CHIEF SECRETARY TO THE GOVERNMENT PLANNING PROGRAMME MONITORING AND STATISTICS DEPARTMENT**

## I. Contact Tracing of Covid-19 positive persons:

1. Have sufficient no. of Contact Tracing teams formed to enable tracing of contacts of Covid-19 positive person within 24 hours?

**Team 1 – 48**
**Team 2 - 168**

| YES | |
|---|---|

2. Any suggestions on improving contact tracing in the district (In not more than 50 words).

The team should swing into action as soon as report of Corona Positive comes on ICMR portal, rapid antigen test & PC/SC testing should be done with the help of booth/ward committees.

| | NO |
|---|---|

3. No. of primary and secondary contacts per COVID positive case:

| Total No of Positive Cases | Total No of Primary Contact | Pending for Verification | Total Primary Contact Verified | Total No of Secondary Contact | Pending for Verification | Total Secondary Contact Verified |
|---|---|---|---|---|---|---|
| )87 | 4080 | 150 | 3930 | 2600 | 90 | 2510 |

Has the district administration done exhaustive ontact tracing without leaving out any contacts?

| YES | |
|---|---|

**Primary and Secondary Contact of Covid-19 'tive cases from within the District)**

5. Any shortcoming notice in Contract Tracing (In not more than 50 words).

**Ward/Booth committee to be involved move regularly**

6. Whether the Hospitals and Hostels where Primary contacts are kept in isolation are in good and hygienic conditions?

| **YES** | |
|---|---|

7. Whether the tests on 12th day of Primary and Secondary contacts before release from isolation are being done?

| **YES** | |
|---|---|

## II. Containment and Buffer Zones:

1. Whether all Containment and Buffer Zones have been notified for various Covid-19 positive cases (within 14 days of them being identified)?

As on 02-08-2020

No. of Total Containment Zones in the District: 517

No. of Withdraw Containment Zones: 73.

No. of Active Containment Zones: 444.

| **YES** | |
|---|---|

2. Have you checked the maps of all Containment Zone and visited few (with necessary precaution)?

| **YES** | |
|---|---|

Details of Containment Zone visited:

Observation (In not more than 50 words):

3. Whether Incident Commander/Executive Magistrate is appointed for Containment Zone and Buffer Zone?

| YES | |
|---|---|

4. Whether there is effective surveillance for ILIs/SARI in Containment Zone and Buffer Zone?

| YES | |
|---|---|

Any improvements required / Observations (In not more than 50 words).

| | NO |
|---|---|

## III. Surveillance and Facilities for Covid:

1. Whether any reports on samples sent for testing to the designated lab are pending in the districts?

(Your suggestions on lab tests: (In not more than 50 words)).

| Sl No | Details | Till 01-08-2020 | 02-08-2020 | Total |
|---|---|---|---|---|
| 1 | Total Samples Collected | 19589 | 232 | 19821 |
| 2 | Total Negative Cases | 18257 | 199 | 18456 |
| 3 | Total Positive Cases | 1046 | 41 | 1087 |

**A total number of 19821 Samples have been sent till 02-08-2020 out of which 1087 Samples have received with Positive, 18456 Samples Negative and remaining 278 samples report are pending.** for less than 24 hours.

2. Whether Hydroxy Chloroquine Sulphate (HCQ) been given to health workers/health staff as per circular issued by HFW?

| Yes | |
|---|---|

3. Whether you have visited the dedicated Covid Hospitals?

| Yes | |
|---|---|

Observation on dedicated Covid Hospital (In not more Than 100 words)

**Advise to Increase the No of Ventilators to atleast 10.**

4. Whether Contingency plan as per targets given by state is prepared?

| Yes | |
|---|---|

5. (a) Whether staff required for Contingency Plan has been identified.

| Yes | |
|---|---|

(b) Whether staff above is trained?

| Yes | |
|---|---|

**Overall Observation:**

1. Chikkamagaluru District is well prepared in terms of Planning, Logistics & Personal Protective Equipments.
2. Cloth mask have been provided to the citizen at free of cost
3. 54 Contact Tracing teams have been tracing primary and secondary contacts under team 01 and team 02
4. Team-01 contains 48 members and Team-02 contains 168 members
5. Out of 1087 Positive cases; 451 cases were declared cured and discharged, 22 Cases were death and remaining 614 cases were in under treatment.

**Date: 02-08-2020**

Shali

**Name of the District In-charge Secretary**
**Designation**

**Dr. Shalini Rajneesh, I.A.S.,**
Additional Chief Secretary to Government
Planning, Programme, Monitoring,
and Statistics Department

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೀದರ

ಸಂಖ್ಯೆ:ಕೋವಿಡ್-19/ಸಭೆ/2020-21 ದಿನಾಂಕ:13/08/2020

ಡಾ॥ ರಿಚರ್ಡ್ ವಿನ್ಸೆಂಟ್ ಡಿಸೋಜಾ, ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 13/08/2020 ರಂದು ಗುರುವಾರ ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಮುಂಜಾನೆ 10:00 ಗಂಟೆಗೆ ಕೋವಿಡ್-19 ಕುರಿತು ಜಿಲ್ಲಾ ಮತ್ತು ತಾಲೂಕಾ ಮಟ್ಟದ ಅಧಿಕಾರಿಗಳಿಗಾಗಿ ಏರ್ಪಡಿಸಿದ ಸಭೆಯ ನಡುವಳಿಗಳು:-

ಉಪಸ್ಥಿತಿ:-

1. ಡಾ॥ ರಿಚರ್ಡ್ ವಿನ್ಸೆಂಟ್ ಡಿಸೋಜಾ, ಭಾ.ಆ.ಸೇ. ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
2. ಶ್ರೀ ರಾಮಚಂದ್ರನ್. ಆರ್. ಜಿಲ್ಲಾಧಿಕಾರಿಗಳು, ಬೀದರ
3. ಶ್ರೀ ಡಿ.ಎಲ್. ನಾಗೇಶ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ಬೀದರ
4. ಶ್ರೀ ಗ್ಯಾನೇಂದ್ರಕುಮಾರ ಗಂಗವಾರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ.,ಬೀದರ
5. ಶ್ರೀ ರುದ್ರೇಶ ಗಾಳಿ, ಅಪರ ಜಿಲ್ಲಾಧಿಕಾರಿಗಳು, ಬೀದರ.
6. ಶ್ರೀ ಅಕ್ಷಯ ಶ್ರೀಧರ, ಸಹಾಯಕ ಆಯುಕ್ತರು, ಬೀದರ
7. ಶ್ರೀ ಭಂವರಸಿಂಗ್ ಮೀನಾ, ಸಹಾಯಕ ಆಯುಕ್ತರು, ಬಸವಕಲ್ಯಾಣ
8. ಶ್ರೀ ಬಿ. ಬಸಪ್ಪ, ನಗರ ಸಭೆ ಆಯುಕ್ತರು, ಬೀದರ.
9. ಡಾ॥ ವಿ.ಜಿ. ರೆಡ್ಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬೀದರ,
10. ಡಾ॥ ಶಿವಕುಮಾರ, ಬ್ರಿಮ್ಸ ನಿರ್ದೇಶಕರು, ಬೀದರ
11. ಡಾ॥ ರತಿಕಾಂತ ಸ್ವಾಮಿ, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಬೀದರ
12. ಡಾ॥ ವಿಜಯಕುಮಾರ ಅಂತಪ್ಪಮವರ್, ವೈದ್ಯಕೀಯ ಅಧೀಕ್ಷಕರು ಬೀದರ
13. ಡಾ॥ ಲಕ್ಕಾ ಕೃಷ್ಣಾರೆಡ್ಡಿ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಬೀದರ.
14. ಇತರರು.

ಡಾ॥ ರಿಚರ್ಡ್ ವಿನ್ಸೆಂಟ್ ಡಿಸೋಜಾ, ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರನ್ನು ಇಂದಿನ ಸಭೆಗೆ ಮಾನ್ಯ ಜಿಲ್ಲಾಧಿಕಾರಿಗಳು ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು. ಅದೇ ರೀತಿ ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ ಸಿಬ್ಬಂದಿ ವರ್ಗದವರನ್ನು ಸಭೆಗೆ ಸ್ವಾಗತಿಸಿದರು.ಕೋವಿಡ್-19 ದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಅಧಿಕಾರಿಗಳ ಪರಿಚಯ ಮಾಡಿಕೊಳ್ಳಲಾಯಿತು.

ಚರ್ಚಿಸಿದ ವಿಷಯಗಳು ಮತ್ತು ಸೂಚನೆಗಳು:-

1)ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಮತ್ತು ನಿರ್ವಹಣೆಗಾಗಿ ಸಾನ್ಸ ಆಸ್ಪತ್ರೆ ಸಪನಾ ಇಂಟರನ್ಯಾಶನಲ್ ಕೇಂದ್ರ ಬಸ್ ನಿಲ್ದಾಣ ಹತ್ತಿರ ಬೀದರ (ಡಿ.ಸಿ.ಹೆಚ್.ಸಿ), ವಾಲಿಶ್ರೀ ಆಸ್ಪತ್ರೆ ಅಕ್ಕಮಹಾದೇವಿ ನಗರ ಬೀದರ (ಡಿ.ಸಿ.ಹೆಚ್.ಸಿ), ಬಿ.ಬಿ.ಎಸ್. ಆಸ್ಪತ್ರೆ ಜಿಲ್ಲಾ ಪಂಚಾಯತ ಹತ್ತಿರ ಬೀದರ ಇವುಗಳಿಗೆ ಅನುಮತಿ ನೀಡಲಾಗಿದೆಯೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರಿಗೆ ಮಾಹಿತಿ ಜಿಲ್ಲಾಧಿಕಾರಿಗಳು ನೀಡಿದರು.

2) ಬ್ರಿಮ್ಸ ಆಸ್ಪತ್ರೆಯಲ್ಲಿ ಅಗ್ನಿ ನಿವಾರಕವು ಬ್ಲಾಕ ಆಗಿರುವ ಬಗ್ಗೆ ದೂರುಗಳು ಬಂದಿವೆ ಏನೂ ಕ್ರಮ ಕೈಕೊಳ್ಳಲಾಗಿದೆಯೆಂದು ಬ್ರಿಮ್ಸ ನಿರ್ದೇಶಕರನ್ನು ವಿಚಾರಿಸಲಾಯಿತು ಹಾಗೂ ಈ ಬಗ್ಗೆ ಪರಿಶೀಲಿಸಿ ತಕ್ಷಣ ಸುವ್ಯವಸ್ಥೆಯಲ್ಲಿಡಲು ನಿರ್ದೇಶನ ನೀಡಲಾಗಿದೆಯೆಂದು ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು. ಇತ್ತೀಚಿಗೆ ಒಂದೆರಡು

ಆಸ್ಪತ್ರೆಗಳಲ್ಲಿ ಅಗ್ನಿ ಅವಘಡ ಸಂಭವಿಸಿದ್ದನ್ನು ಮಾಧ್ಯಮಗಳಲ್ಲಿ ಗಮನಿಸಿದ್ದು, ಈ ರೀತಿ ಆಗದಂತೆ ಎಚ್ಚರಿಕೆವಹಿಸಲು ಬ್ರಿಮ್ಸ್ ನಿರ್ದೇಶಕರು/ ಡಿ.ಎಚ್.ಓ. ರವರು ಸೂಕ್ತಕ್ರಮವಹಿಸಲು ಸೂಚಿಸಲಾಯಿತು.

3) ಬೀದರ ಜಿಲ್ಲೆಯಲ್ಲಿ ಕೋವಿಡ-19 ನಿಯಂತ್ರಣಕ್ಕಾಗಿ ಎಲ್ಲರೂ ಸರಿಯಾಗಿ ಕಾರ್ಯನಿರ್ವಹಿಸುತ್ತಿದ್ದೀರಿ , ದಿನಾಲು ಇ-ಮೇಲ್ ಮತ್ತು ವಾಟ್ಸ ಅಪಗಳನ್ನು ಚೆಕ್ ಮಾಡಿ ಮಾರ್ಗಸೂಚಿಗಳನ್ನು ಮತ್ತು ಆದೇಶಗಳನ್ನು ಪಾಲನೆ ಮಾಡಬೇಕೆಂದು ಮತ್ತು ಸ್ಯಾಂಪಲಗಳ ಹೆಚ್ಚಿಗೆ (ಕಲೆಕ್ಷನ) ಸಂಗ್ರಹಣೆ ಮಾಡಿ ಸಂಗ್ರಹಣೆ ಮಾಡಿದ ದಿನದಂದೆ ಲ್ಯಾಬ ಪರೀಕ್ಷೆಗೆ ಕಳುಹಿಸಬೇಕೆಂದು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

4) ರ್‍ಯಾಟ ಮತ್ತು ಆರ್.ಟಿ.ಪಿ.ಸಿ.ಆರ್. ಕಲೆಕ್ಷನ್ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮಾಹಿತಿ ನೀಡಿದರು ಹಾಗೂ ವೈಯಕ್ತಿವಾದ ಲೈನ್ ಲಿಸ್ಟ ಬಗ್ಗೆ ಮತ್ತು ಪೋರ್ಟಲದಲ್ಲಿ ಎಂಟ್ರಿ ಆಗಿರುವ ಬಗ್ಗೆ ಜಿಲ್ಲಾಧಿಕಾರಿಗಳು ಮಾಹಿತಿ ಕೇಳಿದಾಗ ಡಾ: ರಾಜಶೇಖರ ಪಾಟೀಲ ಡಿ.ಎಲ್.ಓ.ರವರು ಮಾತನಾಡಿ ಲೈನಲಿಸ್ಟ ಇದೆ ಹಾಗೂ ಭಾಲ್ಕಿ ತಾಲೂಕಿನದ್ದು ಒಟ್ಟು 147 ಪೋರ್ಟಲದಲ್ಲಿ ಎಂಟ್ರಿ ಪೂರ್ಣ ಆಗಿದೆ ಮತ್ತು 200 ಪೆಂಡಿಂಗ ಇರುತ್ತದೆ ಎಂದರು. ಇಂದು ಸಂಪೂರ್ಣವಾಗಿ ಪೋರ್ಟಲದಲ್ಲಿ ಎಂಟ್ರಿ ಆಗಬೇಕೆಂದು ಸೂಚನೆ ನೀಡಲಾಯಿತು.

5)ಡಾ:ಶಿವಶಂಕರ ಕು.ಕ.ಅಧಿಕಾರಿಗಳು ಹಾಗೂ ಪ್ರೈಮರಿ ಕಾಂಟ್ಯಾಕ್ಟ ಟ್ರೇಸಿಂಗ ಅಧಿಕಾರಿಗಳು ಒಟ್ಟು 23201 ಪಿ.ಸಿ. ಇರುವುದಾಗಿ ಮಾಹಿತಿ ನೀಡಿದರು. ಅದೇ ರೀತಿ ಡಾ: ಗೌತಮ ಅರಳಿ ಸೆಕೆಂಡರಿ ಕಾಂಟ್ಯಾಕ್ಟ ಟ್ರೇಸಿಂಗ ಅಧಿಕಾರಿಗಳು 21000 ಎಸ್.ಸಿ. ಇರುವುದಾಗಿ ಮಾಹಿತಿ ನೀಡಿದರು.

6)ಕಂಟೈನ್ಮೆಂಟ್ ಝೋನದಲ್ಲಿ ರ್‍ಯಾಟ ರೀಸರ್ವೆ ಮಾಡಲಾಗುತ್ತಿದೆ ಎಂದು ತಹಸೀಲ್ದಾರ ಬೀದರ ಇವರು ತಿಳಿಸಿದಾಗ ಇದರಲ್ಲಿ ಎಷ್ಟು ಪಾಜಿಟಿವ ಬಂದಿವೆಯೆಂದು ವಿಚಾರಿಸಿದಾಗ ಪರಿಶೀಲಿಸಿ ಸಲ್ಲಿಸುವುದಾಗಿ ಕೋರಿದರು. ಐ.ಎಲ್.ಐ. ಮತ್ತು ಸಾರಿ ಸರ್ವೆ ಮಾಡಿ ಮಾದರಿಗಳನ್ನು ಸಂಗ್ರಹಣೆ ಮಾಡಿ ಪರೀಕ್ಷೆಗೆ ಒಳಪಡಿಸುವುದು ಮುಖ್ಯವಾಗಿದೆ ಎಂದು ತಿಳಿಸಿ ಈ ಬಗ್ಗೆ ಕ್ರಮವಹಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

7)ಡಾ॥ ಮಹೇಶ ತಂಡೋರೆ ಬ್ರಿಮ್ಸ್ ನೋಡಲ ಅಧಿಕಾರಿಯವರು 114 ಪ್ರಕರಣಗಳು, ಸಾರಿ ಪ್ರಕರಣಗಳು ಪ್ರತಿದಿನ ಸುಮಾರು 10-15ರ ವರೆಗೆ, ಐ.ಸಿ.ಯು. ನಲ್ಲಿ 20 ರೋಗಿ, -ಎನ್.ಐ.ವಿ. ಬಗ್ಗೆ ಮಾಹಿತಿ ನೀಡಿದರು.

8)ರೋಗಿ ಒಬ್ಬರ ಕೈಗಳನ್ನು ಕಟ್ಟಿ ಚಿಕಿತ್ಸೆ ನೀಡಿರುವ ಬಗ್ಗೆ ದೂರು ಇದ್ದು, ಇದರ ಬಗ್ಗೆ ವಿವರವಾದ ಹೇಳಿಕೆ /ಕಾರಣವನ್ನು ಸಲ್ಲಿಸಲು ಜಿಲ್ಲಾಧಿಕಾರಿಗಳು ಬ್ರಿಮ್ಸ್ ನಿರ್ದೇಶಕರಿಗೆ ಸೂಚಿಸಿದರು.

9)ರಾಜ್ಯಮಟ್ಟದ ಪ್ರಗತಿ ವರದಿಗಳನ್ನು ಗಮನಿಸಿದಾಗ ಕೆಲವೊಂದು ವಿಷಯಗಳಲ್ಲಿ ನಮ್ಮ ಜಿಲ್ಲೆ ಕೊನೆಯ ಸ್ಥಾನದಲ್ಲಿ ಇರುವ ಅಂಶವನ್ನು ತಿಳಿದ ನಂತರ ಪ್ರಗತಿ ಸಾಧಿಸಲು ಕ್ರಮಕೈಗೊಳ್ಳುತ್ತೀರಿ ಆದರೆ ಅದಕಿಂತ ಮುಂಜಿತವಾಗಿ ಪ್ರಗತಿ ಪರಿಶೀಲನೆ ಮಾಡಿ ಗುರಿ ಸಾಧಿಸಲು ಕ್ರಮವಹಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಕೋವಿಡ್-19ಗೆ ಸಂಬಂಧಿಸಿದ ಎಲ್ಲಾ ಅಪ್ಲಿಕೇಶನ್ (ಆಪ್ಸ್)ಗಳ ಬಗ್ಗೆ ಮತ್ತು ಅದರಲ್ಲಿ ದೈನಂದಿನ ಮಾಹಿತಿಯನ್ನು / ಅಂಕಿ ಅಂಶಗಳನ್ನು ಅಪಡೇಟ್ ಮಾಡುವ ಬಗ್ಗೆ ಸಂಬಂಧ ಪಟ್ಟ ನೋಡಲ್ ಅಧಿಕಾರಿಗಳು ದಿನನಿತ್ಯ ಮಾನಿಟರ್ ಮಾಡಲು ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

10)ಕೋವಿಡ್-19 ಕುರಿತು ಮಾನ್ಯ ಮುಖ್ಯ ಮಂತ್ರಿಗಳ ಫೋಟೊ ಇರುವ ಪೋಸ್ಟರ್ ಬ್ಯಾನರಗಳನ್ನು ಮುದ್ರಿಸಿ ಮನೆ ಮನೆಗೆ ಮುಟ್ಟಿಸುವ ಕಾರ್ಯದ ಬಗ್ಗೆ ಕೇಳಿದಾಗ ಡಿ.ಎಚ್.ಓ. ರವರು ಮಾತನಾಡಿ ಮುದ್ರಿಸುವ ಕಾರ್ಯಪೂರ್ಣಗೊಂಡಿದು ಮನೆ ಮನೆಗೆ ಮುಟ್ಟಿಸುವ ಪ್ರಕ್ರಿಯೇ ಜಾರಿಯಲ್ಲಿದೆ ಎಂದು ತಿಳಿಸಿದರು.

11)ಉಚಿತ ಕರೆ ಆರೋಗ್ಯ ಸಹಾಯವಾಣಿ ಚಾಲನೆಯಲ್ಲಿದ್ದು ಸಾರ್ವಜನಿಕರು ಶಂಕಿತ ರೋಗ ಲಕ್ಷಣಗಳಿದ್ದಲ್ಲಿ ಮತ್ತು ಮಾಹಿತಿ ಪಡೆಯುವುದಕ್ಕಾಗಿ ಸಾರ್ವಜನಿಕರಿಗೆ ತಿಳಿಸಲಾಗಿದೆ ಎಂದು ತಿಳಿಸಿದರು.

12)ಆಶಾ ಪೆಮೆಂಟ್ ಬಗ್ಗೆ ಜಿಲ್ಲಾಧಿಕಾರಿಗಳು ವಿಚಾರಿಸಿದಾಗ ಜಿಲ್ಲಾ ಆರ್.ಸಿ.ಎಚ್.ಓ ರವರು ಮಾತನಾಡಿ ಆಶಾ ರವರು ಸ್ಟ್ರೈಕ್‌ದಿಂದ ಸೇವೆಗೆ ಹಾಜರಾಗಿರುತ್ತಾರೆ. ನಿಯಮಾನುಸಾರ ಪೆಮೆಂಟ್ ಮಾಡುವ ಬಗ್ಗೆ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

13)ಬ್ರಿಮ್ಸ್ ಆಸ್ಪತ್ರೆಯಲ್ಲಿ ಎಲ್ಲಾ ವೆಂಟಿಲೇಟರಗಳಿಗೆ ಬ್ಯಾಟ್ರಿ ಬ್ಯಾಕಪ್ ಇದೆಯೇ ಎಂದು ಹಾಗೂ ಚಾರ್ಜ ಮಾಡುವ ಬಗ್ಗೆ ವಿಚಾರಿಸಿದಾಗ ಬ್ರಿಮ್ಸ್ ನಿರ್ದೇಶಕರು ಮಾತನಾಡಿ ವೆಂಟಿಲೇಟರಗಳಿಗೆ ಬ್ಯಾಟ್ರಿ ಬ್ಯಾಕಪ್ ಇದೆ ಹಾಗೂ ಇರುತ್ತದೆ. ಹಾಗೂ ಬ್ಯಾಟ್ರಿ ಪೂರ್ಣ ಚಾರ್ಜ ಆದನಂತರ ಒಟ್ಟು 3 ಗಂಟೆ ನಡೆಯುತ್ತದೆ ಎಂದು ತಿಳಿಸಿದರು ಹಾಗೂ ಇದನು ಬೈಯೊಮೇಡಿಕಲ್ ಇಂಜೀನಿಯರ ಮಾಡುತ್ತಾರೆ ಎಂದು ಮಾಹಿತಿ ನೀಡಿದರು.

14)ಡಾ॥ ವಿ.ಜಿ. ರೆಡ್ಡಿ ಡಿ.ಎಚ್.ಓ. – ಮಾನ್ಯ ಪ್ರಧಾನ ಮಂತ್ರಿ ಕೇರ್ ಫಂಡ್‌ನಿಂದ ಜಿಲ್ಲೆಗೆ ಒಟ್ಟು 16 ವೆಂಟಿಲೇಟರಗಳು ಬಂದಿವೆ ಅವುಗಳನ್ನು ಪ್ರತಿ ತಾಲ್ಲೂಕಾಕ್ಕೆ 2 ರಂತೆ ಒದಗಿಸಿದ್ದು ಇನ್ನು 6 ಉಳಿಯುತ್ತವೆ ಅವುಗಳನ್ನು ಬೇರೆ ಕಡೆಗೆ ನೀಡುವ ಬಗ್ಗೆ ಮಾರ್ಗದರ್ಶನ ಕೋರಿದಾಗ, ಈಗಾಗಲೇ 2 ವೆಂಟಿಲೇಟರಗಳು ಹೊಂದಿರುವ ಆಸ್ಪತ್ರೆಗೆ ನೀಡುವ ಅವಶ್ಯಕತೆ ಇಲ್ಲ ಹಾಗೂ ಇದನ್ನು ಪರಿಶೀಲಿಸಿ ಬ್ರಿಮ್ಸ್ ಆಸ್ಪತ್ರೆಗೆ ನೀಡಲು ಹಾಗೂ ವೆಂಟಿಲೇಟರಗಳು ಇನ್ಸ್ಟಾಲೇಷನ್ ಮಾಡಿ ಕಾರ್ಯರೂಪದಲ್ಲಿ ಇರುವ ಬಗ್ಗೆ ಮಾಹಿತಿ ಸಲ್ಲಿಸಲು ಬ್ರಿಮ್ಸ್ ನಿರ್ದೇಶಕರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

15) ಬ್ರಿಮ್ಸ್ ಆಸ್ಪತ್ರೆಯಲ್ಲಿ ಕೋವಿಡ್–19 ರೋಗಿಗಳಿಗೆ ಒದಗಿಸುತ್ತಿರುವ ಆಹಾರದ ಬಗ್ಗೆ ಸಕಾರಾತ್ಮಕ (ಪಾಜಿಟಿವ್) ವರದಿಯೊಂದನ್ನು ಮಾಡಲು ವಾರ್ತಾ ಅಧಿಕಾರಿಗೆ ಸೂಚನೆ ನೀಡಲಾಯಿತು. ಆಹಾರ ಸುರಕ್ಷತ ಅಧಿಕಾರಿಗಳು ಕೋವಿಡ್–19 ರೋಗಿಗಳಿಗೆ ನೀಡುವ ಆಹಾರ ತಯಾರಿಸುವ ಅಡುಗೆ ಕೋಣೆಗಳನ್ನು ಪರಿಶೀಲಿಸಿ ಮತ್ತು ವರದಿಯನ್ನು ಸಲ್ಲಿಸುವುದು. (Food Safty officer shall check all Kitchens Preparing for Covid-19 Patients and Report ) ಹಾಗೂ ಬ್ರಿಮ್ಸ್ ನಿರ್ದೇಶಕರು, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಎಮ್.ಎಸ್. , ಡಿ.ಎಚ್.ಓ. , ಡಿ.ಎಸ್.ಓ, ರವರು ಸಹಕಾರ ಸಹಯೋಗದಿಂದ ಕೂಡಿ ಕೋವಿಡ್–19 ನಿಯಂತ್ರಿಸಲು ಮೇಲ್ವಿಚಾರಣೆ ಮತ್ತು ಮಾನಿಟರಿಂಗ್ ಮಾಡಿ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ನಿಯಮಾನುಸಾರ ಸೂಕ್ತಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಹಾಗೂ ಈ ವಿಷಯದಲ್ಲಿ ಏನಾದರೂ ಬೇಡಿಕೆ (ರಿಕ್ವಾಯರಮೆಂಟ್ ) ಇದ್ದಲ್ಲಿ ಸಲ್ಲಿಸಲು  ಸಹ ತಿಳಿಸಿದರು ಅದೇ ರೀತಿ ಎಲ್ಲಾ ಆರೋಗ್ಯ ಕಾರ್ಯಕ್ರಮಗಳ ಪ್ರಗತಿಯ ಕಡೆಗೆ ವಿಶೇಷ ಗಮನ ನೀಡಲು ಸಹ ತಿಳಿಸಿದರು.

16) ಕೋವಿಡ್–19 ರೋಗಿಗಳಿಗಾಗಿ ಉಪಯೋಗಿಸುವ ರೆಮ್‌ಡೆಸಿವೆರ್,ಪ್ಲಾವಿಪಿರವಿಲ್ ಇನ್ನಿತರ ಪ್ರಮುಖ ಔಷಧಿಗಳ ಸ್ಟಾಕ್ ಬಗ್ಗೆ ಮತ್ತು ಬೇಡಿಕೆ (ರಿಕ್ವಾಯರಮೆಂಟ್) ಸಲ್ಲಿಸಲು ಜಿಲ್ಲಾ ಶಸ್ತ್ರ ಚಿಕಿತ್ಸಕರಿಗೆ ಸೂಚಿಸಿದರು ಇದನ್ನು ಸೂಕ್ಷ್ಮವಾಗಿ ಪರಿಗಣಿಸುವುದು. ಅದೇ ರೀತಿ ಔಷಧಿಗಳ ಲೈನ್ ಲಿಸ್ಟ್ ಮಾಡಲು ಸಿ.ಇ.ಓ. ರವರಿಗೆ ಸೂಚಿಸಿದರು.

17) ರೀ ಏಜೆಂಟ್‌ಗಳು ಬ್ರಿಮ್ಸ್ ಆಸ್ಪತ್ರೆಯಲ್ಲಿ ಇಲ್ಲದೇ ಇರುವುದು ಇಂದಿನ ಚರ್ಚೆಯಲ್ಲಿ ತಿಳಿಸಲಾಗಿದೆ. ಆದರೆ ಮುಂಚೆಯೇ ಇದರ ಬಗ್ಗೆ ಈ ವಿಷಯ ಕುರಿತು ಬ್ರಿಮ್ಸ ಆಸ್ಪತ್ರೆಯಿಂದ ಸಲ್ಲಿಸಬೇಕಾಗಿತ್ತು, ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸುವುದು ಮತ್ತು ಕೂಡಲೇ ಲಭ್ಯ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳು ಸೂಚಿಸಿದರು.

ಬ್ರಿಮ್ಸ್ ನಿರ್ದೇಶಕರಿಂದ ವೈದ್ಯಕೀಯ ತನಿಖೆ/ ಚಿಕಿತ್ಸೆ ಶಿಷ್ಟಾಚಾರ ಪಾಲಿಸಲು ಹಾಗೂ ಅಲಾರಮ್ ಮಾರ್ಕ ಇತರೆ ಅವಶ್ಯಕ ಕೆಲಸಗಳನ್ನು ನಿರ್ವಹಿಸಲು ಜಿಲ್ಲಾಧಿಕಾರಿಗಳು ನಿರ್ದೇಶಿಸಿರುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

18)ಶವಗಳನ್ನು ಸಾಗಿಸುವ ಬಗ್ಗೆ ಚರ್ಚಿಸಲಾಗಿ ಶ್ರದ್ಧಾಂಜಲಿ ವಾಹನದ ಮೂಲಕ ಶವವನ್ನು ಸಾಗಿಸಲಾಗುತ್ತಿದೆ ಮತ್ತು ಇದು ಜಿಲ್ಲಾ ಆಸ್ಪತ್ರೆಯಲ್ಲಿ ನಿಂತಿರುತ್ತದೆ ಎಂದು ಡಿ.ಎಚ್.ಓ. ರವರು ತಿಳಿಸಿದಾಗ ಒಂದಕ್ಕಿಂತ ಹೆಚ್ಚಿಗೆ ಶವಗಳು ಇದ್ದಾಗ, ಹೇಗೆ ಮಾಡುತ್ತಿದ್ದಿರಿ ಎಂದು ವಿಚಾರಿಸಿದಾಗ ರೇಗುಲರ್ ಅಂಬುಲೇನ್ಸ್ ಮೂಲಕ ಶವವನ್ನು ಸಾಗಿಸಲಾಗುತ್ತಿದೆ. ಹಾಗೂ ನಂತರ ಸೋಂಕು ರಹಿತವನ್ನಾಗಿ ಮಾಡಲಾಗುತ್ತಿದೆ ಎಂದು ಜಿಲ್ಲಾ ಶಸ್ತ್ರ ಚಿಕಿತ್ಸಕರು ತಿಳಿಸಿದರು.

19)ಸಿಬ್ಬಂದಿ ನೇಮಕಾತಿ ಬಗ್ಗೆ :- ಫಾರ್ಮಾಸಿಸ್ಟ್-10, ಲ್ಯಾಬ್ ಟೆಕ್ನಿಷಿಯನ್-02 , ಮತ್ತು ಶುಶ್ರೂಷಕಿ- , ಗ್ರೂಪ ಡಿ-60 ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ ಎಂದು ಡಿ.ಎಚ್.ಓ ರವರು ತಿಳಿಸಿದರು ಹಾಗೂ ಮೊಬೈಲ ತಂಡಕ್ಕಾಗಿ ಪ್ರಸ್ತಾವನೆಯನ್ನು ರಾಜ್ಯ ಮಟ್ಟಕ್ಕೆ ಕಳುಹಿಸಲಾಗಿದೆ ಎಂದರು.

20)ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮಾರ್ಗಸೂಚಿಗಳಂತೆ ಕೋವಿಡ್-19 ರೋಗಿಗಳ ಅಟೆಂಡರ್ಸಗಳಿಗಾಗಿ ಕೋಣೆಯ ವ್ಯವಸ್ಥೆ ಮಾಡಲು ಈ ಮುಂಚೆ ತಿಳಿಸಲಾಗಿತ್ತು. ಆಸ್ಪತ್ರೆ ಆವರಣದಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾ ದೂರವಾಣಿ ವ್ಯವಸ್ಥೆ ಮಾಡುವುದು.

21)ಪ್ರತಿ ತಿಂಗಳು ಮೋಬಿಲಿಟಿ ಪೆಮೆಂಟಗಳು ತಪ್ಪದೇ ಆಗಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ತಹಸೀಲ್ದಾರ, ಇ.ಓ. ,ಎ.ಡಿ. , ರವರು ಕೂಡಿಕೊಂಡು ಪರಿಶೀಲಿಸಿ 17 ನೇ ಅಗಸ್ಟ್-2020ರ ಒಳಗಾಗಿ ಎಲ್ಲಾ ಬಿಲ್ಲುಗಳನ್ನು ಪಾವತಿಸುವ ಬಗ್ಗೆ ವರದಿ ಸಲ್ಲಿಸುವುದು ಹಾಗೂ ಕೋವಿಡ್-19 ಬಿಲ್ಲು ಪೆಡಿಂಗ್ ಇಡಕೂಡದೆಂದು ಕಟ್ಟುನಿಟ್ಟಾಗಿ ಸೂಚನೆ ನೀಡಲಾಯಿತು.

22)ಡಾ॥ ಇಂದುಮತಿ ಪಾಟೀಲ ಪ್ರಾಥಮಿಕ ಸಂಪರ್ಕ ಪತ್ತೆ ಹಚ್ಚುವಿಕೆ ನೋಡಲ ಅಧಿಕಾರಿಗಳು ಹಾಗೂ ಡಾ॥ ಗೌತಮ ಅರಳಿ ದ್ವಿತಿಯ ಸಂಪರ್ಕ ಪತ್ತೆ ಹಚ್ಚುವಿಕೆ ನೋಡಲ ಅಧಿಕಾರಿಗಳು ಮತ್ತು ಡಾ॥ ದೀಪಾ ಖಂಡ್ರೆ ಕೆ.ಪಿ.ಎಮ್.ಇ. ಕೋವಿಡ್ ನೋಡಲ ಅಧಿಕಾರಿಗಳಿಗೆ ವಹಿಸಿದ ಕಾರ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದಕ್ಕಾಗಿ ಅಭಿನಂದಿಸಿ ಚಪ್ಪಾಳೆ ತಟ್ಟಲಾಯಿತು.

ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

(ಡಾ॥ ರಿಚರ್ಡ್ ವಿನ್ಸೆಂಟ್ ಡಿಸೋಜಾ,)
ಭಾ.ಆ.ಸೇ.
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ಬೀದರ

ಪ್ರತಿಗಳು:-

1. ಜಿಲ್ಲಾಧಿಕಾರಿಗಳು ಬೀದರ
2. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೀದರ.

3. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ಬೀದರ
4. ಸಹಾಯಕ ಆಯುಕ್ತರು ಬೀದರ ಮತ್ತು ಬಸವಕಲ್ಯಾಣ
5. ತಹಸೀಲ್ದಾರರು, ಬೀದರ ,ಭಾಲ್ಕಿ, ಹುಮನಾಬಾದ, ಔರಾದ(ಬಿ), ಬಸವಕಲ್ಯಾಣ, ಚಿಟಗುಪ್ಪಾ ಮತ್ತು ಕಮಲನಗರ.
6. ಕಾರ್ಯನಿರ್ವಹಣಾ ಅಧಿಕಾರಿಗಳು ತಾಲ್ಲೂಕಾ ಪಂಚಾಯತ, ಬೀದರ ,ಭಾಲ್ಕಿ, ಹುಮನಾಬಾದ, ಔರಾದ(ಬಿ), ಬಸವಕಲ್ಯಾಣ,
7. ಪೌರಾಯುಕ್ತರು ನಗರ ಸಭೆ ಬೀದರ, ಬಸವಕಲ್ಯಾಣ
8. ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಬೀದರ
9. ವೈದ್ಯಕೀಯ ಅಧೀಕ್ಷಕರು, ಬೀದರ ವೈ.ವಿ.ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆ ಬೀದರ.
10. ಸಹಾಯಕ ನಿರ್ದೇಶಕರು , ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೀದರ
11. ಮುಖ್ಯ ಅಧಿಕಾರಿಗಳು, ಪುರಸಭೆ ಭಾಲ್ಕಿ, ಹುಮನಾಬಾದ, ಚಿಟಗುಪ್ಪಾ,
12. ಮುಖ್ಯ ಅಧಿಕಾರಿಗಳು ಪಟ್ಟಣ ಪಂಚಾಯತ ಔರಾದ
13. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಬೀದರ
14. ಜಿಲ್ಲಾ ಸರ್ವೇಕ್ಷಣಾಕಾರಿಗಳು ಬೀದರ.
15. ಬೀದರ ಜಿಲ್ಲೆಯ ಎಲ್ಲಾ ತಾಲ್ಲೂಕಾ ಆರೋಗ್ಯ ಅಧಿಕಾರಿಗಳು,
16. ಎಲ್ಲಾ ಮುಖ್ಯ ವೈದ್ಯಾಧಿಕಾರಿಗಳು ತಾ.ಸಾ.ಆಸ್ಪತ್ರೆಗಳು
17. ಜಿಲ್ಲಾ ಆರೋಗ್ಯ ಮತ್ತು ಕು.ಕ.ಅ.ಕಛೇರಿ ಐ.ಇ.ಸಿ. ವಿಭಾಗ.
18. ಎಲ್ಲಾ ಆರೋಗ್ಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು

**ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:29.08.2020 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೊರೋನಾ ವೈರಸ್ ಸೋಂಕು ನಿಯಂತ್ರಣದ ಸಂಬಂಧ ನಡೆದ ಪ್ರಗತಿ ಪರಿಶೀಲನಾ ಸಭೆಯ ಸಭಾ ನಡವಳಿ.**

****

ದಾವಣಗೆರೆ ಜಿಲ್ಲಾಧಿಕಾರಿಗಳು ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು ಹಾಗೂ ಸಭೆಯನ್ನು ಕರೆದ ಉದ್ದೇಶವನ್ನು ಸಭೆಯಲ್ಲಿ ಪ್ರಸ್ತಾಪಿಸುತ್ತಾ, ಜಿಲ್ಲೆಯಲ್ಲಿ ಕೋರೋನಾ ಸೋಂಕು ಹೆಚ್ಚುತ್ತಿರುವುದರಿಂದ ಈವರೆವಿಗೂ ಜಿಲ್ಲೆಯಲ್ಲಿ ಕೋವಿಡ್-19 ನಿಯಂತ್ರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಕೈಗೊಳ್ಳಲಾಗುತ್ತಿರುವ ಕ್ರಮಗಳ ಕುರಿತು ಸಭೆಗೆ ಮಾಹಿತಿ ನೀಡುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾ ಆರೋಗ್ಯ ಅಧಿಕಾರಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಈ ದಿನದವರೆವಿಗೂ ಒಟ್ಟು 8526 ಕೋವಿಡ್-19 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, 6236 ವ್ಯಕ್ತಿಗಳನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಒಟ್ಟು 2111 ಸಕ್ರೀಯ ಪ್ರಕರಣಗಳು ಇರುತ್ತವೆ. ಜಿಲ್ಲೆಯ ಪಾಸಿಟಿವಿಟಿ ದರವು 18.2% ಇರುತ್ತದೆ. ದಿನಾಂಕ :28.8.2020 ರವರೆಗೆ 75816 ಗಂಟಲು ದ್ರವ ಮಾದರಿಗಳನ್ನು ಕೋವಿಡ್ ಪರೀಕ್ಷೆಗಾಗಿ ಕಳುಹಿಸಿದ್ದು, 8526 ಪಾಸಿಟಿವ್ ಬಂದಿದ್ದು, 66652 ನೆಗೆಟೀವ್ ಬಂದಿರುತ್ತವೆ. 638 ಗಂಟಲು ದ್ರವ ಮಾದರಿಗಳ ಫಲಿತಾಂಶವು ಬಾಕಿ ಇರುತ್ತದೆ. ಜಿಲ್ಲೆಯಲ್ಲಿ ಈವರೆಗೆ 179 ಮರಣಗಳು ಸಂಭವಿಸಿರುತ್ತವೆ. ಈ ಪೈಕಿ 14 ವ್ಯಕ್ತಿಗಳು ಹೊರ ಜಿಲ್ಲೆಯವರಾಗಿದ್ದು, ಜಿಲ್ಲೆಯ ಫ್ಯಾಟಿಲಿಟಿ ದರವು 2.2% ಇರುತ್ತದೆ. ಮೃತಪಟ್ಟ ಎಲ್ಲಾ ವ್ಯಕ್ತಿಗಳನ್ನು ಕೋವಿಡ್-19 ರ ಮಾರ್ಗಸೂಚಿಗಳು ಮತ್ತು ನಿಯಮಾನುಸಾರ ಅಂತ್ಯಸಂಸ್ಕಾರ ಮಾಡಲಾಗಿರುತ್ತದೆ. ಜಿಲ್ಲೆಯಲ್ಲಿ ಇದುವರೆಗೂ 843 ವಲಯಗಳನ್ನು ಕಂಟೇನ್ಮೆಂಟ್ ಝೋನ್ ಎಂದು ಘೋಷಿಸಲಾಗಿದ್ದು, ಈ ಪೈಕಿ 610 ವಲಯಗಳು ಯಾವುದೇ ಹೊಸ ಪ್ರಕರಣಗಳು ಇಲ್ಲದ ಕಾರಣ ಡಿನೋಟಿಫೈ ಮಾಡಲಾಗಿದೆ. 223 ಸಕ್ರೀಯ ಕಂಟೇನ್ಮೆಂಟ್ ಝೋನ್‌ಗಳು ಇದ್ದು, ಇವುಗಳಲ್ಲಿ ಪ್ರತಿದಿನ ಸಮೀಕ್ಷೆ ನಡೆಸಲಾಗುತ್ತಿದೆ. ಬಫರ್ ಝೋನ್‌ನಲ್ಲಿ 3 ದಿನಗಳಿಗೊಮ್ಮೆ ಸಮೀಕ್ಷೆ ನಡೆಸಲಾಗುತ್ತಿದೆ. ಇದುವರೆಗೂ 230915 ಮನೆಗಳಿಂದ 898848 ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.

ಜಿಲ್ಲೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ 200 ಬೆಡ್‌ಗಳ ಕೋವಿಡ್ ಆಸ್ಪತ್ರೆ ಎಂದು ಗುರುತಿಸಲಾಗಿದ್ದು, ಹೆಚ್ಚುವರಿ 250 ಬೆಡ್‌ಗಳ ಐಸೋಲೇಷನ್ ವಾರ್ಡ್ ಗುರುತಿಸಲಾಗಿದೆ. ಜಿಲ್ಲೆಯ 4 ತಾಲ್ಲೂಕುಗಳಲ್ಲಿ ತಲಾ 20 ಐಸೋಲೇಷನ್ ಬೆಡ್‌ಗಳನ್ನು ಸ್ಥಾಪಿಸಲಾಗಿದೆ ಹಾಗೂ ಪ್ರತಿ ತಾಲ್ಲೂಕಿನಲ್ಲಿ ಲಕ್ಷಣಗಳು ಇಲ್ಲದ ಪಾಸಿಟಿವ್ ಪ್ರಕರಣಗಳನ್ನು ಚಿಕಿತ್ಸೆಗೆ ಒಳಪಡಿಸಲು 100 ಬೆಡ್‌ಗಳ ಕೋವಿಡ್ ಕೇರ್ ಸೆಂಟರ್‌ಗಳಾಗಿ ಕಾರ್ಯನಿರ್ವಹಿಸಲು ಗುರುತಿಸಲಾಗಿದೆ.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಕೋವಿಡ್ ಸೆಂಟರ್‌ಗಳಲ್ಲಿ ಬೆಡ್‌ಗಳ ಸಾಮರ್ಥ್ಯವನ್ನು ಹೆಚ್ಚಿಗೆ ಮಾಡಲಾಗಿದೆ ಹಾಗೂ ಸರ್ಕಾರದ ನಿರ್ದೇಶನದಂತೆ **ಹೋಂ ಐಸೋಲೇಷನ್‌ಗೆ** ಹೆಚ್ಚಿನ ಒತ್ತು ನೀಡಿ ಕ್ರಮವನ್ನು ಸಹ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜ್ವರದ ಕ್ಲೀನಿಕ್‌ಗಳಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಕೋವಿಡ್-19 ಗೆ ಸಂಬಂಧಿಸಿದಂತೆ ಕಾಂಟ್ಯಾಕ್ಟ್ ಟ್ರೇಸಿಂಗ್‌ನ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಾತಿ ಮಾಡುತ್ತಿರುವ ಬಗ್ಗೆ ಮಾಹಿತಿ ಕೇಳಿದಾಗ, ಜಿಲ್ಲಾ ವೈದ್ಯಾಧಿಕಾರಿಗಳು ಮಾತನಾಡುತ್ತಾ, ಅಪರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಾಂಟ್ಯಾಕ್ಟ್ ಟ್ರೇಸಿಂಗ್ ತಂಡ ಮತ್ತು ಸರ್ವೇಕ್ಷಣಾ ತಂಡದಿಂದ ಈವರೆಗೆ 48227 ಪ್ರಾಥಮಿಕ ಸಂಪರ್ಕಗಳು, ಅವುಗಳ ಪೈಕಿ 2257 ಪಾಸಿಟಿವ್ ಮತ್ತು 48077 ದ್ವಿತೀಯ ಸಂಪರ್ಕಗಳನ್ನು ಅವುಗಳ ಪೈಕಿ 967 ಪಾಸಿಟಿವ್ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಹಾಗೂ ಆನ್‌ಲೈನ್‌ನಲ್ಲಿ ಮಾಹಿತಿಯನ್ನು ದಾಖಲಿಸಲಾಗುತ್ತಿದೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡುತ್ತಾ, ಇದುವರೆಗೂ ಜಿಲ್ಲೆಯಲ್ಲಿ ತೀವ್ರ ಶ್ವಾಸಕೋಶದ ಸೋಂಕು (SARI) 1292 ಪ್ರಕರಣಗಳು ದಾಖಲಾಗಿದ್ದು, 204 ಪಾಸಿಟಿವ್ ಬಂದಿರುತ್ತವೆ. (ILI) ಪ್ರಕರಣಗಳು 6116 ಇದ್ದು, 534 ಪಾಸಿಟಿವ್ ಬಂದಿರುತ್ತವೆ. ಕೋವಿಡ್ ಪಾಸಿಟಿವ್ ಪ್ರಕರಣಗಳು ಕಂಡುಬಂದಿರುವ ಪ್ರದೇಶಗಳಲ್ಲಿ 1. ಕಂಟೇನ್ಮೆಂಟ್ ಝೋನ್ ಮತ್ತು 2. ಬಫರ್ ವಲಯಗಳಲ್ಲಿ ನಿಯಮಾನುಸಾರ ಸರ್ವೇಕ್ಷಣೆ ನಡೆಸಲಾಗುತ್ತಿದ್ದು, ಕೋವಿಡ್ ಮರಣಗಳನ್ನು ತಡೆಯಲು ತೀವ್ರ ತರದ ಸರ್ವೇಕ್ಷಣಾ ಚಟುವಟಿಕೆಗಳನ್ನು ಕೈಗೊಳ್ಳಲು 1. ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿ ಮತ್ತು 2. ವಾರ್ಡ್ ಹಾಗೂ ಬೂತ್ ಮಟ್ಟದ ಸಮಿತಿಗಳನ್ನು ರಚಿಸಿ ಆದೇಶಿಸಲಾಗಿದ್ದು, ಸಮಿತಿಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ ಎಂದು ಸಭೆಗೆ ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಕೋವಿಡ್ ಪಾಸಿಟಿವ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಹೋಂ ಐಸೋಲೇಷನ್‌ನಲ್ಲಿ ಇರುವುದಕ್ಕಿಂತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಿದ್ದರೆ ಹೆಚ್ಚಿನ ಫಲಕಾರಿಯಾಗಿ ಮರಣದ ಪ್ರಮಾಣ ತಗ್ಗಿಸಬಹುದಾಗಿತ್ತು ಎಂಬಂತಹ ಪ್ರಕರಣಗಳು ಕಂಡುಬಂದಿವೆಯೇ ? ಹಾಗೂ ಹೋಂ ಐಸೋಲೇಷನ್‌ನಿಂದ ಯಾರಾದರೂ ಮರಣ ಹೊಂದಿದ್ದಾರೆಯೇ ? ಎಂದು ಕೇಳಿದರು. ಎಸ್‌ಎಸ್‌ಎಂಐಎಸ್ ನ ವೈದ್ಯರಾದ ಡಾ||ಕಾಳಪ್ಪನವರು ಮಾತನಾಡುತ್ತಾ, 4 ಕೋವಿಡ್ ಪಾಸಿಟಿವ್ ಪ್ರಕರಣಗಳು ನಮ್ಮ ಆಸ್ಪತ್ರೆಗೆ ದಾಖಲಾಗಿದ್ದು, ಸದರಿ ರೋಗಿಗಳನ್ನು ಮೊದಲೇ ಆಸ್ಪತ್ರೆಗೆ ದಾಖಲಾಗಿದ್ದರೆ ಹೆಚ್ಚಿನ ಅನುಕೂಲವಾಗುತ್ತಿತ್ತೆಂದು ಸಭೆಗೆ ತಿಳಿಸಿದರು. ಮುಂದುವರೆದು ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಹೋಂ ಐಸೋಲೇಷನ್ ಕುರಿತು ಅಭಿಪ್ರಾಯ ನೀಡುವಂತೆ ವೈದ್ಯಾಧಿಕಾರಿಗಳಿಗೆ ತಿಳಿಸಿದರು. ಖಾಸಗಿ ವೈದ್ಯರು ಮಾತನಾಡುತ್ತಾ, ಹೋಂ ಐಸೋಲೇಷನ್‌ನಿಂದ ಕೆಲವೊಂದು ಬಾರಿ ತೊಂದರೆ ಉಂಟಾಗುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು.

ಉಸ್ತುವಾರಿ ಕಾರ್ಯದರ್ಶಿಗಳು ಹೋಂ ಐಸೋಲೇಷನ್‌ಗೆ ಸಂಬಂಧಿಸಿದಂತೆ ತಾಲ್ಲೂಕುವಾರು ವರದಿ ನೀಡುವಂತೆ ಕೇಳಲಾಗಿ, ಎಲ್ಲಾ ತಾಲ್ಲೂಕುಗಳಲ್ಲಿ ನೇಮಕಗೊಂಡ ನೋಡಲ್ ಅಧಿಕಾರಿಗಳು ಆಯಾ ತಾಲ್ಲೂಕುವಾರು ಹೋಂ ಐಸೋಲೇಷನ್‌ನಲ್ಲಿರುವ ಪ್ರಕರಣಗಳ ಕುರಿತು ಮಾಹಿತಿಯನ್ನು ಸಭಾಧ್ಯಕ್ಷರಿಗೆ ನೀಡಿದರು. ಸಾರ್ವಜನಿಕರಲ್ಲಿ ಕೋವಿಡ್-19 ರ ಬಗ್ಗೆ ಜಾಗೃತಿ ಮೂಡಿಸಲು ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸುವಂತೆ ಜಿಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಹಾಗೂ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳನ್ನು ಕೇಳಿದಾಗ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಸಾರ್ವಜನಿಕರಲ್ಲಿ ಕೋವಿಡ್-19 ರ ಬಗ್ಗೆ ಜಾಗೃತಿ ಮೂಡಿಸಲು ಪಾಂಪ್ಲೇಟ್‌ಗಳನ್ನು ಹಾಗೂ ಪೋಸ್ಟರ್‌ಗಳನ್ನು ಮುದ್ರಿಸಿ ಎಲ್ಲಾ ತಾಲ್ಲೂಕು ಹಾಗೂ ಹಳ್ಳಿಗಳಲ್ಲಿ ಅಂಟಿಸಲಾಗಿದ್ದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಜಿಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮಾತನಾಡುತ್ತಾ, ಪತ್ರಿಕೆಗಳಲ್ಲಿ, ವಾಟ್ಸ್‌ಆಪ್, ಫೇಸ್‌ಬುಕ್‌ಗಳಲ್ಲಿ ಮಾಹಿತಿಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆ ಹಾಗೂ ಸ್ಥಳೀಯ ಕೇಬಲ್ ಚಾನಲ್‌ನಲ್ಲಿಯೂ ಸಹ ಜಾಹೀರಾತು ನೀಡಲಾಗಿದ್ದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಮುಂದುವರೆದು, ಕೋವಿಡ್-19 ನಿಯಂತ್ರಣದಲ್ಲಿ ಸಾರ್ವಜನಿಕ ಸಹಕಾರವು ತುಂಬಾ ಮುಖ್ಯವಾಗಿದ್ದು, ಇದಕ್ಕಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಈ ಜಿಲ್ಲೆಯಲ್ಲಿ ಗಮನಿಸಿದಾಗ ವಾರ್ತಾ ಇಲಾಖೆ ಹಾಗೂ ಆರೋಗ್ಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದ ಗಮನಾರ್ಹ ಪ್ರಚಾರ ಕಾರ್ಯವು ಕೈಗೊಂಡಿರುವುದು ಕಂಡುಬರುತ್ತಿಲ್ಲ. ಜಿಲ್ಲೆಯಲ್ಲಿ ಪ್ರಚಾರದ ಕೊರತೆಯು ಎದ್ದು ಕಾಣುತ್ತಿದೆ. ಆದ್ದರಿಂದ ಕೂಡಲೇ ಸಾರ್ವಜನಿಕರಲ್ಲಿ ಕೋವಿಡ್-19 ರ ಕುರಿತು ಜಾಗೃತಿ ಮೂಡಿಸುವ ಸಂಬಂಧ ಯೋಜನೆಯನ್ನು ಸಿದ್ಧಪಡಿಸಿಕೊಂಡು ಜಿಲ್ಲಾಧಿಕಾರಿಗಳಿಗೆ ಮಂಡಿಸಿ ಅನುಮೋದನೆ ಪಡೆದು ಕೂಡಲೇ ಹೆಚ್ಚಿನ ರೀತಿಯಲ್ಲಿ ಕಾರ್ಯಪ್ರವೃತ್ತರಾಗುವಂತೆ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಾಧ್ಯವಿರುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಪ್ರಚಾರಕ್ಕೆ ಅಗತ್ಯವಿರುವ ವಾಹನಗಳನ್ನು ಬಾಡಿಗೆ ಪಡೆಯುವ ಮೂಲಕ ಪೂರೈಸುವಂತೆ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ ಇವರಿಗೆ ತಿಳಿಸಿದರು.

ಮುಂದುವರೆದು ಕ್ವಾರೆಂಟೈನ್ ವಾಚ್ ಆಪ್ ಬಗ್ಗೆ ಮಾಹಿತಿ ಕೇಳಲಾಗಿ ಆಯುಕ್ತರು, ಮಹಾನಗರಪಾಲಿಕೆ ಇವರು ಮಾತನಾಡುತ್ತಾ, ಕ್ವಾರೆಂಟೈನ್ ವಾಚ್ ಆಪ್‌ನ ಪ್ರಗತಿ ಕುರಿತು ಸಭೆಗೆ ಮಾಹಿತಿ ನೀಡಿದರು. ಮಾನ್ಯ ಅಧ್ಯಕ್ಷರು ಪ್ರಗತಿಯನ್ನು ಪರಿಶೀಲಿಸುತ್ತಾ, ಪ್ರಗತಿಯು ಕುಂಠಿತವಾಗಿದ್ದು, ಕೂಡಲೇ ಸಂಬಂಧಪಟ್ಟವರಿಗೆ ಸಭೆ ನಡೆಸಿ ಸೂಚನೆ ನೀಡಿ ಕ್ವಾರೆಂಟೈನ್ ವಾಚ್ ಆಪ್‌ನಲ್ಲಿ ಯಾವುದೇ ಬಾಕಿ ಇರದಂತೆ ನೋಡಿಕೊಳ್ಳುವಂತೆ ಸೂಚಿಸಿದರು.

ಜಿಲ್ಲಾ ವೈದ್ಯಾಧಿಕಾರಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ತಜ್ಞವೈದ್ಯರ ಹಾಗೂ ಇತರೆ ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿಗಳ ತುಂಬಾ ಕೊರತೆ ಉಂಟಾಗಿದ್ದು, ಇದರಿಂದಾಗಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು. ಅಧ್ಯಕ್ಷರು ಮಾತನಾಡುತ್ತಾ, ಜಿಲ್ಲಾ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ವಿಪತ್ತು ನಿರ್ವಹಣಾ ನಿಧಿಯಿಂದ ಹಾಗೂ ಆರೋಗ್ಯ ರಕ್ಷಾ ಸಮಿತಿ ನಿಧಿಯಿಂದ ಅನುದಾನವನ್ನು ಬಳಸಿಕೊಂಡು ಕ್ರಮವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಬೇರೆ ಬೇರೆ ಜಿಲ್ಲೆಗಳಿಂದ ರೋಗಿಗಳು ದಾವಣಗೆರೆ ಜಿಲ್ಲೆಗೆ ಚಿಕಿತ್ಸೆಗಾಗಿ ಬರುತ್ತಿರುವುದರಿಂದ ಜಿಲ್ಲೆಯಲ್ಲಿ ಲಭ್ಯವಿರುವ ಎಲ್ಲಾ ಐ.ಸಿ.ಯು.ಗಳು ತುಂಬಿರುತ್ತವೆ. ಚಿಗಟೇರಿ ಆಸ್ಪತ್ರೆಯಲ್ಲಿ ಅಗತ್ಯ ಸಲಕರಣೆಗಳು / ಸೌಲಭ್ಯಗಳು ಇರುತ್ತವೆ. ಆದರೆ, ಇಲ್ಲಿ ಮಾನವ ಸಂಪನ್ಮೂಲದ ಕೊರತೆ ಇದ್ದು, ತಜ್ಞವೈದ್ಯರನ್ನು ಹಾಗೂ ಇತರೆ ವೈದ್ಯಕೀಯ ಸಿಬ್ಬಂದಿಗಳನ್ನು ನೇಮಕ ಮಾಡಿಕೊಡುವಂತೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು ಹಾಗೂ ಸರ್ಕಾರದಿಂದ ನೀಡಲಾಗಿರುವ ವೆಂಟಿಲೇಟರ್‌ಗಳನ್ನು ಬೇರೆ ಬೇರೆ ಖಾಸಗಿ ಆಸ್ಪತ್ರೆಗಳಿಗೆ ಹಂಚಿಕೆ ಮಾಡಿ ನಿರ್ವಹಣೆ ಮಾಡಲು ಅನುಮತಿ ನೀಡುವಂತೆಯು ಸಹ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಅಧ್ಯಕ್ಷರು ಮಾತನಾಡುತ್ತಾ, ಬೆಂಗಳೂರು ನಗರದಲ್ಲಿ ಈಗಾಗಲೇ ಅಗತ್ಯ ವೈದ್ಯರನ್ನು ಹಾಗೂ ಇತರೆ ಸಿಬ್ಬಂದಿಗಳನ್ನು ವಿಪತ್ತು ನಿರ್ವಹಣಾ ನಿಧಿ ಹಾಗೂ ಆರೋಗ್ಯ ರಕ್ಷಾ ಸಮಿತಿ ನಿಧಿಯನ್ನು ಬಳಸಿಕೊಂಡು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುತ್ತಾರೆ. ಅದೇ ರೀತಿ ಈ ಜಿಲ್ಲೆಯಲ್ಲಿಯೂ ಕ್ರಮವಹಿಸುವಂತೆ ಸೂಚಿಸಿದರು. ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ತಮ್ಮ ನಿರ್ದೇಶನದಂತೆ ವಿಪತ್ತು ನಿರ್ವಹಣಾ ನಿಧಿಯನ್ನು ಬಳಸಿಕೊಂಡು ಜಿಲ್ಲಾ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಗೆ ಅಗತ್ಯವಿರುವ ತಜ್ಞವೈದ್ಯರನ್ನು ಹಾಗೂ ಇತರೆ

ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ದಾವಣಗೆರೆ ಜಿಲ್ಲೆಯ ಸದ್ಯದ ಪರಿಸ್ಥಿತಿಯು ಅತ್ಯಂತ ಸೂಕ್ಷ್ಮವಾಗಿದ್ದು, ಜಿಲ್ಲೆಯಲ್ಲಿ ಕೋವಿಡ್-19 ರ ಮರಣ ಪ್ರಮಾಣವು 2.2% ಇದ್ದು, ಜಿಲ್ಲಾಡಳಿತದಿಂದ ಇನ್ನೂ ಹೆಚ್ಚಿನ ಎಲ್ಲಾ ರೀತಿಯ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಮರಣದ ಪ್ರಮಾಣವನ್ನು ತಗ್ಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಸಾರ್ವಜನಿಕರಲ್ಲಿ ಕೋವಿಡ್-19ರ ಕುರಿತು ಜಾಗೃತಿ ಮೂಡಿಸುವುದು ಈ ಸಂದರ್ಭದಲ್ಲಿ ಅತ್ಯಗತ್ಯವಾಗಿದ್ದು, ವಾರ್ತಾ ಇಲಾಖೆ ಹಾಗೂ ಆರೋಗ್ಯ, ಶಿಕ್ಷಣ ಇಲಾಖೆ ಅಧಿಕಾರಿಗಳು ಈ ನಿಟ್ಟಿನಲ್ಲಿ ಹೆಚ್ಚಿನ ಶ್ರಮವಹಿಸಿ ಕಾರ್ಯನಿರ್ವಹಿಸುವುದು ಹಾಗೂ ಅದರಂತೆ ಇತರೆ ಎಲ್ಲಾ ಇಲಾಖೆಯವರು ಸಹ ಹೆಚ್ಚಿನ ಸಮನ್ವಯತೆಯೊಂದಿಗೆ ಕಾರ್ಯನಿರ್ವಹಿಸುವುದು ಸಹ ಅಗತ್ಯವಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

(ಎಸ್.ಆರ್. ಉಮಾಶಂಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ದಾವಣಗೆರೆ ಜಿಲ್ಲೆ.

## ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ:ಪ್ರಕಾ:0309:2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ:04.09.2020

### ಟಿಪ್ಪಣಿ

ವಿಷಯ: ಆಗಸ್ಟ್ 2020 ಮಾಹೆಯ ವಿಜಯಪುರ ಜಿಲ್ಲಾ ಪ್ರವಾಸ ವರದಿ.

-----------

ದಿನಾಂಕ 26.08.2020ರಂದು ವಿಜಯಪುರ ಜಿಲ್ಲೆಗೆ ಉಸ್ತುವಾರಿ ಕಾರ್ಯದರ್ಶಿಯಾಗಿ ಭೇಟಿ ನೀಡಿ ಜಿಲ್ಲೆಯ ಪರಿಶೀಲನಾ ವರದಿ ಮತ್ತು ಜಿಲ್ಲಾ ಮಟ್ಟದ ಸಭೆಯಲ್ಲಿ ನೀಡಿದ ಸೂಚನೆಗಳನ್ನು ತಮ್ಮ ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

(ಡಾ.ಜೆ.ರವಿಶಂಕರ್)
ಸರ್ಕಾರದ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ ಹಾಗೂ ವಿಜಯಪುರ ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿ

ಇವರಿಗೆ:

ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಎ.ಆರ್)
ಎಂ.ಎಸ್.ಬಿಲ್ಡಿಂಗ್.

ಡಾ:ಜೆ.ರವಿಶಂಕರ ಭಾ.ಆ.ಸೇ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ವಿಜಯಪುರ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ದಿ:26-08-2020 ರಂದು ಮುಂಜಾನೆ: 10.00 ಗಂಟೆಗೆ ನಡೆದ ಜಿಲ್ಲೆಯ ಮಳೆ ಹಾನಿ ಮತ್ತು ಕೋವಿಡ್ 19 ರ ಕುರಿತು ಪ್ರಕರಣಗಳನ್ನು ತಡೆಗಟ್ಟಲು ಜಿಲ್ಲಾಡಳಿತದ ವತಿಯಿಂದ ವಹಿಸಿ ಮತ್ತು ವಹಿಸಬೇಕಾದ ಕ್ರಮಗಳ ಕುರಿತು ಪರಿಶೀಲನಾ ಸಭೆಯ ನಡುವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು,

ಹಾಜರಿ ಪುಸ್ತಕದಲ್ಲಿರುವಂತೆ,

ಸಭೆಯಲ್ಲಿ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳರವರು ಸ್ವಾಗತಿಸಿ, ಜಿಲ್ಲೆಯ ಮಳೆ ಹಾನಿ ಮತ್ತು ಕೋವಿಡ್ 19 ರ ಕುರಿತು ಪ್ರಕರಣಗಳನ್ನು ತಡೆಗಟ್ಟಲು ಜಿಲ್ಲಾಡಳಿತದ ವತಿಯಿಂದ ವಹಿಸಿ ಮತ್ತು ವಹಿಸಬೇಕಾದ ಕ್ರಮಗಳ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳರವರ ಗಮನಕ್ಕೆ ತಂದರು.

**ಕೋವಿಡ್-19:**

ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಇದುವರೆಗೂ ಒಟ್ಟು 68,719-ಜನರನ್ನು ನಿರೀಕ್ಷಣೆಯಲ್ಲಿರಿಸಲಾಗಿದ್ದು, ಅದರಲ್ಲಿ 67,394 ಜನರ ಗಂಟಲು ದ್ರವವನ್ನು ಲ್ಯಾಬ್ ಟೆಸ್ಟ್ ಪರೀಕ್ಷೆಗೆ ಕಳುಹಿಸಲಾಗಿದ್ದು, ಅವರಲ್ಲಿ 61,322 ಜನರ ಲ್ಯಾಬ್‌ಟೆಸ್ಟ್ ವರದಿ ನೆಗಟಿವ್ ಆಗಿದ್ದು, 1,325 ಜನರ ಲ್ಯಾಬ್ ಟೆಸ್ಟ್ ವರದಿ ನಿರೀಕ್ಷಿಸಲಾಗಿದೆ. ಸರಕಾರವು ನಿಗಧಿಪಡಿಸಿದ ಗುರಿಗೆ ಅನುಗುಣವಾಗಿ ರ್‍ಯಾಟ್ ಮತ್ತು ಆರ್.ಟಿ.ಪಿ.ಸಿ.ಆರ್. ಟೇಸ್ಟ್ ಗಳನ್ನು ಮಾಡಲು ಮತ್ತು ರ್‍ಯಾಟ್ ಟೇಸ್ಟ್‌ನಲ್ಲಿ ನೆಗಟಿವ್ ಬಂದ ಪ್ರಕರಣಗಳನ್ನು ಪಾಲೋಅಪ್ ಆಗಿ ಆರ್.ಟಿ.ಪಿ.ಸಿ.ಆರ್ ಟೇಸ್ಟ್ ಮಾಡಲು ಸೂಚಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳರವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಒಟ್ಟು ಎರಡು ಆರ್.ಟಿ.ಪಿ.ಸಿ.ಆರ್ ಲ್ಯಾಬ್ ಗಳಿದ್ದು, ಅವುಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರತಿದಿನ 3 ಶೀಫ್ಟ್ ಗಳಲ್ಲಿ ಕಾರ್ಯನಿರ್ವಹಿಸಿ, ಹೆಚ್ಚು ಹೆಚ್ಚು ಗಂಟಲು ದ್ರವವನ್ನು ತಪಾಸಣೆಗೆ ಒಳಪಡಿಸಲು ಮತ್ತು ಸರಕಾರವು ನಿಗಧಿಪಡಿಸಿರುವಂತೆ ರ್‍ಯಾಟ್ ಟೇಸ್ಟ್ ಗಳನ್ನು ಕೈಕೊಳ್ಳುವಂತೆ ಸೂಚಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಸರಕಾರದ ನಿರ್ದೇಶನದಂತೆ ಕ್ವಾಂಟ್ಯಾಕ್ಟ್ ಟ್ರೇಸಿಂಗ್ ಆ್ಯಪ್‌ಗೆ ಸಂಬಂಧಿಸಿದಂತೆ ಪಾಸಿಟಿವ್ ಪ್ರಕರಣಗಳ ಪ್ರಥಮ ಸಂಪರ್ಕದ -10 ಹಾಗೂ ದ್ವಿತೀಯ ಸಂಪರ್ಕದ-10 ಪ್ರಕರಣಗಳನ್ನು ಪತ್ತೆ ಹಚ್ಚಿ ಕ್ವಾಂಟ್ಯಾಕ್ಟ್ ಟ್ರೇಸಿಂಗ್ ಆ್ಯಪ್‌ನಲ್ಲಿ ಅಳವಡಿಸುವ ಕುರಿತು ಶಿಕ್ಷಣ ಇಲಾಖೆಯ ಬಿ.ಆರ್.ಸಿ ಮತ್ತು ಸಿ.ಆರ್.ಸಿ ಗಳ ಮೂಲಕ ಮತಗಟ್ಟೆ ಅಧಿಕಾರಿಗಳಿಗೆ (BLO) ತರಬೇತಿಯನ್ನು ನೀಡಲಾಗಿದ್ದು, ಈ ಕಾರ್ಯದ ಪೂರ್ಣ ಉಸ್ತುವಾರಿಯನ್ನು ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ವಹಿಸಲಾಗಿದ್ದು ಇರುತ್ತದೆ.

ದಿನಾಂಕ:13-08-2020 ರಿಂದ 23-08-2020 ರವರೆಗಿನ ಅವಧಿಯಲ್ಲಿ ಪತ್ತೆ ಆದ 1333 ಪಾಸಿಟಿವ್ ಪ್ರಕರಣಗಳ ಪ್ರಥಮ ಸಂಪರ್ಕ -7274, ಹಾಗೂ ದ್ವಿತೀಯ ಸಂಪರ್ಕ-5563, ಹೀಗೆ ಒಟ್ಟು

12,837 ಸಂಪರ್ಕಗಳನ್ನು ಪತ್ತೆ ಹಚ್ಚಲಾಗಿದ್ದು, ಇದನ್ನು ಪ್ರತಿಶತವಾಗಿ ಪರಿಶೀಲಿಸಲಾಗಿ ಪ್ರಥಮ- 5.53% ಹಾಗೂ ದ್ವಿತೀಯ- 4.23% ವಾಗಿದ್ದು, ರಾಜ್ಯಮಟ್ಟದಲ್ಲಿ ವಿಜಯಪುರ ಜಿಲ್ಲೆಯು 3 ಸ್ಥಾನದಲ್ಲಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳರವರು ಮಾತನಾಡುತ್ತಾ, ಜಿಲ್ಲಾಡಳಿತ ಕಾರ್ಯವು ಶ್ಲಾಘನಿಯವಾಗಿದ್ದು, ಸರಕಾರವು ಸೂಚಿಸಿರುವಂತೆ ಪ್ರಥಮ ಹಾಗೂ ದ್ವಿತೀಯ ಸಂಪರ್ಕಗಳನ್ನು ಪತ್ತೆ ಹಚ್ಚುವ ಕಾರ್ಯವನ್ನು ಇದೇ ರೀತಿ ಮುಂದುವರಿಸಿಕೊಂಡು ಹೋಗಲು ಸೂಚಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಸರ್ಕಾರದ ನಿರ್ದೇಶನ ಅನುಸಾರ ಸೊಂಕುರಹಿತ ಒಟ್ಟು:546 ಪಾಸಿಟಿವ್ ರೋಗಿಗಳು ಹೋಮ್ ಐಸೋಲೇಶನ್‌ದಲ್ಲಿದ್ದು, ಇಂತವರಿಗೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಂದ ದೂರವಾಣಿ ಮುಖಾಂತರ ಅವರ ಯೋಗಕ್ಷೇಮ, ಸಮಾಚಾರವನ್ನು ವಿಚಾರಿಸಲಾಗುತ್ತಿದ್ದು, ಮತ್ತು ಅವರಿಗೆ ಅಗತ್ಯವಿರುವ ಔಷಧಿಗಳನ್ನು ಪೂರೈಸಲಾಗಿದೆ. ಎಂದು ಸಭೆಯ ಗಮನಕ್ಕೆ ತಂದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳರವರು ಮಾತನಾಡುತ್ತಾ, ಹೋಮ್ ಐಸೋಲೇಶನ್‌ದಲ್ಲಿದ್ದವರಿಗೆ ರೋಗ ಲಕ್ಷಣಗಳು ಕಂಡುಬಂದಲ್ಲಿ ಅಂತವರನ್ನು ಕೋವಿಡ್ ಆಸ್ಪತ್ರೆಗೆ ಸ್ಥಳಾಂತರಿಸಲು ಮತ್ತು ವಿಜಯಪುರ ಜಿಲ್ಲೆಯಲ್ಲಿ ಕೋವಿಡ್ -19 ಆಸ್ಪತ್ರೆಯನ್ನು ಹೊರತುಪಡಿಸಿ ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ಇದು ಒಂದು ಉತ್ತಮ ಬೆಳವಣಿಗೆಯಾಗಿದ್ದು, ಕೋವಿಡ್ ರೋಗಿಗಳಿಗೆ ಸರಕಾರವು ನಿಗಧಿಪಡಿಸಿದ ದರದಂತೆ ಚಿಕಿತ್ಸಾ ವೆಚ್ಚವನ್ನು ಪಡೆಯಲು ಸೂಚಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಖಾಸಗಿ ಆಸ್ಪತ್ರೆಗಳಲ್ಲಿ ವರದಿಯಾಗುವ SARI & ILI ಪ್ರಕರಣಗಳ ಪ್ರತಿ ದಿನದ ಮಾಹಿತಿಯನ್ನು ವೆಬ್ ನಲ್ಲಿ ಅಪಲೋಡ್ ಮಾಡಲಾಗುತ್ತಿದ್ದು, ಅವರ ವರದಿಗೆ ಅನುಸಾರವಾಗಿ SARI & ILI ಪ್ರಕರಣಗಳ ಗಂಟಲು ದ್ರವವನ್ನು ತಪಾಸಣೆಗೆ ಕಳುಹಿಸಲಾಗುತ್ತಿದೆ. ಇದುವರೆಗೂ ಜಿಲ್ಲೆಯಲ್ಲಿ 523 ಸಾರಿ ಪ್ರಕರಣಗಳು ಹಾಗೂ 8545 ಆಯ್.ಎಲ್.ಆಯ್ ಪ್ರಕರಣಗಳು ಕಂಡು ಬಂದಿರುತ್ತವೆ ಎಂದು ಸಭೆಯ ಗಮನಕ್ಕೆ ತಂದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳರವರು ಮಾತನಾಡುತ್ತಾ, ಆಶಾ ಕಾರ್ಯಕರ್ತೆಯರು ಮತ್ತು ಎ.ಎನ್.ಎಂ ಕಾರ್ಯಕರ್ತರಿಂದ ಮನೆ ಸಮೀಕ್ಷೆ ಕಾರ್ಯವನ್ನು ಹಮ್ಮಿಕೊಂಡು SARI & ILI ಪ್ರಕರಣಗಳನ್ನು ಪತ್ತೆ ಹಚ್ಚಿ ಅವರ ಗಂಟಲು ದ್ರವವನ್ನು ತಪಾಸಣೆಗೆ ಕಳುಹಿಸಲು ಸೂಚಿಸಿದರು.

**ಮಳೆ/ಪ್ರವಾಹ:**

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಜಿಲ್ಲೆಯ ಆಲಮಟ್ಟಿ ಜಲಾಶಯದಿಂದ ದಿನಾಂಕ:18-08-2020 ರಿಂದ ಸುಮಾರು 2.50 ಲಕ್ಷ ಕ್ಯೂಸೆಕ್ಸ್ ನೀರನ್ನು ನದಿ ಪಾತ್ರಕ್ಕೆ ಹರಿ ಬಿಡಲಾಗುತ್ತಿರುವುದರಿಂದ, ನಾರಾಯಣಪೂರ ಜಲಾಶಯ ಹಿನ್ನೀರಿನಿಂದಾಗಿ ನಿಡಗುಂದಿ ತಾಲೂಕಿನ ಯಲಗೂರು, ಅರಳದಿನ್ನಿ ಗ್ರಾಮಗಳ ಕೃಷಿ ಬೆಳೆಯು ಹಾನಿಗೀಡಾಗಿದ್ದು, ಇದಲ್ಲದೆ, ಮಾಹೆ:ಅಗಸ್ಟ್-2020 ರಲ್ಲಿ ಸುರಿದ ಭಾರಿ ಮಳೆಯಿಂದಾಗಿ ಇಂಡಿ ಮತ್ತು ಚಡಚಣ ತಾಲೂಕಿನ ಒಟ್ಟು 22 ಗ್ರಾಮಗಳ 4,550 ಹೇಕ್ಟರ್ ಕೃಷಿ ಬೆಳೆಯು ಮತ್ತು ಸಿಂದಗಿ ತಾಲೂಕಿನ 246.2 ಹೇಕ್ಟರಿನಲ್ಲಿ ಬೆಳೆದಿರುವ ತೋಟಗಾರಿಕಾ

ಬೆಳೆಯು ಹಾನಿಗೆಗೊಳಗಾಗಿದ್ದು, ಜಂಟಿ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿದ್ದು, ಆದಷ್ಟು ಬೇಗನೆ ಅಂತಿಮ ವರದಿಯನ್ನು ಸರಕಾರಕ್ಕೆ ಸಲ್ಲಿಸಲಾಗುವುದೆಂದು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಆದಷ್ಟು ಬೇಗನೆ ಜಂಟಿ ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಲು ಬೆಳೆ ಹಾನಿಯಾದ ರೈತರ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ಅಳವಡಿಸಿ ಅರ್ಹ ರೈತರಿಗೆ ಪರಿಹಾರ ಧನವನ್ನು ವಿತರಿಸುವ ಕುರಿತು ಕ್ರಮ ಜರುಗಿಸಲು ಸೂಚಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಆದ ಭಾರಿ ಮಳೆಯಿಂದಾಗಿ ಲೋಕೋಪಯೋಗಿ ಇಲಾಖೆ, ಪಂಚಾಯತ ರಾಜ್ ಇಂ ವಿಭಾಗ, ನಗರ ಮತ್ತು ಸ್ಥಳೀಯ ಸಂಸ್ಥೆ, ಹೆಸ್ಕಾಂ, ಮತ್ತು ಬೃಹತ್ ನೀರಾವರಿ ಇಲಾಖೆಯ ಒಟ್ಟು:9808.28 ಲಕ್ಷ ಮೊತ್ತದ ಮೂಲಭೂತ ಸೌಕರ್ಯಗಳು ಹಾನಿಗೆ ಒಳಗಾಗಿದ್ದು, ಈ ಕುರಿತು ಸರಕಾರಕ್ಕೆ ವರದಿ ಸಲ್ಲಿಸಲಾಗಿದೆ. ಹಾಗೂ ಮಾಹೆ-ಅಗಸ್ಟ್ ತಿಂಗಳಲ್ಲಿ ಆದ ಮಳೆಯಿಂದಾಗಿ ಜಿಲ್ಲೆಯ ಒಟ್ಟು:135 ಮನೆಗಳು ಹಾನಿಗೆ ಒಳಗಾಗಿದ್ದು, ಅವುಗಳಗೆ ಎಸ್.ಡಿ.ಆರ್.ಎಫ್ ಮಾರ್ಗಸೂಚಿಯನುಸಾರ ಪರಿಹಾರ ಧನ ನೀಡಲಾಗಿದೆ ಎಂದು ತಿಳಿಸಿದರು.

ಇದಲ್ಲದೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಮೂಲಕ ಹಾಗೂ ಕಾಲಕಾಲಕ್ಕೆ ವಿಡಿಯೋ ಸಂವಾದಗಳ ಮೂಲಕ ಸಂಬಂಧಿಸಿದ ಅಧಿಕಾರಿಗಳಗೆ ಪ್ರವಾಹ ಮುನ್ನೆಚ್ಚರಿಕೆ ಕುರಿತು ಅಗತ್ಯ ಸೂಚನೆಗಳನ್ನು ನೀಡಲಾಗಿದೆ. ಪ್ರತಿ ತಾಲೂಕಿಗೆ ಒಬ್ಬರಂತೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಗಳೆಂದು ನೇಮಿಸಲಾಗಿದೆ. ಆಲಮಟ್ಟಿ ಜಲಾಶಯದ ಒಳಹರಿವು ಮತ್ತು ಹೊರಹರಿವು ಕುರಿತು ವಾಟ್ಸ್ ಆ್ಯಪ್ ಗ್ರೂಪ್‌ಗಳ ಮೂಲಕ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತಿದೆ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಹಾಯವಾಣಿ ಕೇಂದ್ರ ಪ್ರಾರಂಭಿಸಲಾಗಿದೆ ಮತ್ತು ರಕ್ಷಣಾ ಸಾಮಗ್ರಿಗಳನ್ನು ಸುಸಜ್ಜಿತವಾಗಿ ಇಟ್ಟುಕೊಳ್ಳಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಮಳೆಯ ನೀರು ಸರಾಗವಾಗಿ ಹರಿದುಕೊಂಡು ಹೋಗುವಂತೆ ರಾಜ ಕಾಲುವೆ ಮತ್ತು ಚರಂಡಿಗಳನ್ನು ಸ್ವಚ್ಛಗೊಳಿಸಲು ಮತ್ತು ಪ್ರವಾಹ ಮುನ್ನೆಚ್ಚರಿಕೆ ಕುರಿತು ಅಗತ್ಯ ಕ್ರಮಗಳನ್ನು ಜರುಗಿಸಲು ಸೂಚಿಸಿದರು.

ಕೊನೆಯಲ್ಲಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಡಾ:ಜೆ.ರವಿಶಂಕರ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ, ಹಾಗೂ ವ್ಯವಸ್ಥಾಪಕ ನಿರ್ದೇಶಕರು,
ಕ.ನ.ನೀ.ಸ ಮತ್ತು ಒ.ಚ.ಮಂಡಳ ಬೆಂಗಳೂರು
ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ವಿಜಯಪುರ.

ಕ್ರ:ಕವಿ/ಕೊರೋನಾ/ಸಿಆರ್-110:19-20 ದಿನಾಂಕ: 26-08-2020

**ಪ್ರತಿಯನ್ನು ಮಾಹಿತಿ ಕುರಿತು ಸಲ್ಲಿಸಿದೆ:**

1. ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ವಿಧಾನಸೌಧ, ಬೆಂಗಳೂರು
2. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಜಲ ಭವನ, ಬನ್ನೇರುಘಟ್ಟರಸ್ತೆ, ಬೆಂಗಳೂರು.
3. ಮಾನ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆ.(ವಿಪತ್ತು ನಿರ್ವಹಣೆ) ಬಹು ಮಹಡಿ ಕಟ್ಟಡ ಬೆಂಗಳೂರು
4. ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ

**ಪ್ರತಿಯನ್ನು ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ**

1. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ, ವಿಜಯಪುರ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ವಿಜಯಪುರ
3. ಆಯುಕ್ತರು, ಮಹಾನಗರ ಪಾಲಿಕೆ ವಿಜಯಪುರ
4. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ವಿಜಯಪುರ
5. ಆಯಾ ತಾಲೂಕಿಗೆ ನಿಯೋಜಿಸಲಾದ ತಾಲೂಕಾ ನೋಡಲ್ ಅಧಿಕಾರಿಗಳು,
6. ಉಪ ವಿಭಾಗಾಧಿಕಾರಿಗಳು ವಿಜಯಪುರ /ಇಂಡಿ
7. ಜಿಲ್ಲೆಯ ಎಲ್ಲ ತಹಶೀಲದಾರರು,
8. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ವಿಜಯಪುರ
9. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ವಿಜಯಪುರ
10. ಜಿಲ್ಲೆಯ ಎಲ್ಲ ಆರೋಗ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
11. ಸಂಬಂಧಿಸಿದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ.
12. ರಕ್ಷಿತಕಡತಕ್ಕೆ.

**ದಿನಾಂಕ: 21.08.2020 ರಂದು ಮುಂಜಾನೆ 10–00 ಗಂಟೆಗೆ ಶ್ರೀ ಗೌರವ ಗುಪ್ತ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜರುಗಿದ ಸಭೆಯ ನಡಾವಳಿಗಳು**

**ಸಭೆಯಲ್ಲಿ ಉಪಸ್ಥಿತರು:**

1) ಶ್ರೀ ಗೌರವ ಗುಪ್ತ, ಭಾಆಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
2) ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ
3) ಪೊಲೀಸ್ ಆಯುಕ್ತರು, ಧಾರವಾಡ
4) ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಧಾರವಾಡ
6) ಆಯುಕ್ತರು, ಮಹಾನಗರ ಪಾಲಿಕೆ, ಹುಬ್ಬಳ್ಳಿ–ಧಾರವಾಡ
7) ಅಪರ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ
8) ಅಧ್ಯಕ್ಷರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ
9) ಉಪವಿಭಾಗಾಧಿಕಾರಿಗಳು, ಧಾರವಾಡ
10) ಜಿಲ್ಲಾ ವೈದ್ಯಾಧಿಕಾರಿಗಳು, ಧಾರವಾಡ ಮತ್ತು ಹುಬ್ಬಳ್ಳಿ
11) ಜಿಲ್ಲಾ ಶಸ್ತ್ರ ಚಿಕಿತ್ಸಕರು, ಧಾರವಾಡ
12) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಧಾರವಾಡ
**01. Review status of Surveillance activities in the District - SARI and ILI and their monitoring protocols.**

a. Total No of SARI Cases : 650
b. Total No of ILI Cases : 23189
c. Total No of Positive Covid-19 Cases : 3119

**02. Formation of Committees as per the instructions issued by Revenue (DM)**

As per direction issued by GOK vide Circular NO:ಕಂದಾ 83 ಟಿಎನ್‌ಆರ್ 2020, Dated:04.04.2020 Committees has been constituted and committees are working as per the GOK Circular. (Copy Attached)

**03. Has the Contingency/District level Crisis Management plan been prepared for the District.**

Contingency/District level Crisis Management plan has been prepared. (Plan attached)

**04. Have the formats for review been filled in by the district:** Yes

**05. Status of Supplies-Medicines, Medical Materials.**

The details of Medicines, Medical Materials Available as fallows

a. PPE's - 16457
b. N-95 Mask – 1780
c. Triple Layer Mask – 2330
d. Sanitizers 500 ml – 9335
e. Sanitizers 5000 ml – 41
f. Viral Transport media 1X25 - 74

**06. Has the HR plan been prepared as per the Contingency/District level Crisis Management plan:** Yes.(Plan attached)

**07. Containment plan for affected areas for the District.**

a. As on 13.07.2020 totally 3119 cases are reported.
b. 2008 Patients are discharged.
c. 1019 case are Active & 92 were Deceased.
a. The areas where the Patients house located from his house 100 mt's boundary was fixed entire containment zone was cordoned to barricades only one entry and one exit point was planned. People movements are restricted in containment area.

RAKESH SINGH, I.A.S.
Additional Chief Secretary to Govt.,
Water Resources Department

d. Proper arrangements are made to provide daily necessaries those who are in containment zone.

e. Teams were formed, each team having 2 persons (ANM, Asha, Male Health Workers &AW's) Each team daily survey up to 200 households, those who have fever & ILI symptoms. These teams refer to fever clinic for further management.

**08. Availability of Money under SDRF and Health.**

- Availability of Money Under SDRF –493.80 Lakhs
  Availability of Money Under Health – 0

**09. Protection of frontline staff**

**a.** Health – PPE and N95 masks has been distributed to Frontline Health workers and direction has been given to Health workers regarding use of PPE Equipment.

**b.** Municipalities – Masks given to municipality workers and instructions given to all workers.

**c.** Police – Instructions has been given to police officials to wear mask.

**10. Migrant Labour and Homeless:**

As per the direction given by the Govt all the migrant labuors sheltered in Govt relief camp were sent to their natives.

**11. Essential commodities - APMC/Cocoon Markets/Groceries/Retail Shops/ Agriculture operations.**

All are functioning normal after unlock.

**12. Periodical updating of Data to State/Monitoring tool.**

Nodal Officer has been appointed for updating information to State/Monitoring tool and its being updated regularly.

**13. Establishment of Lab:**

Lab has been established in district Hospital, Tumkur. Process of sample testing is going on. 96 well extraction machines was established in Lab. It Helps in taking 1000 swabs daily.

RAKESH SINGH, I.A.S.
Additional Chief Secretary to Govt.,
Water Resources Department

## ಶ್ರೀ ವಿ.ಅನ್ಬುಕುಮಾರ್ ಭಾ.ಆ.ಸೇ., ವಿಶೇಷ ಆಯುಕ್ತರು (ಆಡಳಿತ), ಬಿಬಿಎಂಪಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ

## ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | ವರದಿ |
|---|---|---|
| 1. | ಉಸ್ತುವಾರಿ ಜಿಲ್ಲೆಯ ಹೆಸರು | ಕೊಡಗು |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ವಿ.ಅನ್ಬುಕುಮಾರ್ |
| 3. | ಪ್ರವಾಸ ಕೈಗೊಂಡ ದಿನಾಂಕ | ದಿನಾಂಕ:06-08-2020 ರಿಂದ 08-08-2020 |
| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | ಜಿಲ್ಲೆಯಲ್ಲಿ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಕೋವಿಡ್-19ರ ಸಂಬಂಧ ಮಾದರಿ ಪರೀಕ್ಷೆಗಾಗಿ ರೂ.105.44 ಲಕ್ಷದಲ್ಲಿ ಲ್ಯಾಬ್ ಸ್ಥಾಪಿಸಲಾಗಿದ್ದು, ಕಾರ್ಯಾಚರಣೆಯಲ್ಲಿರುತ್ತದೆ ಹಾಗೂ ರೂ.92.80 ಲಕ್ಷದ ಕೋವಿಡ್ ಆಸ್ಪತ್ರೆ ಮಕ್ಕಳ ವಿಭಾಗದ ಚಿಕಿತ್ಸೆಗೆ ಉಪಕರಣ ಅಳವಡಿಸಲು ಅರವಳಿಕೆ ವಿಭಾಗದ ರೂ.225.35 ಲಕ್ಷ, ಬಯೋ ಕೆಮಿಸ್ಟ್ರಿ ರೂ.2.77 ಲಕ್ಷ, ಜನರಲ್ ಮಡಿಸಿನ್ ವಿಭಾಗ ರೂ.14.34 ಲಕ್ಷ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಭಾಗಮಂಡಲದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾದಲ್ಲಿ ನಿಭಾಯಿಸಲು ಮುಂಜಾಗ್ರತಾ ಕ್ರಮವಾಗಿ ಹೋಂ ಗಾರ್ಡ್ ಸಿಬ್ಬಂದಿಗಳನ್ನು ಈಗಾಗಲೇ ನಿಯೋಜಿಸಲಾಗಿದ್ದು, ತಲಕಾವೇರಿಯಲ್ಲಿ ದಿನಾಂಕ:05-08-2020ರಂದು ತಡರಾತ್ರಿ ಸುರಿದ ಮಳೆಗೆ ತಲಕಾವೇರಿಯ ಬ್ರಹ್ಮಗಿರಿ ಬೆಟ್ಟದ ಒಂದು ಭಾಗ ಜರಿದು ತಲಕಾವೇರಿಯ ದೇವಸ್ಥಾನದ ಅರ್ಚಕರುಗಳ ಎರಡು ಮನೆ ಮೇಲೆ ಬಿದ್ದಿದ್ದು, ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣಾ ತಂಡದ ತುರ್ತು ಕಾರ್ಯಚರಣೆ ತಂಡವು ಕಾರ್ಯಚರಣೆ ಕೈಗೊಂಡಿದ್ದು, 05 ಜನ ಕಾಣೆಯಾಗಿರುವುದಾಗಿ ಕಂಡುಬಂದಿದ್ದು, ನುರಿತ ರಕ್ಷಣಾ ತಂಡ ತೆರಳಿದ್ದು, ರಕ್ಷಣಾ ಕಾರ್ಯದಲ್ಲಿ ತೊಡಗಿರುತ್ತದೆ.<br><br>ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಟ್ಟು 550 ಕೋವಿಡ್-19 ದೃಢಪಟ್ಟಿದ್ದು ಈ ಪೈಕಿ 339 ಗುಣಮುಖರಾಗಿದ್ದು, 10 ಪ್ರಕರಣ ಮೃತಪಟ್ಟಿದ್ದು, ಹಾಲಿ 201 ಪ್ರಕರಣ ಚಿಕಿತ್ಸೆಯಲ್ಲಿರುತ್ತದೆ. ಈ ಸಂಬಂಧ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಿ |

| | | |
|---|---|---|
| | | ಜಿಲ್ಲಾಸ್ಪತ್ರೆಯಲ್ಲಿ ನೀಡುವ ಕೋವಿಡ್ ಹೊರತಾದ ಚಿಕಿತ್ಸೆಗೆ ಖಾಸಗಿ (ಅಶ್ವಿನಿ) ಆಸ್ಪತ್ರೆಯನ್ನು ಪಡೆದು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ, ಅಲ್ಲದೇ ಕೋವಿಡ್-19 ಪ್ರಕರಣಕ್ಕೆ ಸಂಬಂಧಿಸಿದಂತೆ 332 ಕಂಟೈನ್‌ಮೆಂಟ್ ವಲಯ ಸ್ಥಾಪಿಸಿ ಸೋಂಕು ಹರಡದಂತೆ ಕ್ರಮವಹಿಸಲಾಗಿದೆ ಮತ್ತು ಕ್ವಾರಂಟೈನ್ ವಾಚ್ ಆಪ್‌ನ್ನು ತಾಲ್ಲೂಕುವಾರು ಪರಿಶೀಲಿಸಿ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ. |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಕೋವಿಡ್-19 ಸೋಂಕಿತ ರೋಗಿಯ ಪ್ರಥಮ ಮತ್ತು ದ್ವಿತೀಯ ಸಂಪರ್ಕಿತರಿಂದ ಸೋಂಕುಗಳು ಹೆಚ್ಚಾಗಿ ಹರಡುತ್ತಿದ್ದು, ಸದರಿ ಪ್ರಥಮ ಮತ್ತು ದ್ವಿತೀಯ ಸಂಪರ್ಕಿತರು ಸರ್ಕಾರ ಸೂಚಿಸಿದ ನಿಗದಿತ ದಿನದಲ್ಲಿ ಕ್ವಾರೈಂಟಿನ್‌ನಲ್ಲಿರುವಂತೆ ನೋಡಿಕೊಳ್ಳಬೇಕು ಹಾಗೂ 1 ರೋಗಿಗೆ ಕನಿಷ್ಠ 15 ಪ್ರಥಮ ಸಂಪರ್ಕಿತರನ್ನು ಪತ್ತೆ ಹಚ್ಚಬೇಕು ಮತ್ತು ಸೋಂಕು ವ್ಯಕ್ತಿಯ ಸಂಪರ್ಕಿತರಿಂದ ಇತರರಿಗೆ ಸೋಂಕು ಹರಡದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಹಾಗೂ ಗಂಟಲ ದ್ರವ ಪರೀಕ್ಷೆಗೆ ನೀಡಿದ ನಂತರ ಸೋಂಕು ಇಲ್ಲದ ಇರುವ ಬಗ್ಗೆ ವರದಿ ಬರುವ ತನಕ ಸಾರ್ವಜನಿಕ ಸ್ಥಳದಲ್ಲಿ ಓಡಾಡದಂತೆ ಪತ್ರಿಕೆ ಮೂಲಕ ಪ್ರಚಾರ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾ ವಾರ್ತಾಧಿಕಾರಿಯವರಿಗೆ ಸೂಚಿಸಲಾಯಿತು.<br><br>ಪ್ರಸ್ತುತ ಮಳೆಯಿಂದಾಗುತ್ತಿರುವ ಹಾನಿಯಿಂದ ಜಿಲ್ಲೆಯ ಹಲವಾರು ಕಡೆ ವಿದ್ಯುತ್ ಕಂಬ ಮತ್ತು ಮಾರ್ಗಗಳ ಹಾನಿಯಿಂದ ವಿದ್ಯುತ್ ಪೂರೈಕೆ ಇಲ್ಲದಿರುವ ಬಗ್ಗೆ ಹಲವಾರು ಸಾರ್ವಜನಿಕ ದೂರುಗಳು ಬರುತ್ತಿದ್ದು ಈ ಬಗ್ಗೆ ಮಾಹಿತಿ ನೀಡಲು ಹಾಗೂ ಕ್ರಮ ಕೈಗೊಳ್ಳಲು ಕಾರ್ಯನಿರ್ವಹಕ ಇಂಜಿನಿಯರ್ (ವಿ) ಕಾ ಮತ್ತು ಪಾ ವಿಭಾಗ, ಸೆಸ್ಕ್, ಮಡಿಕೇರಿ ರವರಿಗೆ ಸೂಚನೆ ನೀಡಲಾಯಿತು.<br><br>ಜಿಲ್ಲೆಯಲ್ಲಿ ಭಾರಿ ಮಳೆಯಿರುವುದರಿಂದ ಸರ್ಕಾರಿ ಕಛೇರಿಗೆ ಗೈರು ಹಾಜರಾಗುವ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ಹಾಗೂ ಅಪಾಯಕಾರಿ ಮತ್ತು ದುರ್ಬಲ ಸ್ಥಳದಲ್ಲಿ ವಾಸಿಸುತ್ತಿರುವವರನ್ನು ಮೊದಲೇ ತೆರವು ಮಾಡುವುದು ಹಾಗೂ ಮಳೆ |

| | | |
|---|---|---|
| | | ಸಂದರ್ಭದಲ್ಲಿ ಕೋವಿಡ್ ಹರಡುವ ಸಾಧ್ಯತೆ ಹೆಚ್ಚಾಗಿರುವುದರಿಂದ ಅದಷ್ಟು ಕ್ರಿಯಾಶೀಲರಾಗಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ ಕೋವಿಡ್‌ನಿಂದ ಮತ್ತು ಪ್ರಕೃತಿ ವಿಕೋಪದಿಂದ ಜನರ ಪ್ರಾಣ ರಕ್ಷಣೆಗೆ ಪ್ರಯತ್ನವನ್ನು ಮಾಡಬೇಕಾಗಿ ನಿರ್ದೇಶಿಸಲಾಯಿತು. |
| B | ಕ್ಷೇತ್ರ ವೀಕ್ಷಣೆ | ಜಿಲ್ಲಾ ಆಸ್ಪತ್ರೆಗಳಿಗೆ ಭೇಟಿ ನೀಡಿ ಅಲ್ಲಿನ ರೋಗಿಗಳಿಗೆ ಮುಂಜಾಗ್ರತಾ ಕ್ರಮವಾಗಿ ಮಾಡಿರುವ ವ್ಯವಸ್ಥೆಗಳನ್ನು ವೀಕ್ಷಿಸಲಾಯಿತು. |

(ವಿ.ಅನ್ಬುಕುಮಾರ್)

ವಿಶೇಷ ಆಯುಕ್ತರು (ಆಡಳಿತ) ಹಾಗೂ

ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ:06.08.2020 ರಂದು ವಿಶೇಷ ಆಯುಕ್ತರು, (ಆಡಳಿತ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಇವರ ಅಧ್ಯಕ್ಷತೆಯಲ್ಲಿ, ಕೋವಿಡ್-19 ಮತ್ತು ಮುಂಬರುವ ಮಳೆ ಹಾನಿ ಮುಂಜಾಗ್ರತ ಸಂಬಂಧ ನಡೆದ ಸಭೆಯ ನಡವಳಿ**

*****

**ಹಾಜರಾತಿ: ಹಾಜರಾತಿ ಪಟ್ಟಿಯಂತೆ.**

ಅಪರ ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲೆ, ಇವರು ಸಭೆಗೆ ಆಗಮಿಸಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿ ಕೊಡಗು ಜಿಲ್ಲೆ, ಇವರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಪ್ರಾರಂಭದಲ್ಲಿ ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್-19 ರ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಸೂಚಿಸಿದರು.

ಅಪರ ಜಿಲ್ಲಾಧಿಕಾರಿಯವರು ಮಾತನಾಡಿ ಜಿಲೆಯಲ್ಲಿ ಇಲ್ಲಿಯವರೆಗೆ ಒಟ್ಟು 550 ಕೋವಿಡ್-19 ದೃಢಪಟ್ಟಿದ್ದು, ಈ ಪೈಕಿ 339 ಗುಣಮುಖರಾಗಿದ್ದು, 10 ಪ್ರಕರಣ ಮೃತಪಟ್ಟಿದ್ದು, ಹಾಲಿ 201 ಪ್ರಕರಣ ಚಿಕಿತ್ಸೆಯಲ್ಲಿರುತ್ತದೆ. ಈ ಸಂಬಂಧ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಿ ಜಿಲ್ಲಾಸ್ಪತ್ರೆಯಲ್ಲಿ ನೀಡುವ ಕೋವಿಡ್ ಹೊರತಾದ ಚಿಕಿತ್ಸೆಗೆ ಖಾಸಗಿ (ಅಶ್ವಿನಿ) ಆಸ್ಪತ್ರೆಯನ್ನು ಪಡೆದು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅಲ್ಲದೇ ಕೋವಿಡ್-19 ಪ್ರಕರಣಕ್ಕೆ ಸಂಬಂಧಿಸಿದಂತೆ 332 ಕಂಟೈನ್ ಮೆಂಟ್ ವಲಯ ಸ್ಥಾಪಿಸಿ ಸೋಂಕು ಹರಡದಂತೆ ಕ್ರಮವಹಿಸಲಾಗಿದೆ. ಮತ್ತು ಕ್ವಾರಂಟೈನ್ ವಾಚ್ ಆ್ಯಪ್‌ನ್ನು ತಾಲ್ಲೂಕುವಾರು ಪರಿಶೀಲಿಸಿ ಕ್ರಮಕೈಗೊಳ್ಳಲು ನಿರ್ಧರಿಸಲಾಗಿದೆ. ಎಂದು ಸಭೆಯ ಗಮನಕ್ಕೆ ತಂದರು.

ಮುಂದುವರಿದು ಜಿಲ್ಲೆಯ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಕೋವಿಡ್-19 ರ ಸಂಬಂಧ ಮಾದರಿ ಪರೀಕ್ಷೆಗಾಗಿ ರೂ.105.44 ಲಕ್ಷದಲ್ಲಿ ಲ್ಯಾಬ್ ಸ್ಥಾಪಿಸಲಾಗಿದ್ದು ಕಾರ್ಯಚರಣೆಯಲ್ಲಿರುತ್ತದೆ. ಮತ್ತು ಆಸ್ಪತ್ರೆಗೆ ರೂ.40 ಲಕ್ಷದ ಆಕ್ಸಿಜನ್ ಪೈಪ್ ಲೈನ್ ಸಿಸ್ಟಮ್ ಅಳವಡಿಸಿದ್ದು ಕಾರ್ಯಚರಣೆಯಲ್ಲಿರುತ್ತದೆ, ಹಾಗೂ ರೂ.92.80 ಲಕ್ಷದ ಕೋವಿಡ್ ಆಸ್ಪತ್ರೆ ಮಕ್ಕಳ ವಿಭಾಗದ ಚಿಕಿತ್ಸೆಗೆ ಉಪಕರಣ ಅಳವಡಿಸಲು ಅರವಳಿಕೆ ವಿಭಾಗದ ರೂ.225.35 ಲಕ್ಷ, ಬಯೋ ಕೆಮಿಸ್ಟ್ರಿ ರೂ.2.77 ಲಕ್ಷ, ಜನರಲ್ ಮಡಿಸಿನ್ ವಿಭಾಗ ರೂ.14.34ಲಕ್ಷ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಕೋವಿಡ್ 19 ಸಂಬಂಧ ಸೂಕ್ತ ಕ್ರಮಕ್ಕೆ ಪ್ರತಿ ತಾಲ್ಲೂಕಿಗೆ ರೂ.1 ಕೋಟಿಯಂತೆ ಮೂರು ತಾಲ್ಲೂಕಿನ ತಹಶೀಲ್ದಾರರಿಗೆ 3 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡಿ ಜಿಲ್ಲೆಯಲ್ಲಿ ಒಟ್ಟು ಜಿಲ್ಲೆಯಲ್ಲಿ ಒಟ್ಟು 15897 ಗಂಟಲ ದ್ರವ ಮಾದರಿ ಪಡೆದು ಪರೀಕ್ಷಿಸಲಾಗಿದ್ದು 15007 ನೆಗೆಟಿವ್ ಆಗಿದ್ದು ಇನ್ನುಳಿದ 298 ಪರೀಕ್ಷ ವರದಿ ನಿರೀಕ್ಷಿಸಲಾಗಿದೆ. ಅಲ್ಲದೇ ಜಿಲ್ಲೆಯಲ್ಲಿ ಪೋಲಿಸರ 623 ಮಾದರಿಯನ್ನು ಪರೀಕ್ಷಿಸಲಾಗಿದೆ. 1182 ವ್ಯಕ್ತಿಗಳನ್ನು ಹೋಮ್ ಕ್ವರಂಟೆನ್‌ನಲ್ಲಿರಿಸಿ ನಿಗವಹಿಸಲಾಗಿದೆ. ಜಿಲ್ಲೆಯಲ್ಲಿ ಮಾದರಿ ಸಂಗ್ರಹಿಸುವ ಕೇಂದ್ರ 14, ಕೋವಿಡ್ ಕೇರ್ ಸೆಂಟರ್ 3, ಕೋವಿಡ್ ಹೆಲ್ತ್ ಸೆಂಟರ್ 9, ಫೀವರ್ ಕ್ಲಿನಿಕ್ 4, ಮೊಬೈಲ್ ಸ್ವಬ್ ಕಲೆಕ್ಷನ್ 5, ವ್ಯವಸ್ಥೆ ಕಲ್ಪಿಸಿ ಸೋಂಕು ವ್ಯಾಪಕವಾಗಿ ಹರಡದಂತೆ ಸೂಕ್ತ ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಕೋವಿಡ್-19 ಸೋಂಕಿತ ರೋಗಿಯ ಪ್ರಥಮ ಮತ್ತು ದ್ವಿತಿಯ ಸಂಪರ್ಕಿತರಿಂದ ಸೋಕುಗಳು ಹೆಚ್ಚಾಗಿ ಹರಡುತಿದ್ದು ಸದರಿ ಪ್ರಥಮ ಮತ್ತು ದ್ವಿತಿಯ ಸಂಪರ್ಕಿತರು ಸರ್ಕಾರ ಸೂಚಿಸಿದ ನಿಗದಿತ ದಿನದಲ್ಲಿ ಕ್ವಾರೈಂಟೆನ್‌ನಲ್ಲಿರುವಂತೆ ನೋಡಿಕೊಳ್ಳಬೇಕು. ಮತ್ತು 1 ರೋಗಿಗೆ ಕನಿಷ್ಠ 15 ಪ್ರಥಮ ಸಂಪರ್ಕಿತರನ್ನು ಪತ್ತೆ ಹಚ್ಚಬೇಕು, ಹಾಗೂ ಸೋಂಕು ವ್ಯಕ್ತಿಯ ಸಂಪರ್ಕಿತರಿಂದ ಇತರರಿಗೆ ಸೋಂಕು ಹರಡದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಸೂಚಿಸಿದರು. ಮತ್ತು ಗಂಟಲ ದ್ರವ ಪರೀಕ್ಷೆಗೆ ನೀಡಿದ ನಂತರ ಸೋಂಕು ಇಲ್ಲದ ಇರುವ ಬಗ್ಗೆ ವರದಿ ಬರುವ ತನಕ ಸಾರ್ವಜನಿಕ ಸ್ಥಳದಲ್ಲಿ ಓಡಾಡದಂತೆ ಪತ್ರಿಕೆ ಮೂಲಕ ಪ್ರಚಾರ ಮಾಡಲು ಸೂಕ್ತ ಕ್ರಮಕೈಗೊಳ್ಳಲು ಜಿಲ್ಲಾ ವಾರ್ತಾಧಿಕಾರಿಯವರಿಗೆ ಸೂಚಿಸಿದರು.

ಡಾ.ಮಹೇಶ್‌ರವರು ಮಾತನಾಡಿ ಸೋಂಕು ವ್ಯಕ್ತಿಯ ಸಂಪರ್ಕಿತ ತಂಕಿತರಿಂದ ಸೋಂಕು ಹರಡದಂತೆ ತಡೆಯಲು ಸಂಪರ್ಕಿತರನ್ನು ಪರೀಕ್ಷಿಸಲು ಜಿಲ್ಲೆಯಲ್ಲಿ ತಂಡ ರಚಿಸಿದ್ದು ಸದರಿ ತಂಡದಲ್ಲಿ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳ ಮೂಲಕ ನಿಗಾವಹಿಸಲಾಗುತಿದೆ. ಹಾಗೂ ಕೆಲವು ರೋಗಿಗಳಿಗೆ ಸ್ವತಃ ಪರೀಕ್ಷಿಸಲು ಪಲ್ಸ್ ಆಕ್ಸಿಮೀಟರ್ ನೀಡಲಾಗಿರುವ ಬಗ್ಗೆ ಮಾಹಿತಿ ನೀಡಿದರು.

ಮಾನ್ಯ ಕಾರ್ಯದರ್ಶಿಯವರು ಪ್ರಸ್ತುತ ಮಳೆಯಿಂದಾಗುತಿರುವ ಹಾನಿ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಸೂಚಿಸಿದರು.

ಅಪರ ಜಿಲ್ಲಾಧಿಕಾರಿಯವರು ಮಾತನಾಡಿ ಮಡಿಕೇರಿ ತಾಲ್ಲೂಕಿನ ಭಾಗಮಂಡಲದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾದಲ್ಲಿ ನಿಭಾಯಿಸಲು ಮುಂಜಾಗ್ರತಾ ಕ್ರಮವಾಗಿ ಭಾಗಮಂಡಲಕ್ಕೆ ಹೋಂ ಗಾರ್ಡ್ ಸಿಬ್ಬಂದಿಗಳನ್ನು ಈಗಾಗಲೇ ನಿಯೋಜಿಸಲಾಗಿದ್ದು ಭಾಗಮಂಡಲ ವ್ಯಾಪ್ತಿಯ ತಲಕಾವೇರಿಯಲ್ಲಿ ನಿನ್ನೆ ತಡರಾತ್ರಿ ಸುರಿದ ಮಳೆಗೆ ತಲಕಾವೇರಿಯ ಬ್ರಹ್ಮಗಿರಿ ಬೆಟ್ಟದ ಒಂದು ಭಾಗ ಜರಿದು ತಲಕಾವೇರಿಯ ದೇವಸ್ಥಾನದ ಅರ್ಚಕರುಗಳ ಎರಡು ಮನೆ ಮೇಲೆ ಬಿದ್ದಿದು, ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣಾ ತಂಡದ ತುರ್ತು ಕಾರ್ಯಚರಣೆ ತಂಡವು ಸ್ಥಳಕ್ಕೆ ಧಾವಿಸಿ ಕಾರ್ಯಚರಣೆ ಕೈಗೊಂಡಿದ್ದು ಇವರ ಮಾಹಿತಿಯ ಪ್ರಕಾರ ಎರಡು ಮನೆಗಳ ಪೈಕಿ ಒಬ್ಬರು ಅರ್ಚಕರು ಹೊಸ ಮನೆ ನಿರ್ಮಿಸಿಕೊಂಡು ಕುಟುಂಬದೊಂದಿಗೆ ಭಾಗಮಂಡಲದಲ್ಲಿ ನೆಲೆಸಿರುತ್ತಾರೆ. ತಲಕಾವೇರಿಯ ಮನೆ ಖಾಲಿ ಇರುತ್ತದೆ. ಇನ್ನೊಬ್ಬ ಅರ್ಚಕರು ತಲಕಾವೇರಿ ಮನೆಯಲ್ಲಿಯೇ ಕುಟುಂಬದೊಂದಿಗೆ ವಾಸವಿದ್ದು 05 ಜನ ಕಾಣೆಯಾಗಿರುವ ಮಾಹಿತಿ ಇರುತ್ತದೆ. ನುರಿತ ರಕ್ಷಣಾ ತಂಡ ತೆರಳಿದ್ದು ರಕ್ಷಣಾ ಕಾರ್ಯದಲ್ಲಿ ತೊಡಗಿರುತ್ತದೆ. ಎಂದು ಮಾಹಿತಿ ನೀಡಿದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಪ್ರಸ್ತುತ ಮಳೆಯಿಂದಾಗುತಿರುವ ಹಾನಿಯಿಂದ ಜಿಲ್ಲೆಯ ಹಲವಾರು ಕಡೆ ವಿದ್ಯುತ್ ಕಂಬ ಮತ್ತು ಮಾರ್ಗಗಳ ಹಾನಿಯಿಂದ ವಿದ್ಯುತ್ ಪೂರೈಕೆ ಇಲ್ಲದಿರುವ ಬಗ್ಗೆ ಹಲವಾರು ಸಾರ್ವಜನಿಕ ದೂರುಗಳು ಬರುತಿದ್ದು ಈ ಬಗ್ಗೆ ಮಾಹಿತಿ ನೀಡಲು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ, ಸೆಸ್ಕ್, ಮಡಿಕೇರಿ. ಇವರಿಗೆ ಈ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಸೂಚಿಸಿದರು.

ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ, ಸೆಸ್ಕ್, ಮಡಿಕೇರಿ. ಇವರು ಮಾತನಾಡಿ ಜಿಲ್ಲೆಯಲ್ಲಿ ಮಳೆಯಿಂದ ವಿದ್ಯುತ್ ಕಂಬ ಮತ್ತು ಮಾರ್ಗಗಳು ಹಾನಿಯಾಗಿರುವುದರಿಂದ ವಿದ್ಯುತ್ ಸಂಪರ್ಕ ಸರಿಪಡಿಸಲು ಈಗಾಗಲೇ ಕ್ರಮಕೈಗೊಂಡಿದ್ದು ಎಲ್ಲಾ ಕಡೆ ಹಾನಿಯಾಗಿರುವುದರಿಂದ ಸ್ವಲ್ಪ ತಡವಾಗಿರುತ್ತದೆ ಮತ್ತು ಈ ಸಂಬಂಧ ಕಾಲ್ ಸೆಂಟರ್‌ನಲ್ಲಿ ದಾಖಲಾಗಿರುವ ದೂರಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮಕೈಗೊಳ್ಳಲಾಗಿದೆ. ಬಾಕಿ ಇರುವ ದೂರಿಗೆ ಸಂಬಂದಿಸಿದಂತೆ ಕೂಡಲೇ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಾನ್ಯ ಕಾರ್ಯದರ್ಶಿಯವರು ಮಾತನಾಡಿ ಜಿಲ್ಲೆಯಲ್ಲಿ ಬಾರಿ ಮಳೆಯಿರುವುದರಿಂದ ಸರ್ಕಾರಿ ಕಛೇರಿಗೆ ಗೈರು ಹಾಜರಾಗುವ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳುವುದು, ಅಪಾಯಕಾರಿ ಮತ್ತು ದುರ್ಬಲ ಸ್ಥಳದಲ್ಲಿ ವಾಸಿಸುವವರನ್ನು ಮೊದಲೇ ತೆರವು ಮಾಡುವುದು, ಹಾಗೂ ಮಳೆ ಸಂದರ್ಭದಲ್ಲಿ ಕೋವಿಡ್ ಹರಡುವ ಸಾಧ್ಯತೆ ಹೆಚ್ಚಾಗಿರುವುದರಿಂದ ಆದಷ್ಟು ಕ್ರಿಯಾಶೀಲರಾಗಿ, ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿ ಕೋವಿಡ್‌ನಿಂದ ಮತ್ತು ಪ್ರಕೃತಿ ವಿಕೋಪದಿಂದ ಜನರ ಪ್ರಾಣ ಉಳಿಸಲಿಕ್ಕೆ ಆದಷ್ಟು ಪ್ರಯತ್ನವನ್ನು ಮಾಡಬೇಕು ಎಂದು ತಿಳಿಸಿ ಈ ಸಂಬಂಧ ಸರ್ಕಾರದಿಂದ ಯಾವುದಾದರೂ ಅಗತ್ಯವಿದ್ದಲ್ಲಿ ತಿಳಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ ಸಭೆಯನ್ನು ಮುಗಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಪರ ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.

ಸಹಿ/-
ವಿಶೇಷ ಆಯುಕ್ತರು, (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು ಹಾಗೂ ಕೊಡಗು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ

ಸಂಖ್ಯೆ:ಪ್ರವಿ/23/2020-21, ದಿನಾಂಕ:06.08.2020.

ಪ್ರತಿಯನ್ನು: ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

**ದಿನಾಂಕ: 18.08.2020 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಕೋವಿಡ್-19 ಪ್ರಗತಿ ಪರೀಸಿಲನಾ ಸಭೆಯ ನಡುವಳಿಗಳು**

**ಹಾಜರಿದ್ದವರು:**

1. ಜಿಲ್ಲಾಧಿಕಾರಿಗಳು, ಬಳ್ಳಾರಿ.
2. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು,ಬಳ್ಳಾರಿ
3. ಅಪರ ಜಿಲ್ಲಾಧಿಕಾರಿಗಳು, ಬಳ್ಳಾರಿ.
4. ನಿರ್ದೇಶಕರು, ವಿಜಯನಗರ ವೈದ್ಯಕೀಯ ಸಂಸ್ಥೆ, ಬಳ್ಳಾರಿ.
5. ಜಿಲ್ಲಾ ಆರೋಗ್ಯ ಅಧಿಕಾರಿಗಳು, ಬಳ್ಳಾರಿ
6. ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್ , ಬಳ್ಳಾರಿ.
7. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ಬಳ್ಳಾರಿ
8. ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ
9. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ಬಳ್ಳಾರಿ.

******

ಜಿಲ್ಲಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಮತ್ತು ಸಭೆಯಲ್ಲಿ ಭಾಗವಹಿಸಿದ ಆಧಿಕಾರಿಗಳನ್ನು ಸ್ವಾಗತಿಸಿದರು

ನಂತರ ಬಳ್ಳಾರಿ ಜಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಜಿಲ್ಲಾ ಮಟ್ಟದ ಕೋವಿಡ್-19 ನ ಪ್ರಗತಿಯ ಕ್ರಮಗಳ ಕುರಿತು ವಿವರಣೆ ಬಯಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್ 19 ಗೆ ಸಂಬಂಧಿಸಿದಂತೆ ಈಗಾಗಲೇ 700 ಹಾಸಿಗೆಗಳ ಸಾಮರ್ಥ್ಯದ 04 ಕೋವಿಡ್ ಆಸ್ಪತ್ರೆಗಳು ( ಜಿಲ್ಲಾ ಆಸ್ಪತ್ರೆ, ಪ್ರಧಾನ ಮಂತ್ರಿ ಟ್ರಾಮಾ ಸೆಂಟರ್, ಸಂಜೀವಿನಿ ಆಸ್ಪತ್ರೆ, ಹಾಗೂ ವಿಮ್ಸ್ ಆಸ್ಪತ್ರೆ ) ಕಾರ್ಯನಿರ್ವಹಿಸುತ್ತಿವೆ. ವಿಮ್ಸ್ ಡೆಂಟಲ್ ಕಾಲೇಜು, ಒಪಿಜೆ ಕೇಂದ್ರ, ವಿಮ್ಸ್ ಒಲ್ಡ್ ಡೈರಕ್ಟರ್ ಕಚೇರಿ, ಟಿಬಿ ಸ್ಯಾನಿಟೋರಿಮ್ ಹಾಗೂ ತಾಲೂಕು ಮಟ್ಟದ 07 ಸಾರ್ವಜನಿಕ ಆಸ್ಪತ್ರೆಗಳಲ್ಲಿ ತಲಾ 20 ಬೆಡ್ ಸೇರಿದಂತೆ 28 ಕೋವಿಡ್ ಹೆಲ್ತ್ ಸೆಂಟರ್‌ಗಳು (550 ಹಾಸಿಗೆಗಳು) ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ 11 ಪ್ರಮುಖ ಹಾಸ್ಟೇಲ್‌ಗಳನ್ನು ಕೋವಿಡ್ ಕೇರ್ ಸೆಂಟರ್‌ಗಳಾಗಿ ಪರಿವರ್ತಿಸಿದ್ದು ( 1100 ಹಾಸಿಗೆಗಳು ) ದಿನದ 24 ಗಂಟೆಗಳ ಕಾಲ ವೈದ್ಯಕೀಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿವುದಾಗಿ ತಿಳಿಸಿದರು.

ಗಂಭೀರ ಕಾಯಿಲೆಯಿಂದ ಬಳಲುವ ಕೋವಿಡ್ ರೋಗಿಗಳ ತುರ್ತು ಆರೈಕೆಗಾಗಿ 92 ವೆಂಟಿಲೇಟರ್ ಗಳನ್ನು, 105 ಐಸಿಯು ಬೆಡ್ಗಳನ್ನು ಸಿದ್ದಪಡಿಸಲಾಗಿದೆ. 45 ಹೆಚ್‌ಎಫ್‌ಎನ್‌ಸಿ ಬೆಡಗಳ ವ್ಯವಸ್ಥೆ ಮಾಡಲಾಗಿದೆ ಹಾಗೂ 1213 ಆಕ್ಸಿಜನ್ ಬೆಡ್ಸ್ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ವಿವರಿಸಿದರು.

ಕೋವಿಡ್ ಡೈಯಾಲಿಸ್ ರೋಗಿಗಳಿಗೆ 2 ಡೈಯಾಲಿಸ್ ಮಿಷಿನ್ ಹಾಗೂ 01 ಆರ್‌ಓ ಪ್ಲಾಂಟ್ ಒಂದು ವಾಷಿಂಗ್ ಮಷಿನ್ ಅಳವಡಿಸಲಾಗಿದೆ. ಜಿಲ್ಲಾ ಆಸ್ಪತ್ರೆಯಲ್ಲಿ 6 ಸಾವಿರ ಲೀಟರ್ ಆಕ್ಸಿಜನ್ ಪ್ಲಾಂಟ್ ಒಳಗೊಂಡಂತೆ ವಿಮ್ಸ್ ಡೆಂಟಲ್ ಕಾಲೇಜ್ 10 ಸಾವಿರ ಕಿಲೋ ಲೀಟರ್, ಟ್ರಾಮಾ ಕೇರ್ ಸೆಂಟರನಲ್ಲಿ 13 ಸಾವಿರ ಕಿಲೋ ಲೀಟರ್ ಆಕ್ಸಿಜನ್ ಪ್ಲಾಂಟ್ ಅಳವಡಿಸಲಾಗಿದೆ. ಎಲ್ಲಾ ರೋಗಿಗಳಿಗೆ ಬಿಸಿ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ. ಹೊಸದಾಗಿ 15 ಹೆಚ್‌ಎಫ್‌ಎನ್‌ಸಿ, 05 (ಪೋರ್ಟೆಬಲ್) ಎಕ್ಸ್ರೆ ಮೇಷಿನ್ ಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿ ಸಭೆಗೆ ವಿವರಿಸಿದರ.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಸರ್ಕಾರದಿಂದ ಜಿಲ್ಲೆಗೆ ಕೋವಿಡ್-19 ಪರೀಕ್ಷೆಗಳ ಗುರಿಗಳನ್ನು ನಿಗಧಿಪಡಿಸಿದ್ದು, ಬಳ್ಳಾರಿ ಜಿಲ್ಲೆಗೆ ದಿನಕ್ಕೆ **1500 RAT** ಪರೀಕ್ಷೆಗಳು ಮತ್ತು **450 RTPCR** ಪರೀಕ್ಷೆಗಳು ಒಳಪಡಿಸಲು ಗುರಿ ನಿಗಧಿಯಾಗಿರುತ್ತದೆ. ಅದರಂತೆ ಸರಾಸರಿ ಪ್ರತಿದಿನ **2350 RAT** ಪರೀಕ್ಷೆಗಳು ಮತ್ತು **615 RTPCR** ಪರೀಕ್ಷೆಗಳಿಗೆ ಒಳಪಡಿಸಲಾಗುತ್ತದೆ. ಕೋವಿಡ ಪರೀಕ್ಷೆಗಳಲ್ಲಿ ರಾಜ್ಯದಲ್ಲಿ ಜಿಲ್ಲೆಯು ಎರಡನೇ ಸ್ಥಾನದಲ್ಲಿದೆ. ಆದ್ದರಿಂದ ಸಕಾರತ್ಮಕ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುತ್ತಿವೆ ಎಂದು ವಿವರಿಸಿದರು.

ಇಲ್ಲಿಯವರೆಗೆ **5194** ಮನೆ ಪ್ರತ್ಯಕತೆಯಲ್ಲಿ ಆರೈಕೆ ಪಡೆಯುತ್ತಿದ್ದು, ಅದರಲ್ಲಿ **2842** ಸಕಾರತ್ಮಕ ಪ್ರಕರಣಗಳು ಮನೆ ಪ್ರತ್ಯಕತೆಯಲ್ಲಿ ಆರೈಕೆಯನ್ನು ಯಶ್ವಸಿಯಾಗಿ ಪೂರ್ಣಗೊಳಿಸಿ ಆರೋಗ್ಯವಾಗಿದ್ದಾರೆ ಮತ್ತು ಇನ್ನುಳಿದ **2842** ಸಕಾರತ್ಮಕ ಪ್ರಕರಣಗಳು ಸಕ್ರೀಯವಾಗಿ ಮನೆ ಪ್ರತ್ಯಕತೆಯಲ್ಲಿ ಆರೈಕೆ ಪಡೆಯುತ್ತಿದ್ದಾರೆ.

ಈ ಕುರಿತು ಜಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲೆಯಲ್ಲಿ ಪರೀಕ್ಷೆಗಳು ಹೆಚ್ಚಾಗಿ ಮಾಡುತ್ತಿರುವದರಿಂದ ಬಹುಬೇಗ ರೋಗ ಲಕ್ಷಣಗಳ ರಹಿತ ಸಕಾರತ್ಮಕ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವದರಿಂದ ಸದರಿಯವರು ಮನೆಯ ಆರೈಕೆಯಲ್ಲಿ ಇರುವವರ ಸಂಖ್ಯೆ ಹೆಚ್ಚಾಗಿ ಕಂಡು ಬಂದಿರುವುದು ಮತ್ತು ಮರಣದ ಪ್ರಮಾಣ ಕಡಿಮೆಯಾಗಿರುವುದು ಸಕಾರತ್ಮಕ ಬೆಳವಣಿಗೆಗೆ ನಿಮ್ಮೆಲ್ಲರ ಶ್ರಮವಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಮುಂದುವರೆದು ಇನ್ನು ಜಿಲ್ಲೆಯ ನಗರ ಪ್ರದೇಶಗಳಲ್ಲಿ ಮತ್ತು ಕೊಳಚೆ ಪ್ರದೇಶಗಳಲ್ಲಿ ಪರೀಕ್ಷೆಗಳು ಹೆಚ್ಚು ಹೆಚ್ಚು ಮಾಡುವಂತೆ ಕ್ರಮವಹಿಸಲು ಸೂಚಿಸಿದರು.

**ಸಂಪರ್ಕಿತರನ್ನು ಸಂಪರ್ಕ ಪತ್ತೆ ಹಚ್ಚುವ ಆಪ್ (CT App):** ಜಿಲ್ಲೆಯಲ್ಲಿ ದಿನಾಂಕ: 17.08.2020 ರ ಅಂತ್ಯಕ್ಕೆ **14663** ಸಕಾರಾತ್ಮಕ ಕೋವಿಡ್ ವರದಿಯಾಗಿದ್ದು, ಎಲ್ಲಾ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ವಿವರಗಳನ್ನು 24 ಗಂಟೆಯೊಳಗಾಗಿ ಸಂಪರ್ಕ ಪತ್ತೆ ಹಚ್ಚುವ ಆಪ್ (CT App) ನಲ್ಲಿ ದಾಖಲಿಸಲು ಕ್ರಮವಹಿಸಲಾಗಿದೆ. ಈ ವರೆಗೆ **64319** ಪ್ರೈಮರಿ ಕಾಂಟ್ಯಾಕ್ಟ್ಸ್ ಮತ್ತು **17384** ಸೆಕೆಂಡರಿ ಕಾಂಟ್ಯಾಕ್ಟ್ಸ್ ಗಳನ್ನು ದಾಖಲು ಮಾಡಲಾಗಿ ಅವರನ್ನು ಅನುಸರಣೆ ಮಾಡಲಾಗಿತ್ತಿದೆ ಎಂದು ತಿಳಿಸಿದರು. ಮತ್ತು ಶಿಕ್ಷಣ ಇಲಾಖೆಯ ತಂಡಗಳೊಂದಿಗೆ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ವಿವರಗಳನ್ನು ಪತ್ತೆ ಹಚ್ಚುವುದು ಸದರಿ ವಿವರಗಳನ್ನು ಸಲ್ಲಿಸುವುದರಿಂದ ಹೆಚ್ಚು ಹೆಚ್ಚು ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಗುರುತಿಸಲು ಸಾದ್ಯವಾಗುತ್ತಿದೆ ಎಂದು ವಿವರಿಸಿದರು.

**ಕ್ವಾರೆಂಟೈನ್ ವಾಚ್ ಆಪ್ಸ್ (QW app):** ಜಿಲ್ಲೆಯಲ್ಲಿ ದಿನಾಂಕ: 18.08.2020 ರ 10:00am ರ ಅಂತ್ಯಕ್ಕೆ Quarantine watch App ನಲ್ಲಿ ಇದುವರೆಗೂ ಒಟ್ಟು **21500** ಇದ್ದು, ಸಿಬ್ಬಂದಿಯವರು **2331 (10.84.31%)** ವ್ಯಕ್ತಿಗಳನ್ನು ಬೇಟಿ ಮಾಡಿದ್ದಾರೆ. ಉಳಿದ **19169** ವ್ಯಕ್ತಿಗಳನ್ನು ಸಾಯಂಕಾಲ ಒಳಗೆ ಬೇಟಿ ಮತ್ತು ಪೋನ್ ಮೂಲಕ ಸಂಪರ್ಕಿಸಿ ಗೃಹ ನಿರ್ಭಂದಿತ ವ್ಯಕ್ತಿಗಳ ದೈನಂದಿನ ವರದಿಯನ್ನು ಮನೆಯ ಸ್ಥಳದಿಂದ ಮಾಡಲು ಪ್ರೋತ್ಸಾಹಿಸಲಾಗುತ್ತಿದೆ. **1481** ಉಲ್ಲಂಘನೆ ಪ್ರಕರಣಗಳಿಗೆ ಕಟ್ಟುನಿಟ್ಟಾಗಿ ಕಡ್ಡಾಯವಾಗಿ ಗೃಹ ನಿರ್ಭಂದನದಲ್ಲಿರುವಂತೆ ಸೂಚಿಸಿದೆ ಎಂದು ತಿಳಿಸಿದರು.

ಈ ಕುರಿತು ಉಸ್ತುವಾರಿ ಕಾರ್ಯದರ್ಶಿಗಳು **19169** ವ್ಯಕ್ತಿಗಳನ್ನು ಕೂಡಲೇ ಸಂಪರ್ಕಿಸಿ ವರದಿ ಮಾಡಿ ಮತ್ತು **1481** ಉಲ್ಲಂಘನೆ ಪ್ರಕರಣಗಳಿಗೆ ಕಟ್ಟುನಿಟ್ಟಾಗಿ ಸೂಚಿಸುವಂತೆ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು.

Containment zone app: 17-08-2020 ರಂತೆ ಜಿಲ್ಲೆಯ **2457** ಗಳಲ್ಲಿ **1722** ಸಕ್ರೀಯ ಪ್ರತಿ ನಿರ್ಭಂದಿತ ವಲಯದ ವ್ಯಾಪ್ತಿಯ ಮನೆಗಳ ಪ್ರಾರಂಭಿಕ ಮಾಹಿತಿಯನ್ನು ಹಾಗೂ ದೈನಂದಿನ ಆರೋಗ್ಯ ತಪಾಸಣೆ ವಿವರಗಳನ್ನು Containment zone App ನಲ್ಲಿ ದಾಖಲಿಸಲು ಕ್ರಮವಹಿಸಲಾಗಿದೆ. ಅದರಲ್ಲಿ **735** ನಿರ್ಭಂದಿತ ವಲಯಗಳನ್ನು de notified ಮಾಡಲಾಗಿದೆ. ಸದರಿ App ನಲ್ಲಿ **18543** ಮನೆಗಳಲ್ಲಿ ಇದುವರೆಗೂ **10402 (56.09%)** ಮನೆಗಳ ಸಮೀಕ್ಷೆಯ ವಿವರಗಳನ್ನು ದಾಖಲಿಸಲಾಗಿದೆ ಮತ್ತು ಉಳಿದ ಮನೆಗಳ ಆರೋಗ್ಯ ತಪಾಸಣೆ ವಿವರಗಳನ್ನು ದಾಖಲಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

**ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆ (House hold risk and outreach survey) app:** ಜಿಲ್ಲೆಯಲ್ಲಿ ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆಯನ್ನು Health watch app ಮೂಲಕ ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು **677912** ಮನೆಗಳ ಸಮೀಕ್ಷೆಯ ಗುರಿಗೆ ಅನುಗುಣವಾಗಿ ಇದುವರೆಗೆ **636292 (ಶೇ. 93.86)** ಮನೆಗಳ ಸಮೀಕ್ಷೆಯನ್ನು Health watch app ಮೂಲಕ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಮತ್ತು ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆಯಲ್ಲಿ ಗುರುತಿಸಿದ ಅಪಾಯದ ಗುಂಪುಗಳಲ್ಲಿ ಆಶಾ ಕಾರ್ಯಕರ್ತರಿಂದ ಮನೆ-ಮನೆ ಬೇಟಿ ಮಾಡಿ ಆರೋಗ್ಯ ವಿಚಾರಿಸುವುದರ ಮೂಲಕ ಕೋವಿಡ್ ಲಕ್ಷಣವುಳ್ಳ ವ್ಯಕ್ತಿಗಳನ್ನು ಫೀವರ್ ಕ್ಲೀನಿಕ್ ನಲ್ಲಿ ಪರೀಕ್ಷೆಗೆ ಕಳಿಸಿ ಪರೀಕ್ಷೀಸಲಾಗುತ್ತಿದೆ ಎಂದು ತಿಳಿಸಿದರು.

ವೆಬ್ ಅಪ್ಲಿಕೇಷನ್ನಲ್ಲಿ ಇನ್ ಫ್ಲೂಎನ್ಜ್/ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡುವ ಖಾಸಗಿ ಸಂಸ್ಥೆಗಳು ಮತ್ತು ಮೆಡಿಕಲ್ ಶಾಪ್ ಗಳು ಜಿಲ್ಲೆಯಲ್ಲಿ ದಿನಾಂಕ **17/08/2020** ರಂದು **478** ಖಾಸಗಿ ಆಸ್ಪತ್ರೆಗಳಲ್ಲಿ **342 (71.54%)** ಮತ್ತು ಇಲ್ಲಿಯವರೆಗೆ **581** ಖಾಸಗಿ ಆಸ್ಪತ್ರೆ ಮತ್ತು ಲ್ಯಾಬ್ ಗಳಲ್ಲಿ **522 (89.84 %)** ಖಾಸಗಿ ಆಸ್ಪತ್ರೆಗಳು ವೆಬ್ ಅಪ್ಲಿಕೇಷನ್ ನಲ್ಲಿ ಇನ್ ಫ್ಲೂಎನ್ಜ್ / ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡಿವೆ.

ಜಿಲ್ಲೆಯಲ್ಲಿ ದಿನಾಂಕ **17/08/2020** ರಂದು **1075** ಖಾಸಗಿ ಮೆಡಿಕಲ್ ಗಳಲ್ಲಿ **739 (68.74%)** ಮತ್ತು ಇಲ್ಲಿಯವರೆಗೆ **1078** ಮೆಡಿಕಲ್ ಗಳಲ್ಲಿ **1015 (94.15%)** ಖಾಸಗಿ ಸಂಸ್ಥೆಗಳು ವೆಬ್ ಅಪ್ಲಿಕೇಷನ್ ನಲ್ಲಿ ಇನ್ ಫ್ಲೂಎನ್ಜ್ / ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡಿವೆ.

ಅಪರ ಜಿಲ್ಲಾಧಿಕಾರಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು

**ಎಂ.ಎಸ್.ಶ್ರೀಕರ್**

ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,

ಅಭಿಯಾನ ನಿರ್ದೇಶಕರ ಕಚೇರಿ
ರಾಷ್ಟ್ರೀಯ ಜೀವನೋಪಾಯ ಅಭಿಯಾನ

ಕರ್ನಾಟಕ ಸರ್ಕಾರ

ಫೋನ್ ನಂ. 080-25599991/2/3
ಇ-ಮೇಲ್:daynulm@gmail.com
ನಂ.11, ಕೊಠಡಿ ನಂ: 305, 3ನೇ ಮಹಡಿ,
ಬ್ಲೂ ಕ್ರಾಸ್ ಛೇಂಬರ್ಸ್ ಕಟ್ಟಡ,
ಇನ್‌ಫ್ಯಾಂಟ್ರಿ ಅಡ್ಡರಸ್ತೆ, ಬೆಂಗಳೂರು-560 001.

ನಂ. ಅನಿಕ II ಡೇ-ನಲ್ಮ್ 2020-21

ದಿನಾಂಕ: .08.2020

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಸುಧಾರಣೆ), ಬೆಂಗಳೂರು-560 001.

ಮಾನ್ಯರೇ,

ವಿಷಯ: ಗದಗ ಜಿಲ್ಲೆಯ ಭೇಟಿಯ ವರದಿಯನ್ನು ನಿಗದಿತ ನಮೂನೆಯಲ್ಲಿ ಒದಗಿಸುತ್ತಿರುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಇಸಪ 2019, ದಿನಾಂಕ:24.04.2020.

2) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಇಸಪ 2019, ದಿನಾಂಕ:22.04.2020.

---*/*/*---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರಿ ಆದೇಶದಂತೆ, ದಿನಾಂಕ:05 ಮತ್ತು 06, ಆಗಸ್ಟ್ 2020 ರಂದು ಗದಗ ಜಿಲ್ಲೆಗೆ 5ನೇ ಭೇಟಿ ನೀಡಿ ಕೈಗೊಂಡ ಪ್ರಗತಿ ಪರಿಶೀಲನಾ ವರದಿಯನ್ನು ಉಲ್ಲೇಖ(2)ರ ಸರ್ಕಾರದ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ.ಎಂ.ಟಿ.ರೇಜು, ಭಾ.ಆ.ಸೇ.)
ಅಭಿಯಾನ ನಿರ್ದೇಶಕರು,
ರಾಷ್ಟ್ರೀಯ ಜೀವನೋಪಾಯ ಅಭಿಯಾನ,
ಬೆಂಗಳೂರು ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಪ್ರತಿಯನ್ನು ಮಾಹಿತಿಗಾಗಿ:-

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ – ಗದಗ ಜಿಲ್ಲೆ ಭೇಟಿಯ ವರದಿಯನ್ನು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
2) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ – ಗದಗ ಜಿಲ್ಲೆ ಭೇಟಿಯ ವರದಿಯನ್ನು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
3) ಕಚೇರಿ ಪ್ರತಿ.

# I. ಕೋವಿಡ್-19 ಪಾಸಿಟಿವ್ ವ್ಯಕ್ತಿಗಳ ಸಂಪರ್ಕ ಪತ್ತೆ

1. **24 ಗಂಟೆಗಳ ಒಳಗೆ ಕೊವಿಡ್ ಪಾಸಿಟೀವ್ ವ್ಯಕ್ತಿಗಳ ಸಂಪರ್ಕಗಳನ್ನು ಪತ್ತೆಹಚ್ಚಲು ರಚಿಸಲಾದ ಸಂಪರ್ಕ(ಟ್ರೇಸಿಂಗ್) ತಂಡಗಳು ಸಾಕಷ್ಟು ಇವೆಯೇ?**

ಹೌದು ಜಿಲ್ಲಾ ಮತ್ತು ತಾಲ್ಲುಕು ಹಂತದಲ್ಲಿ ತಮಡಗಳನ್ನು ರಚಿಸಲಾಗಿದೆ. ಆಗಸ್ಟ್ 5 ರವರೆಗೆ ಗದಗ ಜಿಲ್ಲೆಯಲ್ಲಿ 1764 ಪ್ರಕರಣಗಳು ಸಕಾರಾತ್ಮಕ (ಪಾಸಿಟೀವ್) ಎಂದು ವರದಿಯಾಗಿರುತ್ತವೆ. ಅದರಲ್ಲಿ 633 ಕೋವಿಡ್ ಸೋಂಕಿತರು ನಿಗದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿ ಆಸೊತ್ರೆಯಿಂದ ಬಿಡುಗಡೆಯಾಗಿರುತ್ತಾರೆ. ಜುಲೈ ಮಧ್ಯದಿಂದ ಇತ್ತೀಚಿನ ದಿನಗಳಲ್ಲಿ ಪ್ರತಿ ದಿನ 90 ರಿಂದ 100 ಪಾಸಿಟೀವ್ ಪ್ರಕರಣಗಳು ವರದಿಯಾಗುತ್ತಿವೆ. ಈ ಪ್ರತಿಯೊಂದು ಪ್ರಕರಣಕ್ಕೂ ಸರಾಸರಿ ನಾಲ್ಕರಿಂದ ಎಂಟು ಪ್ರಾಥಮಿಕ ಸಂಪರ್ಕ ಇರುವ ವ್ಯಕ್ತಿಗಳನ್ನು ಗುರುತಿಸಲಾಗುತ್ತಿದೆ.

2. **ಜಿಲ್ಲೆಯಲ್ಲಿ ಸಂಪರ್ಕ ಪತ್ತೆಹಚ್ಚುವಕೆಯನ್ನು ಸುಧಾರಿಸುವ ಕುರಿತು ಯಾವುದೇ ಸಲಹೆಗಳಿದ್ದಲ್ಲಿ, 50 ಪದಗಳಿಗೆ ಮಿರದಂತೆ ವರದಿ;**

ಜುಲೈ ಮಧ್ಯದಿಂದ ಇತ್ತೀಚಿನ ದಿನಗಳಲ್ಲಿ ಪ್ರತಿ ದಿನ 90 ರಿಂದ 100 ಪಾಸಿಟೀವ್ ಪ್ರಕರಣಗಳು ವರದಿಯಾಗುತ್ತಿವೆ. ಈ ಪ್ರತಿಯೊಂದು ಪ್ರಕರಣಕ್ಕೂ ಸರಾಸರಿ ನಾಲ್ಕರಿಂದ ಎಂಟು ಪ್ರಾಥಮಿಕ ಸಂಪರ್ಕ ಇರುವ ವ್ಯಕ್ತಿಗಳನ್ನು ಗುರುತಿಸಲಾಗುತ್ತಿದೆ. ಆದರೇ, ಲಾಕ್‌ಡೌನ್ ಇಲ್ಲದೇ ಇರುವುದರಿಂದ ಹಾಗೂ ಜಿಲ್ಲೆಯಲ್ಲಿ ಎಲ್ಲಾ ರಿತಿಯ ಆರ್ಥಿಕ ಚಟುವಟಿಕೆಗಳು ನಡೆಯುತ್ತಿರುವುದರಿಂದ ಎಸ್.ಒ.ಪಿ ಯಂತೆ 14 ದಿನಗಳ ಒಳಗೆ ಸಂಪರ್ಕಕ್ಕೆ ಬಂದಿರುವ ಪ್ರಾಥಮಿಕ ಸಂಪರ್ಕಗಳನ್ನು ಪತ್ತೆಹಚ್ಚುವುದು ಅತ್ಯಂತ ಕಷ್ಟಸಾಧ್ಯವಾಗುತ್ತಿದೆ. ದ್ವಿತೀಯ ಸಂಪರ್ಕ ಇರುವ ವ್ಯಕ್ತಿಗಳ ಪಟ್ಟಿ ಮಾಡಿ ಗುರುತು ಮಾಡುವುದು ಅಸಾಧ್ಯವೇ ಆಗಿರುತ್ತದೆ. ಸಂಪರ್ಕ ಪತ್ತೆ ಮಾಡುವುದಕ್ಕೆ ನಿಯೋಜಿಸಲಾಗಿರುವ ತಂಡಗಳು ಕರ್ತವ್ಯದಲ್ಲಿ ಪೂರ್ಣಸಮಯ ತೊಡಗಿದ್ದರೂ ಸಹ ಕೇವಲ 10% ಸಂಪರ್ಕಿತರನ್ನು ಸಹ ಪತ್ತೆ ಹಚ್ಚಲು ಸಾಧ್ಯವಾಗದೇ ಇರುವುದರಿಂದ, ಈ ಪ್ರಕ್ರಿಯೆಯನ್ನು ಇದೇ ರೀತಿ ಮುಂದುವರೆಸುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕಾಗಿರುತ್ತದೆ.

ಇದಲ್ಲದೇ ಎಲ್ಲಾ ಆರೋಗ್ಯ ಕಾರ್ಯಕರ್ತರು ಹಾಗೂ ಸಿಬ್ಬಂದಿ ವರ್ಗದವರು ಸಂಪರ್ಕ ಪತ್ತೆಹಚ್ಚುವಿಕೆ ಹಾಗೂ ಕೋವಿಡ್ ಸಂಬಂಧ ವಿವಿಧ ಕಾರ್ಯದಲ್ಲಿ ತೊಡಗಿರುವುದರಿಂದ, ಈ ಋತುಮಾನದಲ್ಲಿ ಮಾಡಬೇಕಾಗಿರುವ ಆರೋಗ್ಯ ಸಂಬಂಧ ಇನ್ನಿತರ ಎಲ್ಲಾ ಸೇವೆಗಳಿಗೆ ಅಡಚಣೆಯುಂಟಾಗುತ್ತಿದೆ.

3. **ಪ್ರತಿ ಕೋವಿಡ್ ಸಕಾರಾತ್ಮಕ ಪ್ರಕರಣದ ಪ್ರಾಥಮಿಕ, ದ್ವಿತೀಯ ಸಂಪರ್ಕಗಳ ಸಂಖ್ಯೆ:**

ಜಿಲ್ಲೆಯಲ್ಲಿ ಈವರೆಗೆ 1764 ಕೋವಿಡ್ ಸೋಕಿತರು ಪತ್ತೆಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ

ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆಹಚ್ಚಿ ಕ್ರಮ ಕೈಗೊಂಡಿದ್ದು, ವಿವರ ಈ ಕೆಳಗಿನಂತಿದೆ:

| ಒಟ್ಟು ಪ್ರಕರಣಗಳ ಸಂಖ್ಯೆ | ಪ್ರಾಥಮಿಕ ಸಂಪರ್ಕ | ದ್ವಿತೀಯ ಸಂಪರ್ಕ |
|---|---|---|
| 1764 | 7819 | 7712 |

4. ಜಿಲ್ಲಾಡಳಿತವು ಯಾವುದೇ ಸಂಪರ್ಕಗಳನ್ನು ಬಿಡದೆ ಸಮಗ್ರ ಸಂಪರ್ಕ ಪತ್ತೆಹಚ್ಚುವಿಕೆಯನ್ನು ಮಾಡಿದೆಯೇ?

ಹೌದು.

5. ಕಾಂಟ್ಯಾಕ್ಟ್ ಟ್ರೇಸಿಂಗ್‌ನಲ್ಲಿ ಯಾವುದೇ ನ್ಯೂನತೆಗಳಿರುವ ಬಗ್ಗೆ ಸೂಚನೆ(50 ಪದಗಳಿಗೆ ಮೀರದಂತೆ ವರದಿ)

ಜಿಲ್ಲೆಯಲ್ಲಿ ಇತರೆ ಇಲಾಖೆಗಳು ಸೇರಿದಂತೆ ಲಭ್ಯವಿರುವ ಮಾನವ ಸಂಪನ್ಮೂಲ ಬಳಸಿ ಕಾಂಟ್ಯಾಕ್ಟ್ ಟ್ರೇಸಿಂಗ್ ಮಾಡುವುದಕ್ಕೆ ಜಿಲ್ಲಾಡಳಿತದಿಂದ ಎಲ್ಲಾ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಜನರ ಚಲನವಲನಗಳಿಗೆ ಲಾಕ್‌ಡೌನ್ ಅಥವಾ ನಿರ್ಬಂಧಗಳು ಇರದ ಕಾರಣ ಎಲ್ಲಾ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಪತ್ತೆಹಚ್ಚುವುದು ಅತ್ಯಂತ ಕಷ್ಟಸಾಧ್ಯವಿರುತ್ತದೆ.

6. ಪ್ರಾಥಮಿಕ ಸಂಪರ್ಕಗಳನ್ನು ಪ್ರತ್ಯೇಕವಾಗಿ ಇರಿಸಲಾಗಿರುವ ಆಸ್ಪತ್ರೆಗಳು ಮತ್ತು ಹಾಸ್ಟೆಲ್‌ಗಳು ಉತ್ತಮ ಮತ್ತು ಆರೋಗ್ಯಕರ ಸ್ಥಿತಿಯಲ್ಲಿವೆಯೇ?

ಪ್ರಾಥಮಿಕ ಸಂಪರ್ಕಿತರು ಎಂದು ಕಂಡುಬಂದಿರುವ ವ್ಯಕ್ತಿಗಳನ್ನು ಇತ್ತೀಚಿನ ಎಸ್.ಒ.ಪಿ ಪ್ರಕಾರ ಯಾವುದೇ ವಸತಿಗೃಹಗಳಲ್ಲಾಗಲಿ ಅಥವಾ ಆಸ್ಪತ್ರೆಗಳಲ್ಲಿಗಲೀ ಇರಿಸಿರುವುದಿಲ್ಲ. ದಿನಾಂಕ 05/08/2020ರವರೆಗಿನ ಮಾಹಿತಿಯಂತೆ, ಒಟ್ಟು 1091 ಸಕ್ರಿಯ (Active) ಕೋವಿಡ್-19ರ ಪ್ರಕರಗಳು ಗದಗದ ಜಿಲ್ಲೆಯಲ್ಲಿ ವರದಿಯಾಗಿರುತ್ತವೆ. ಇದರಲ್ಲಿ 150 ಪ್ರಕರಣಗಳು ಕೋವಿಡ್ ಆಸ್ಪತ್ರೆಗಳಲ್ಲಿ, 72 ಪ್ರಕರಣಗಳು ಖಾಸಗಿ ಆಸ್ಪತ್ರೆಗಳಲ್ಲಿ, 469 ಪ್ರಕರಣಗಳು ಕೋವಿಡ್ ಕೇರ್ ಕೇಂದ್ರಗಳಲ್ಲಿ ಹಾಗೂ 400 ಮನೆಗಳಲ್ಲಿ (Asymptomatic but Positive) ಪ್ರಕರಣಗಳು ಇವೆ. ಕೋವಿಡ್ ಕೇರ್ ಕೇಂದ್ರಗಳು ಉತ್ತಮ ಮತ್ತು ಆರೋಗ್ಯಕರ ಸ್ಥಿತಿಯಲ್ಲಿವೆ.

7. ಪ್ರತ್ಯೇಕತೆಯಿಂದ ಬಿಡುಗಡೆಯಾಗುವ ಮೊದಲು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ 12 ದಿನದ ಪರೀಕ್ಷೆಗಳನ್ನು ಮಾಡಲಾಗಿದೆಯೇ?

ಇತ್ತೀಚಿನ ಎಸ್.ಒ.ಪಿಯಂತೆ ನಿಗದಿತ ಅವಧಿ ಮುಗಿದ ನಂತರ ಆಸ್ಪತ್ರೆಯಿಂದ discharge ಮಾಡುವಾಗ ಪುನಃ ಕೋವಿಡ್ ಪತ್ತೆ ಪರೀಕ್ಷೆ ಮಾಡುತ್ತಿಲ್ಲ.

## II. ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳು:

1. ಎಲ್ಲಾ ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳನ್ನು ವಿವಿಧ ಕೋವಿಡ್ ಧನಾತ್ಮಕ ಪ್ರಕರಣಗಳನ್ನು ಅವುಗಳನ್ನು ಗುರುತಿಸಿದ 28 ದಿನಗಳ ಒಳಗೆ ನೋಟಿಫೈ ಮಾಡಲಾಗಿದೆಯೇ?

ಹೌದು. ಆಗಸ್ಟ್ 5 ರವರೆಗೆ ಗದಗ ಜಿಲ್ಲೆಯಲ್ಲಿ 701 ನಿರ್ಭಂದಿತ ವಲಯಗಳನ್ನು ಗುರುತಿಸಲಾಗಿದ್ದು, ಅವುಗಳೆಲ್ಲವು ಸಕ್ರಿಯವಾಗಿವೆ. ಆದರೇ, ಪ್ರಸ್ತುತ ಚಾಲ್ತಿಯಲ್ಲಿರುವ ಎಸ್.ಒ.ಪಿ ಯಂತೆ ಜಿಲ್ಲಾಡಳತದ ವತಿಯಿಂದ ನಿರ್ಬಂಧಿತ ವಲಯಗಳನ್ನು ಅಧಿಸೂಚಿಸಲಾಗುತ್ತಿದೆ. ಪ್ರಾರಂಭದಲ್ಲಿ 1 ಕಿ.ಮೀ ವ್ಯಾಪ್ತಿಯನ್ನು ನಿಗದಿಪಡಿಸಿದ್ದ ಕಂಟೈನ್‌ಮೆಂಟ್ ವಲಯ ಪ್ರಸ್ತುತ ಎರಡು ಮೂರು ಮನೆಗಳಿಗೆ ಮಾತ್ರ ನಿರ್ಭಂದಿತ ವಲಯಗಳಾಗಿ ಉಳದಿರುತ್ತವೆ. ಆದರೇ ನಿರ್ಭಂದಿತ ವಲಯಗಳು ತುಂಬಾ ಹೆಚಾಗುತ್ತಿರುವುದರಿಂದ ಮತ್ತು ಪ್ರತಿನಿತ್ಯ ದೊಡ್ಡ ಪ್ರಮಾಣದಲ್ಲ ಸಂಖ್ಯೆಗಳು ಹೆಚ್ಚಾಗುತ್ತಿರುವುದರಿಂದ, ಈ ವಲಯಗಳಿಗೆ ಮೇಲುಸ್ತುವಾರಿ ವಹಿಸುವುದು ಹಾಗೂ ಎಲ್ಲಾ ಸಂಬಂಧಿಸಿದ ಸಿಬ್ಬಂದಿಗಳು ಲಬ್ಯವಾಗುವುದು ಕಷ್ಟವಾಗುತ್ತಿದೆ. ಆದ್ದರಿಂದ, ಸಮುದಾಯದಲ್ಲಿನ ನೆರೆಹೊರೆ ಸಮಿತಿಗಳಂದಲ್ಲದೇ ಬೇರಾವುದೇ ವ್ಯವಸ್ಥೆಯಿಂದ ಉಸ್ತುವಾರಿ ಮಾಡುವುದು ವಾಸ್ತವಿಕವಾಗಿ ತುಂಬಾ ಕಷ್ಟಸಾಧ್ಯವಾಗುತ್ತಿದೆ.

2. ನೀವು ಎಲ್ಲಾ ಕಂಟೈನ್‌ಮೆಂಟ್ ವಲಯದ ನಕ್ಷೆಗಳನ್ನು ಪರಿಶೀಲಿಸಿದ್ದೀರಾ ಮತ್ತು ಕೆಲವನ್ನು ಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಭೇಟಿ ಮಾಡಿದ್ದಿರಾ.

ನಿರ್ಭಂದಿತ ವಲಯಗಳು ಹೆಚ್ಚಾಗಿರುವುದರಿಂದ ಎಲ್ಲಾ ಕಂಟೈನ್‌ಮೆಂಟ್ ವಲಯಗಳನ್ನು ಭೇಟಿ ಮಾಡಿರುವುದಿಲ್ಲ. ಆದರೇ, ನಿರ್ಭಂದಿತ ವಲಯಗಳ ಕಾರ್ಯ ನಿರ್ವಹಣೆ ಹಾಗೂ ಕೈಗೊಂಡಿರುವ ಕ್ರಮಗಳನ್ನು ಸಭೆಯಲ್ಲಿ ಖಚಿತಪಡಿಲಾಗಿದೆ.

3. ಕಂಟೈನ್‌ಮೆಂಟ್ ಮತ್ತು ಬಫರ್ ವಲಯಕ್ಕೆ incident commander/ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅವರನ್ನು ನೇಮಿಸಲಾಗಿದೆಯೇ?

ಹೌದು.

4. ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳಲ್ಲ ILIs/SARI ಗಳಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಕಣ್ಗಾವಲು ವ್ಯವಸ್ಥೆ ಇದೆಯೇ?

ಹೌದು. ಆದರೇ, ಕಾರ್ಯಕ್ಷಮತೆ ಕಡಿಮೆಯಾಗಿದೆ. ಸಮುದಾಯದ ಪಾಲ್ಗೊಳ್ಳುವಿಕೆ ಇಲ್ಲದೇ ಮುಂದಿನ ದಿನಗಳಲ್ಲಿ ನಿರ್ಭಂದಿತ ವಲಯಗಳ ಕಣ್ಗಾವಲಿನ ಕಾರ್ಯ ನಿರ್ವಹಿಸುವುದು ತುಂಬಾ ಕಷ್ಟಸಾಧ್ಯವಾಗುತ್ತಿದೆ.

## III. ಕೋವಿಡ್‌ಗಾಗಿ ಕಣ್ಗಾವಲು ಮತ್ತು ಸೌಲಭ್ಯಗಳು.

1. **ಗೊತ್ತುಪಡಿಸಿದ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾದ ಮಾದರಿಗಳ ಕುರಿತು ಯಾವುದೇ ವರದಿಗಳು ಜಿಲ್ಲೆಯಲ್ಲಿ ಬಾಕಿ ಉಳಿದಿವೆಯೇ?**

   ದಿನಾಂಕ 05/08/2020 ರಂತೆ 648 ಪ್ರಕರಣಗಳು ಬಾಕಿ ಉಳಿದಿವೆ. ಜಿಲ್ಲೆಯಲ್ಲಿ ಕಳೆದ ಎರಡು ದಿನಗಳಾಗಿ ಒಂದು ಆರ್.ಎ.ಟಿ ಕಿಟ್‌ಗಳು ಸಹ ಲಭ್ಯವಿರಲಿಲ್ಲ. ಪ್ರತಿನಿತ್ಯ 700 ರಷ್ಟು ಮಾದರಿಗಳನ್ನು ಸಂಗ್ರಹಿಸುತ್ತಿರುವುದರಿಂದ, ಬೇಕಾಗುವಷ್ಟು ಆರ್.ಎ.ಟಿ ಕಿಟ್‌ಗಳನ್ನು ನೀಡದೇ ಇರುವುದರಿಂದ ವರದಿಗಳು ಬಾಕಿ ಉಳಿದಿರುತ್ತವೆ. ಈಗಾಗಲೇ ಈ ವಿಷಯವನ್ನು ಆರೋಗ್ಯ ಮತ್ತು ಕುಟುಮಬ ಇಲಾಖೆಗೆ ಮತ್ತು Drugs and Logistics society ಹಾಗೂ ನೋಡೆಲ್ ಅಧಿಕಾರಿ testing ಇವರುಗಳ ಗಮನಕ್ಕೆ ಜಿಲ್ಲಾಡಳಿತವು ತಂದಿರುತ್ತದೆ. ಇದಲ್ಲದೇ, RNA extractor, ಹಾಗೂ TRUE-NAT, CB-NAAT ಪರೀಕ್ಷೆಗಳಿಗೆ ಬೇಕಾಗಿರುವ ಕಿಟ್‌ಗಳು ಈಗಲೂ ನಿಡದಿರುವುದರಿಂದ, ಜಿಲ್ಲೆಯಲ್ಲಿ ಲಭ್ಯವಿರುವ ಒಂದೇ ಒಂದು RTPCR ಯಂತ್ರದ ಗರಿಷ್ಠ ಸಾಮರ್ಥ್ಯಕ್ಕನುಗುಣವಾಗಿ ಪರೀಕ್ಷೆಗಳನ್ನು ಮಾಡಿ ವರದಿ ನಿಡಲಾಗುತ್ತಿದೆ.

2. **ಆರೋಗ್ಯ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯ ಪ್ರಕಾರ ಆರೋಗ್ಯ ಕಾರ್ಯಕರ್ತರು/ಆರೋಗ್ಯ ಸಿಬ್ಬಂದಿಗೆ Hydroxy chloroquine Sulphate (HCQ)ನೀಡಲಾಗಿದೆಯೇ?**

   ಪ್ರಸ್ತುತ ಅನ್ವಯವಾಗುವುದಿಲ್ಲ.

3. **ನೀವು ಮೀಸಲಿರುವ ಕೋವಿಡ್ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೀರಾ?**

   ಹೌದು.

4. **ನೀವು ಮೀಸಲಿರುವ ಕೋವಿಡ್ ಆಸ್ಪತ್ರೆಯನ್ನು ವೀಕ್ಷಣೆ ಮಾಡಿ ಆಗಮಿಸಿದ ಅಂಶಗಳು (50 ಪದಗಳಿಗೆ ಮೀರದಂತೆ ವರದಿ)**

   ಈಗಾಗಲೇ ಕೋವಿಡ್ ಆಸ್ಪತ್ರೆ ಎಂದು ನಿಗದಿ ಮಾಡಿರುವ ಆಯುಷ್ ಆಸ್ಪತ್ರೆಯಲ್ಲಿ ಸಾಕಷ್ಟು ರೋಗಿಗಳಿರುವುದರಿಂದ ಗದಗ ಜಿಲ್ಲಾ ಕೇಂದ್ರದಲ್ಲಿರುವ ಜಿಮ್ಸ್ (Gadag institute of Medical Science) ನ ಒಂದು ವಿಭಾಗದಲ್ಲಿ ಕೋವಿಡ್-19 ಸಕಾರಾತ್ಮಕ ಪ್ರಕರಣಗಳನ್ನು ದಾಖಲೆ ಮಾಡಲಾಗುತ್ತಿದೆ. ಇದಲ್ಲದೇ ಖಾಸಗಿ ಆಸ್ಪತ್ರೆಗಳಲ್ಲಿ ಮತ್ತು ಕೋವಿಡ್ ನಿಗಾ ಕೇಂದ್ರಗಳಲ್ಲಿ ಹಾಗೂ ಮನೆಗಳಲ್ಲಿ ಕೊವಿಡ್ ಪಾಸಿಟೀವ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

5. **ರಾಜ್ಯವು ನೀಡಿದ ಗುರಿಗಳ ಪ್ರಕಾರ ಕಂಟಿಜೆನ್ಸಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ?**

   ಹೌದು.

6. **(ಎ) ಕಂಟಿಜೆನ್ಸಿ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಗುರುತಿಸಲಾಗಿದೆಯೇ?**

   ಗದಗ ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಈಗಾಗಲೇ ಕಂಟಿಜೆನ್ಸಿಗಳಿಗಾಗಿ ತೆಗೆದುಕೊಳ್ಳಲಾಗಿದೆ. ಪ್ರತಿ ದಿನ 100 ರಷ್ಟು ಕೋವಿಡ್ ಪಾಸಿಟೀವ್

ಪ್ರಕರಣಗಳು ಹಾಗೂ ಹೊಸ ನಿರ್ಬಂಧಿತ ವಲಯಗಳು ಉಂಟಾಗಿರುವುದರಿಂದ ನಿರೀಕ್ಷಿತ ಮಟ್ಟದಲ್ಲಿ discharge ಆಗದೇ ಇರುವುದರಿಂದ ಲಭ್ಯವಿರುವ ಮಾನವ ಸಂಪನ್ಮೂಲಗಳ ಮೇಲೆ ತುಂಬಾ ಒತ್ತಡ ಈಗಾಗಲೇ ಬಂದಿರುತ್ತದೆ. ಇದು ಬೇರೆ ಬೇರೆ ಇಲಾಖೆಗಳ, ವಿಶೇಷವಾಗಿ ಆರೋಗ್ಯ ಇಲಾಖೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಇತರ ಆರೋಗ್ಯ ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸುವುದು ಸವಾಲಾಗಿರುತ್ತದೆ. ವೈದ್ಯಕೀಯ ಸೇವೆಗಳಾದ ನಿರಂತರ ಮನೆ ಭೇಟಿ, ಮಲೇರಿಯಾ/ಸೊಳ್ಳೆ ಅಭಿವೃದ್ಧಿ ಸಮೀಕ್ಷೆ/ಹೆಚ್1 ಎನ್1 ಕಣ್ಗಾವಲಿನ ಬಗ್ಗೆ ವೈಜ್ಞಾನಿಕ ಪರೀಕ್ಷಾ ಮಾದರಿಗಳ ಸಿದ್ಧಪಡಿಸುವಿಕೆ, ಆರ್.ಬಿ.ಎಸ್.ಕೆ ವತಿಯಿಂದ ಮಕ್ಕಳ ಪರೀಕ್ಷೆ, ಪೌಷ್ಟಿಕ ಪುನರ್ವಸತಿ ಕೇಂದ್ರಗಳಲ್ಲಿ ಅಪೌಷ್ಟಿಕ ಮಕ್ಕಳ ದಾಖಲಾತಿ, ಟಿ.ಬಿ ಖಾಯಿಲೆಗೆ ಸಂಬಂಧಿಸಿದ ಗುರುತಿಸುವಿಕೆ ಮತ್ತು ಮಾದರಿ ಅಭಿವೃದ್ಧಿ & ಔಷಧ ಸಂವೇದನೆ ಪರೀಕ್ಷೆಗಳು ಮುಂತಾದ ಕಾರ್ಯಗಳ ಪ್ರಗತಿ ಕುಂಠಿತವಾಗಿದೆ. ಇದರಿಂದ ಸಮುದಾಯ ಆರೋಗ್ಯದ ಮೇಲೆ ಹೆಚ್ಚಿನ ಋಣಾತ್ಮಕ ಪರಿಣಾಮ ಬೀರಲು ಕಾರಣವಾಗುತ್ತದೆ. ಉದಾಹರಣೆಯಾಗಿ ಜೂನ್ . 2020ರ ಮಾಹೆಯಲ್ಲಿ maternal mortality rate MMR 227 ಆಗಿರುತ್ತದೆ. 2019ರ ಜೂನ್ ಮಾಹೆಗೆ ಹೋಲಿಸಿದಾಗ, ಇದು 94 ಇರುತ್ತದೆ.

7. (ಬಿ)ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆಯೇ?

ಕೋವಿಡ್ ನಿಗಾ ಕೇಂದ್ರ ಹಾಗೂ home isolation ನಲ್ಲಿರುವ ಕೋವಿಡ್-19 ಪಾಸಿಟೀವ್ ಪ್ರಕರಣಗಳ ಸಂಖ್ಯೆ ಅಧಿಕವಾಗುತ್ತಿರುವುದರಿಂದ, ಕೋವಿಡ್ ಕೇಸ್‌ಗಳನ್ನು ನಿರ್ವಹಣೆ ಮಾಡುವ ಬಗ್ಗೆ ಸಮುದಾಯದ ವತಿಯಿಂದ ಹೆಚ್ಚಿನ ಜನರಿಗೆ ತರಬೇತಿ ನೀಡುವುದು ಅವಶ್ಯಕತೆಯಿರುತ್ತದೆ.

## ಒಟ್ಟಾರೆ ವೀಕ್ಷಿಸಿದ ಅಂಶಗಳು:

1. ಆಗಸ್ಟ್, 2020ರ ಮೊದಲನೆಯ ವಾರದಲ್ಲಿ ಆರೋಗ್ಯ ಇಲಾಖೆಯ 20 ಸಿಬ್ಬಂದಿಗಳಿಗೆ, 36 ಪೋಲೀಸ್ ಸಿಬ್ಬಂದಿಗಳಿಗೆ, 08 ಇತರೆ ಇಲಾಖೆಗಳ ಸಿಬ್ಬಂದಿಗೆ ಕೋವಿಡ್ ಪಾಸಿಟೀವ್ ದೃಢಪಟ್ಟಿರುತ್ತದೆ.
2. ಆರ್.ಎ.ಟಿ ಪರೀಕ್ಷೆ ಚಾಲ್ತಿಗೆ ಬಂದ ಮೇಲೆ 24 ಗಂಟೆಗಳಲ್ಲಿ ಆಗುತ್ತಿರುವ ಟೆಸ್ಟ್‌ಗಳ ಸಂಖ್ಯೆ ಗಣನೀಯವಾಗಿರುತ್ತವೆ. ಆದರೆ, ಪ್ರಸ್ತು ಜಿಲ್ಲೆಯಲ್ಲ ಆರ್.ಎ.ಟಿ ಟೆಸ್ಟ್‌ಗಳಿಗೆ ಕಿಟ್‌ಗಳು ಲಭ್ಯವಿರುವುದಿಲ್ಲ.
3. ಆದ್ದರಿಂದ ಆರಂಭಿಕ ಹಂತದಲ್ಲಿ ನಿರಂತರವಾಗಿ ಉಪಯೋಗವಾಗುತ್ತಿದ್ದ ಐದು ತಂತ್ರಾಂಶಗಳಾದ 1) ಸಂಪರ್ಕ ಪತ್ತೆ ತಂತ್ರಾಂಶ(Contact tracing app), 2) ಗೃಹ ದಿಗ್ಬಂಧನ ತಂತ್ರಾಂಶ(Home Quarantine app) 3) ಕೆ.ಪಿ.ಎಮ್.ಇ ತಂತ್ರಾಂಶ(KPME app), 4) ಔಷಧಾಲಯ ತಂತ್ರಾಂಶ (Pharmacy app) ಮತ್ತು 5) ಕಂಟೈನ್‌ಮೆಂಟ್ ತಂತ್ರಾಂಶ

(Containment Zone app)ಗಳ ಪ್ರಾಮುಖ್ಯತೆ ಪುನಃ ಪರಿಶೀಲಿಸಬೇಕಾಗಿದ್ದು, ಇವುಗಳಿಂದ ಕ್ಷೇತ್ರ ಮಟ್ಟದಲ್ಲಿ ನಿರೀಕ್ಷಿತ ಪ್ರಯೋಜನ ಕಂಡುಬರುತ್ತಿಲ್ಲ. ಇದರ ಬದಲಾಗಿ ಆಪ್ತಮಿತ್ರ ತಂತ್ರಾಂಶವನ್ನು ಹೆಚ್ಚಾಗಿ ಉತ್ತೇಜಿಸಿ ನಿರಂತರವಾಗಿ ಪತ್ತೆಹಚ್ಚುವಿಕೆಯನ್ನು ಉತ್ತೇಜಿಸಿ ದುರ್ಬಲ ಜನರಿಗೆ ತುರ್ತಾಗಿ ವೈದ್ಯಕೀಯ ಸೇವೆ ಒದಗಿಸಬಹುದಾದರೆ ಹಾಗೂ fatality rateನ್ನು ಕಡಿಮೆ ಮಾಡಬಹುದಾಗಿರುತ್ತದೆ.

4. ತುರ್ತು ಸಂದರ್ಭದಲ್ಲಿ ಅವಶ್ಯಕತೆ ಬಂದಲ್ಲಿ, ಮೃತದೇಹಗಳ ಅಂತಿಮ ಸಂಸ್ಕಾರಕ್ಕಾಗಿ ಹೊಸ ರುದ್ರಭೂಮಿಯನ್ನು ಗುರುತಿಸಿ ಜಿಲ್ಲಾಡಳಿತದಿಂದ ಕ್ರಮ ವಹಿಸಲಾಗಿದೆ.
5. ಗದಗ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಕೃಷಿ ಚಟುವಟಿಕೆಗಳು ಭರದಿಂದ ಸಾಗುತ್ತಿದ್ದು, ಮಲಪ್ರಭ ನದಿಯಲ್ಲಿ ನವಿಲುತೀರ್ಥ ಅನೆಕಟ್ಟಿನ ನೀರಿನ ಮಟ್ಟವು ಈಗಾಗಲೇ 2062 ಅಡಿಗಳು ಭರ್ತಿಯಾಗಿದ್ದು, 2070 ಅಡಿಗಳು ದಾಟಿದಲ್ಲಿ ನೀರಿನ ಬಿಡುಗಡೆಗೆ ಕ್ರಮ ವಹಿಸಲಾಗಿರುತ್ತದೆ. ಆದುದರಿಂದ ಹಿಂದಿನ ಸಾಲುಗಳಲ್ಲಿ ಆಗಿರುವಂತೆ ರೋಣ ಹಾಗೂ ನರಗುಂದ ತಾಲ್ಲೂಕುಗಳಲ್ಲಿ ಅನಿರೀಕ್ಷಿತ ಪ್ರವಾಹದ ಮುನ್ನೆಚ್ಚರಿಕೆಗಳನ್ನು ಜಿಲ್ಲಾಡಳಿತವು ಕೈಗೊಂಡಿರುತ್ತದೆ.

ದಿನಾಂಕ: 05/08/2020

19/08/2020

ಡಾ॥ ಎಂ.ಟಿ.ರೇಜು,ಭಾ.ಆ.ಸೇ

ಅಭಿಯಾನ ನಿರ್ದೇಶಕರು

ಸಂಜೀವಿನಿ–ಎನ್.ಎಲ್.ಎಮ್, ಬೆಂಗಳೂರು

ಹಾಗೂ

ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ಸನ್ಮಾನ್ಯ ಶ್ರೀ ಗೋಪಾಲಯ್ಯರವರು, ಮಾನ್ಯ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು ರವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಉಪಸ್ಥಿತಿಯಲ್ಲಿ ದಿನಾಂಕ 07.08.2020 ರಂದು ಹಾಸನ ಜಿಲ್ಲೆಯಲ್ಲಿನ ಪ್ರವಾಹ ಪರಿಸ್ಥಿತಿ ಕುರಿತು ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲು ನಡೆದ ಸಭಾ ನಡವಳಿ.**

ಹಾಜರಿದ್ದವರು:

1. ಹಾಜರಾತಿಯಂತೆ.
2. ತಾಲ್ಲೂಕು ಮಟ್ಟದ ಅಧಿಕಾರಿಗಳು ವಿಡಿಯೋ ಸಂವಾದದಲ್ಲಿ ಹಾಜರಿದ್ದರು.

ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ರವರು ಸಭೆಯಲ್ಲಿ ನೆರೆದಿದ್ದ ಸಭಾಧ್ಯಕ್ಷರು, ಶಾಸಕರುಗಳು, ಅಧಿಕಾರಿಗಳು ಹಾಗೂ ದೃಶ್ಯಮಾದ್ಯಮ ಮತ್ತು ಪತ್ರಿಕಾ ಪ್ರತಿನಿಧಿಗಳನ್ನು ಸ್ವಾಗತಿಸುವುದರ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆಯಲ್ಲಿ ಆಗಸ್ಟ್ 01ರಿಂದ ಮಳೆಯಾಗುತ್ತಿದ್ದು, ಮಳೆಯ ಬಗ್ಗೆ ಶೇಕಡಾವಾರು ಮಾಹಿತಿಯನ್ನು ನೀಡಿದರು. ಜಿಲ್ಲೆಯಲ್ಲಿ ವಾಡಿಕೆ ಮಳೆ 48 ಮಿ.ಮೀ. ಇದ್ದು, ವಾಸ್ತವಿಕವಾಗಿ 135 ಮಿ.ಮೀ ಮಳೆಯಾಗಿದೆ. ಆಲೂರು ತಾಲ್ಲೂಕಿನಲ್ಲಿ ವಾಡಿಕೆ ಮಳೆ 43 ಮಿ.ಮೀ. ವಾಸ್ತವಿಕವಾಗಿ 163 ಮಿ.ಮೀ ಮಳೆಯಾಗಿದೆ. ಅರಕಲಗೂಡು ತಾಲ್ಲೂಕಿನಲ್ಲಿ ವಾಡಿಕೆ ಮಳೆ 28 ಮಿ.ಮೀ. ವಾಸ್ತವಿಕವಾಗಿ 98 ಮಿ.ಮೀ ಮಳೆಯಾಗಿದೆ. ಅರಸೀಕೆರೆ ತಾಲ್ಲೂಕಿನಲ್ಲಿ ವಾಡಿಕೆ ಮಳೆ 17 ಮಿ.ಮೀ. ವಾಸ್ತವಿಕವಾಗಿ 28 ಮಿ.ಮೀ ಮಳೆಯಾಗಿದೆ. ಬೇಲೂರು ತಾಲ್ಲೂಕಿನಲ್ಲಿ ವಾಡಿಕೆ 35 ಮಿ.ಮೀ. ವಾಸ್ತವಿಕವಾಗಿ 137 ಮಿ.ಮೀ ಮಳೆಯಾಗಿದೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ವಾಡಿಕೆ 15 ಮಿ.ಮೀ. ವಾಸ್ತವಿಕವಾಗಿ 33 ಮಿ.ಮೀ ಮಳೆಯಾಗಿದೆ. ಹಾಸನ ತಾಲ್ಲೂಕಿನಲ್ಲಿ ವಾಡಿಕೆ ಮಳೆಯಂತೆ 24 ಮಿ.ಮೀ. ವಾಸ್ತವಿಕವಾಗಿ 66 ಮಿ.ಮೀ ಮಳೆಯಾಗಿದೆ. ಹೊಳೆನರಸೀಪುರ ತಾಲ್ಲೂಕಿನಲ್ಲಿ ವಾಡಿಕೆ ಮಳೆಯಂತೆ 16 ಮಿ.ಮೀ. ವಾಸ್ತವಿಕವಾಗಿ 50 ಮಿ.ಮೀ ಮಳೆಯಾಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ವಾಡಿಕೆ ಮಳೆಯಂತೆ 111 ಮಿ.ಮೀ. ವಾಸ್ತವಿಕವಾಗಿ 494 ಮಿ.ಮೀ ಮಳೆಯಾಗಿದೆ ಎಂದು ತಾಲ್ಲೂಕುವಾರು ಮಾಹಿತಿಯನ್ನು ನೀಡಿದರು.

ವಿಡಿಯೋ ಸಂವಾದದಲ್ಲಿ ಹಾಜರಿದ್ದ ತಾಲ್ಲೂಕು ತಹಶೀಲ್ದಾರ್ ರವರಿಂದ ಆಗಸ್ಟ್ 2020ರ ಮಾಹೆಯಲ್ಲಿ ಉಂಟಾದ ಮಳೆಯಿಂದ ಹಾನಿಯಾಗಿರುವ ನಷ್ಟದ ಕುರಿತು ಈ ಕೆಳಕಂಡಂತೆ ಪರಿಶೀಲಿಸಲಾಯಿತು.

1. ಸಕಲೇಶಪುರ ತಾಲ್ಲೂಕು – ತಹಶೀಲ್ದಾರ್, ಸಕಲೇಶಪುರ ತಾಲ್ಲೂಕು ರವರು ಮಾತನಾಡಿ ಆಗಸ್ಟ್ 2020ರ ಮಾಹೆಯಲ್ಲಿ ತಾಲ್ಲೂಕಿನಲ್ಲಿ ಉಂಟಾದ ಮಳೆಯಿಂದ ಒಂದು ಜೀವಹಾನಿಯಾಗಿದ್ದು, 89 ಮನೆಗಳು ಹಾನಿಯಾಗಿರುತ್ತವೆ ಎಂದು ಸಭೆಯ ಗಮನಕ್ಕೆ ಸಲ್ಲಿಸಿದರು.
2. ಆಲೂರು ತಾಲ್ಲೂಕು– ತಹಶೀಲ್ದಾರ್, ಆಲೂರು ತಾಲ್ಲೂಕು ರವರು ಮಾತನಾಡಿ ಆಗಸ್ಟ್ 2020ರ ಮಾಹೆಯಲ್ಲಿ ತಾಲ್ಲೂಕಿನಲ್ಲಿ ಉಂಟಾದ ಮಳೆಯಿಂದ ಯಾವುದೇ ಜೀವಹಾನಿಯಾಗಿರುವುದಿಲ್ಲ, 785 ಹೆಕ್ಟೇರ್ ಮೆಕ್ಕೆಜೋಳ ಬೆಳೆ ಹಾನಿಯಾಗಿದ್ದು, ಒಟ್ಟು 18 ಮನೆಗಳು ಹಾನಿಯಾಗಿರುತ್ತವೆ ಎಂದು ಸಭೆಯ ಗಮನಕ್ಕೆ ಸಲ್ಲಿಸಿದರು.
3. ಹೊಳೆನರಸೀಪುರ ತಾಲ್ಲೂಕು– ತಹಶೀಲ್ದಾರ್, ಹೊಳೆನರಸೀಪುರ ತಾಲ್ಲೂಕು ರವರು ಮಾತನಾಡಿ ಆಗಸ್ಟ್ 2020ರ ಮಾಹೆಯಲ್ಲಿ ತಾಲ್ಲೂಕಿನಲ್ಲಿ ಉಂಟಾದ ಮಳೆಯಿಂದ 01 ಜಾನುವಾರು ಜೀವಹಾನಿಯಾಗಿದ್ದು, 01 ಮನೆ ಭಾಗಶಃ ಹಾನಿಯಾಗಿರುತ್ತದೆ ಎಂದು ಸಭೆಯ ಗಮನಕ್ಕೆ ಸಲ್ಲಿಸಿದರು.
4. ಚನ್ನರಾಯಪಟ್ಟಣ ತಾಲ್ಲೂಕು– ತಹಶೀಲ್ದಾರ್, ಚನ್ನರಾಯಪಟ್ಟಣ ತಾಲ್ಲೂಕು ರವರು ಮಾತನಾಡಿ ಆಗಸ್ಟ್ 2020ರ ಮಾಹೆಯಲ್ಲಿ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದ್ದು, ಈವರೆಗೆ ಯಾವುದೇ

ಹಾನಿಯಾಗಿರುವುದಿಲ್ಲ ಹಾಗೂ ಬೆಳೆಗಳ ಬಿತ್ತನೆಯಾಗಿರುತ್ತದೆ ಎಂಬ ಮಾಹಿತಿಯನ್ನು ಸಭೆಯ ಗಮನಕ್ಕೆ ಸಲ್ಲಿಸಿದರು.

5. ಅರಸೀಕೆರೆ ತಾಲ್ಲೂಕು– ತಾಲ್ಲೂಕು ವಿಡಿಯೋ ಸಂವಾದದಲ್ಲಿ ಹಾಜರಿದ್ದ ಶ್ರೀ ಶಿವಲಿಂಗೇಗೌಡರು ಮಾನ್ಯ ಶಾಸಕರು ಅರಸೀಕೆರೆ ವಿಧಾನಸಭಾ ಕ್ಷೇತ್ರ ರವರು ಮಾತನಾಡಿ ತಾಲ್ಲೂಕಿನಲ್ಲಿ ಶೇಕಡಾ 62 ರಷ್ಟು ಹೆಚ್ಚಿನ ಮಳೆ ಉಂಟಾಗಿರುತ್ತದೆ. ಅತಿಯಾದ ಮಳೆಯಿಂದ ರಸ್ತೆಗಳು, ಸರ್ಕಾರಿ ಕಟ್ಟಡಗಳು ಮತ್ತು ಇತರೆ ಮೂಲಭೂತ ಸೌಕರ್ಯಗಳು ಹಾನಿಯಾಗಿದ್ದು, ಪ್ರಸಕ್ತ ಸಾಲಿನಲ್ಲಿ ಅರಸೀಕೆರೆ ತಾಲ್ಲೂಕನ್ನು ಕೈಬಿಡದೆ ಹಾನಿಯಾಗಿರುವ ಪ್ರಕರಣಗಳಿಗೆ ಸೂಕ್ತ ಪರಿಹಾರ ನೀಡುವಂತೆ ಮಾನ್ಯ ಸಚಿವರಲ್ಲಿ ಬೇಡಿಕೆಯನ್ನಿಟ್ಟರು. ಈ ಬಗ್ಗೆ ಮಾನ್ಯ ಸಚಿವರು ಕ್ರಮವಹಿಸಲಾಗುವುದೆಂದು ತಿಳಿಸಿದರು.
6. ಬೇಲೂರು ತಾಲ್ಲೂಕು– ತಾಲ್ಲೂಕು ವಿಡಿಯೋ ಸಂವಾದದಲ್ಲಿ ಹಾಜರಿದ್ದ ಶ್ರೀ ಲಿಂಗೇಶ್ ರವರು ಮಾನ್ಯ ಶಾಸಕರು ಬೇಲೂರು ವಿಧಾನಸಭಾ ಕ್ಷೇತ್ರ ರವರು ಮಾತನಾಡಿ ತಾಲ್ಲೂಕಿನಲ್ಲಿ ಶೇಕಡಾ 291 ರಷ್ಟು ಹೆಚ್ಚಿನ ಮಳೆ ಉಂಟಾಗಿರುತ್ತದೆ. ಯಗಚಿ ವಾಟೆಹೊಳೆ ಜಲಾಶಯಗಳು ತುಂಬಿದ್ದು, ಸುತ್ತಮುತ್ತಲಿನ ಪ್ರದೇಶಗಳು ಜಲಾವೃತಗೊಳ್ಳುವ ಸಾಧ್ಯತೆ ಇರುತ್ತದೆ. ಅತಿಯಾದ ಮಳೆಯಿಂದ ರಸ್ತೆಗಳು, ಸರ್ಕಾರಿ ಕಟ್ಟಡಗಳು ಮತ್ತು ಇತರೆ ಮೂಲಭೂತ ಸೌಕರ್ಯಗಳು ಹಾನಿಯಾಗಿದ್ದು, ಸೂಕ್ತ ಪರಿಹಾರ ಒದಗಿಸಿಕೊಡುವಂತೆ ಮಾನ್ಯ ಸಚಿವರಲ್ಲಿ ಕೋರಿದರು. ಈ ಬಗ್ಗೆ ಮಾನ್ಯ ಸಚಿವರು ಕ್ರಮವಹಿಸಲಾಗುವುದೆಂದು ತಿಳಿಸಿದರು.
7. ಹಾಸನ ತಾಲ್ಲೂಕು– ಸಭೆಯಲ್ಲಿ ಹಾಜರಿದ್ದ ಶ್ರೀ ಪ್ರೀತಂ ಜೆ.ಗೌಡ ರವರು ಮಾನ್ಯ ಶಾಸಕರು, ಹಾಸನ ವಿಧಾನಸಭಾಕ್ಷೇತ್ರ ರವರು ಮಾತನಾಡಿ ತಾಲ್ಲೂಕಿನಲ್ಲಿ ಶೇಕಡಾ 170 ರಷ್ಟು ಹೆಚ್ಚಿನ ಮಳೆ ಉಂಟಾಗಿದ್ದು, ಮುಂದಿನ ದಿನಗಳಲ್ಲಿ ಉಂಟಾಗುವ ಮಳೆಯಿಂದ ಮೂಲಭೂತ ಸೌಕರ್ಯಗಳು ಹಾನಿಯಾಗುವ ಸಾಧ್ಯತೆಯಿರುತ್ತದೆ. ಮನೆ ಹಾನಿಗಳ ಪ್ರಕರಣಗಳನ್ನು ಸಮರ್ಪಕವಾಗಿ ಪರಿಶೀಲಿಸಿ ಸೂಕ್ತ ಪರಿಹಾರವನ್ನು ಸಂತ್ರಸ್ಥರಿಗೆ ನೀಡಲು ಕೋರಿದರು. ಜಿಲ್ಲೆಯ ಪ್ರವಾಹ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸುವ ನಿಟ್ಟಿನಲ್ಲಿ ತಾಲ್ಲೂಕುವಾರು ನೋಡಲ್ ಅಧಿಕಾರಿಗಳನ್ನು ನೇಮಿಸಲು ತಿಳಿಸಿದರು. ಜಿಲ್ಲಾಧಿಕಾರಿಗಳು ಹಾಸನ ರವರು ಮಾತನಾಡಿ ಈಗಾಗಲೇ ತಾಲ್ಲೂಕುವಾರು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಪ್ರವಾಹ ಸಂಬಂಧ ಅಗತ್ಯ ಕ್ರಮಗಳನ್ನು ವಹಿಸಲು ಸೂಚಿಸಲಾಗಿರುತ್ತದೆಂಬ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು.
8. ಅರಕಲಗೂಡು ತಾಲ್ಲೂಕು– ತಾಲ್ಲೂಕು ವಿಡಿಯೋ ಸಂವಾದದಲ್ಲಿ ಹಾಜರಿದ್ದ ಮಾನ್ಯ ಶಾಸಕರಾದ ಶ್ರೀ ಎ.ಟಿ.ರಾಮಸ್ವಾಮಿ ಅರಕಲಗೂಡು ವಿಧಾನಸಭಾ ಕ್ಷೇತ್ರ ರವರು ಮಾತನಾಡಿ ತಾಲ್ಲೂಕಿನಲ್ಲಿ ಶೇಕಡಾ 254 ರಷ್ಟು ಹೆಚ್ಚಿನ ಮಳೆ ಉಂಟಾಗಿರುತ್ತದೆ. ಹೇಮಾವತಿ ಜಲಾಶಯವು ಇನ್ನೂ 2 ದಿನಗಳಲ್ಲಿ ತುಂಬುವ ಸಾಧ್ಯತೆ ಇದ್ದು, ಜಲಾಶಯದ ಸುತ್ತಮುತ್ತಲಿನ ಪ್ರದೇಶಗಳು ಜಲಾವೃತಗೊಳ್ಳುತ್ತವೆ. ಆದ್ದರಿಂದ ಈ ಪ್ರದೇಶಗಳಲ್ಲಿ ವಾಸಿಸುವ ಜನಸಾಮಾನ್ಯರನ್ನು ಸುರಕ್ಷಿತ ಸ್ಥಳಗಳಿಗೆ ವರ್ಗಾಯಿಸುವ ಅವಶ್ಯಕತೆ ಇರುತ್ತದೆ. ಮುಂದಿನ ದಿನಗಳಲ್ಲಿ ಅತಿಯಾದ ಮಳೆಯಿಂದ ಉಂಟಾಗುವ ಹಾನಿಗಳಿಗೆ ಸೂಕ್ತ ಪರಿಹಾರ ನೀಡಲು ಕೋರಿದರು. ಕರೋನಾ ಹಾಗೂ ಇನ್ನಿತರೆ ಯಾವುದೇ ಖಾಯಿಲೆ ಹರಡದಂತೆ ಕ್ರಮವಹಿಸಲು ತಿಳಿಸಿದರು. ಈ ಬಗ್ಗೆ ಮಾನ್ಯ ಸಚಿವರು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಜಿಲ್ಲೆಯಲ್ಲಿ ಆಗಸ್ಟ್ 2020ರ ಮಾಹೆಯಲ್ಲಿ ಉಂಟಾದ ಮಳೆಯಿಂದ ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿ ಹಾನಿಯಾಗಿರುವ ನಷ್ಟದ ಕುರಿತು ಈ ಕೆಳಕಂಡಂತೆ ಪರಿಶೀಲಿಸಲಾಯಿತು.

1. ಕೃಷಿ ಮತ್ತು ತೋಟಗಾರಿಕೆ ಇಲಾಖೆ– ಸಭೆಯಲ್ಲಿ ಹಾಜರಿದ್ದ ಜಂಟಿ ಕೃಷಿ ನಿರ್ದೇಶಕರು, ಹಾಸನ ರವರು ಮಾತನಾಡಿ ಪ್ರಸಕ್ತ ಸಾಲಿನಲ್ಲಿ ಉಂಟಾಗಿರುವ ಮಳೆಯಿಂದ ಈವರೆಗೆ 2036.25 ಹೆಕ್ಟೇರ್ ಮುಸುಕಿನ ಜೋಳ ಹಾಗೂ 771 ಹೆಕ್ಟೇರ್ ಭತ್ತದ ಬೆಳೆ ಹಾನಿಯಾಗಿದ್ದು, ವಾಸ್ತವಿಕವಾಗಿ ಉಂಟಾಗಿರುವ ಬೆಳೆ ನಷ್ಟವನ್ನು ತಾಲ್ಲೂಕುವಾರು ಸಮೀಕ್ಷೆಯಲ್ಲಿ ಅಂದಾಜಿಸಲಾಗುವುದು ಎಂದು ಸಭೆಯ ಗಮನಕ್ಕೆ ಸಲ್ಲಿಸಿದರು. ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ರವರು ಮಾತನಾಡಿ

ಆಗಸ್ಟ್ 2020ರ ಮಾಹೆಯಲ್ಲಿ ಉಂಟಾದ ಮಳೆಯಿಂದ ಯಾವುದೇ ತೋಟಗಾರಿಕಾ ಬೆಳೆಗಳು ಪೂರ್ಣಪ್ರಮಾಣಕ್ಕೆ ನಷ್ಟವಾಗಿರುವುದಿಲ್ಲವೆಂದು ತಿಳಿಸಿದರು.

2. ಚೆಸ್ಕಾಂ– ಜಿಲ್ಲೆಯಲ್ಲಿ ಉಂಟಾಗಿರುವ ಮಳೆಯಿಂದ ರಸ್ತೆಗೆ ಉರುಳಿರುವ ವಿದ್ಯುತ್ ಕಂಬಗಳನ್ನು ಸರಿ/ದುರಸ್ಥಿಪಡಿಸಿರುವ ಕುರಿತು ಪರಿಶೀಲಿಸಲಾಯಿತು. ಸೂಪರಿಟೆಂಡೆಂಟ್ ಇಂಜಿನಿಯರ್, ಚೆಸ್ಕಾಂ ರವರು ಮಾತನಾಡಿ ಈವರೆಗೆ ಒಟ್ಟು 489 ವಿದ್ಯುತ್ ಕಂಬಗಳು ಹಾನಿಯಾಗಿದ್ದು, ದುರಸ್ಥಿ ಕಾರ್ಯಗಳು ಚಾಲ್ತಿಯಲ್ಲಿರುತ್ತವೆಯೆಂದು ತಿಳಿಸಿದರು. ಶ್ರೀ ಹೆಚ್.ಕೆ.ಕುಮಾರಸ್ವಾಮಿ ರವರು ಮಾನ್ಯ ಶಾಸಕರು ಸಕಲೇಶಪುರ ವಿಧಾನಸಭಾ ಕ್ಷೇತ್ರ ರವರು ಮಾತನಾಡಿ ಸಕಲೇಶಪುರ ತಾಲ್ಲೂಕಿನಲ್ಲಿ ಮಳೆಯಿಂದ ಹಾನಿಯಾಗಿರುವ ವಿದ್ಯುತ್ ಕಂಬಗಳಿಂದ ಕಳೆದ 2 ದಿನಗಳಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿರುತ್ತದೆ ಹಾಗೂ ಜನಸಾಮಾನ್ಯರು ಕತ್ತಲೆಯಲ್ಲಿ ದಿನಕಳೆಯುತ್ತಿರುತ್ತಾರೆ. ಆದ್ದರಿಂದ ಆದಷ್ಟು ತುರ್ತಾಗಿ ವಿದ್ಯುತ್ ಸಂಪರ್ಕವನ್ನು ಸರಿಪಡಿಸಿ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸೌಲಭ್ಯವನ್ನು ಒದಗಿಸಲು ಕೋರಿದರು. ಪ್ರಸ್ತಾಪಿತ ಕಾರ್ಯವನ್ನು ತುರ್ತಾಗಿ ಕೈಗೊಳ್ಳಲು ಜಿಲ್ಲೆಗೆ ಕಾರ್ಮಿಕರ ಕೊರತೆ ಇರುತ್ತದೆ ಎಂದು ಸೂಪರಿಟೆಂಡೆಂಟ್ ಇಂಜಿನಿಯರ್, ಚೆಸ್ಕಾಂ ರವರು ತಿಳಿಸಿದರು.

ಮಾನ್ಯ ಸಚಿವರು ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕವನ್ನು ನಿಗಧಿತ ಸಮಯದಲ್ಲಿ ಸರಿಪಡಿಸಲು ಅಗತ್ಯವಿರುವ ಕಾರ್ಮಿಕರು ಹಾಗೂ ಅವಶ್ಯ ಸಲಕರಣೆಗಳನ್ನು ಒದಗಿಸಿ ಸೂಕ್ತ ಕ್ರಮವಹಿಸಲು ಹಾಗೂ ಜಿಲ್ಲೆಗೆ ತುರ್ತಾಗಿ ಭೇಟಿ ನೀಡಿ ಕಡಿಮೆ ಸಮಯದಲ್ಲಿ ಜಿಲ್ಲೆಯಲ್ಲಿ ಉಂಟಾಗಿರುವ ವಿದ್ಯುತ್ ಸಮಸ್ಯೆಗಳನ್ನು ಬಗೆಹರಿಸಲು ವ್ಯವಸ್ಥಾಪಕ ನಿರ್ದೇಶಕರು, ಚೆಸ್ಕಾಂ ರವರಿಗೆ ದೂರವಾಣಿ ಮೂಲಕ ಸೂಚಿಸಿದರು. ಹಾಗೆಯೇ ಯಾವುದೇ ಅಡಚಣೆಗಳನ್ನು 36 ಘಂಟೆಯೊಳಗೆ ಸರಿಪಡಿಸತಕ್ಕದ್ದು ಎಂದು ಆದೇಶಿಸಿದರು. 400ಕ್ಕೂ ಹೆಚ್ಚು ಕಂಬಗಳನ್ನು ಕೂಡಲೇ ತರೆಸಿ ರಿಸರ್ವ್‌ನಲ್ಲಿ ಇರಿಸಿಕೊಳ್ಳಲು ಸೂಚಿಸಿದರು.

3. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ– ಸಕಲೇಶಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಸಂಭವಿಸುವ ಭೂಕುಸಿತದಂತಹ ಪ್ರಕೃತಿ ವಿಕೋಪಗಳನ್ನು ಸಮರ್ಪಕವಾಗಿ ನಿಭಾಯಿಸಲು ಹಾಗೂ ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರ್‌ರವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಸಮನ್ವಯ ಸಾಧಿಸಿ ಉಂಟಾಗುವ ಅನಾಹುತಗಳನ್ನು ನಿಯಂತ್ರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮಾನ್ಯ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳು, ಹಾಸನ ರವರು ಮಾತನಾಡಿ ಕಳೆದ 2 ದಿನಗಳ ಹಿಂದೆ ಚಾರ್ಮಡಿ ಘಾಟ್ ಪ್ರದೇಶದಲ್ಲಿ ಭೂಕುಸಿತ ಉಂಟಾಗಿದ್ದು, ತುರ್ತಾಗಿ ತಡೆಗೋಡೆ ನಿರ್ಮಿಸಿ ಯಾವುದೇ ಹಾನಿ ಉಂಟಾಗದಂತೆ ಎಚ್ಚರವಹಿಸಲು ತಿಳಿಸಿದರು.

4. ಲೋಕೋಪಯೋಗಿ ಇಲಾಖೆ– ಸಭೆಯಲ್ಲಿ ಹಾಜರಿದ್ದ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ರವರು ಮಾತನಾಡಿ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಬಿಸಿಲೆ ಘಾಟ್ ವ್ಯಾಪ್ತಿಯಲ್ಲಿ ಭೂಕುಸಿತ ಉಂಟಾಗಿದ್ದು, ಸ್ಥಳ ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗಿರುತ್ತದೆ. ಇಲಾಖಾ ವ್ಯಾಪ್ತಿಗೆ ಒಳಪಡುವ ರಸ್ತೆಗಳ ಬದಿಗಳಲ್ಲಿ ಮರಗಳು ಬಿದ್ದು, ಭೂಕುಸಿತ ಪ್ರಕರಣಗಳು ಉಂಟಾಗುವ ಸಾಧ್ಯತೆ ಇರುತ್ತದೆ. ಪ್ರಸಕ್ತ ಸಾಲಿನ ಅತಿವೃಷ್ಟಿಯನ್ನು ಎದುರಿಸಲು ಅವಶ್ಯವಿರುವ ಅನುದಾನದ ಬೇಡಿಕೆಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ ಎಂಬ ಮಾಹಿತಿಯನ್ನು ಸಲ್ಲಿಸಿದರು. ಅರಣ್ಯ ಇಲಾಖೆಯ ಸಹಭಾಗಿಯೊಡನೆ ಈಗಾಗಲೇ ಒಣಗಿರುವ ಮರಗಳನ್ನು ತೆರೆಯಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು, ಹಾಸನ ರವರು ಮಾತನಾಡಿ ಅತಿವೃಷ್ಟಿಯಿಂದ ಹಾನಿಯಾಗುವ ಕೆರೆಕಟ್ಟೆಗಳ ಸಮೀಪದಲ್ಲಿ ಬ್ಯಾರಿಕೇಡ್‌ಗಳನ್ನು ತಪ್ಪದೇ ಅಳವಡಿಸಿ ಉಂಟಾಗುವ ಜೀವಹಾನಿಗಳನ್ನು ನಿಯಂತ್ರಿಸುವ ಬಗ್ಗೆ ಕ್ರಮವಹಿಸಲು ತಿಳಿಸಿದರು.

5. ನೀರಾವರಿ ಇಲಾಖೆ– ಜಿಲ್ಲೆಯ ಪ್ರಮುಖ ಜಲಾಶಯವಾದ ಹೇಮಾವತಿ ಜಲಾಶಯದ ನೀರಿನ ಮಟ್ಟದ ಬಗ್ಗೆ ಪರಿಶೀಲಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಮುಖ್ಯ ಇಂಜಿನಿಯರ್, ಹೇಮಾವತಿ ಜಲಾಶಯ, ಗೊರೂರು ರವರು ಮಾತನಾಡಿ ಜಲಾಶಯದ ಇಂದಿನ ನೀರಿನ ಮಟ್ಟ 2911.64 ಅಡಿಯಿದ್ದು, 47320 ಕ್ಯೂಸೆಕ್ಸ್ ನೀರು ಒಳಹರಿವು ಹಾಗೂ 1400 ಕ್ಯೂಸೆಕ್ಸ್ ನೀರು ಹೊರಹರಿವು ಇರುತ್ತದೆ. ಮುಂದಿನ 2 ದಿನಗಳಲ್ಲಿ ಜಲಾಶಯದ ನೀರು ಗರಿಷ್ಠ ಮಟ್ಟಕ್ಕೆ ತಲುಪುವುದು ಹಾಗೂ ಕೆರೆ–ಕಟ್ಟೆ ಹಾಗೂ ಚಾನೆಲ್‌ಗಳಿಗೆ ನೀರನ್ನು ಹರಿಸಲಾಗುವುದು ಎಂದು ತಿಳಿಸಿದರು.

ಶ್ರೀ ಹೆಚ್.ಡಿ.ರೇವಣ್ಣ ರವರು ಮಾನ್ಯ ಶಾಸಕರು ಹೊಳೆನರಸೀಪುರ ವಿಧಾನಸಭಾಕ್ಷೇತ್ರ ರವರು ಮಾತನಾಡಿ ಮುಖ್ಯ ಇಂಜಿನಿಯರ್, ಹೇಮಾವತಿ ಜಲಾಶಯ, ಗೊರೂರು ರವರ ವರದಿಯಂತೆ ಇನ್ನೆರೆಡು ದಿನಗಳಲ್ಲಿ ಹೇಮಾವತಿ ಜಲಾಶಯ ಭರ್ತಿಯಾಗುತ್ತಿದೆ. ಉತ್ತರ ಹಾಗೂ ದಕ್ಷಿಣ ನಾಲಾದಲ್ಲಿ ನೀರನ್ನು ಹರಿಸುವಂತೆ ತಿಳಿಸಿದರು. ಈ ಸಂಬಂಧ ಯಾವುದೇ ನಷ್ಟ ಉಂಟಾಗದಂತೆ ನಿಯಮಾನುಸಾರ ಅಗತ್ಯ ಕ್ರಮವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಕೋರಿದರು. ಜಲಾಶಯ ನೀರಿನ ಹೊರಹರಿವಿನಿಂದ ಉಂಟಾಗುವ ಬೆಳೆಹಾನಿ ಪ್ರಕರಣಗಳಿಗೆ ಹೆಚ್ಚಿನ ಪರಿಹಾರ ನೀಡಲು ಕೋರಿದರು. ಜಿಲ್ಲೆಯಲ್ಲಿ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗದಿರುವಂತೆ ಕ್ರಮವಹಿಸಲು ತಿಳಿಸಿದರು.

ಜಿಲ್ಲಾಧಿಕಾರಿಗಳು, ಹಾಸನ ರವರು ಮಾತನಾಡಿ ಪ್ರಸಕ್ತ ಸಾಲಿನಲ್ಲಿ ಉಂಟಾಗುವ ಎಲ್ಲಾ ಪ್ರಕೃತಿ ವಿಕೋಪಗಳಿಂದ ಸಂಭವಿಸುವ ಹಾನಿಗಳನ್ನು ನಿಯಂತ್ರಿಸುವ ಸಂಬಂಧ ಎಲ್ಲಾ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಯಲ್ಲಿ ಜನ–ಜಾನುವಾರುಗಳಿಗೆ ಯಾವುದೇ ಕುಡಿಯುವ ನೀರಿನ ಅಭಾವ ಉಂಟಾಗದಿರುವಂತೆ ಕ್ರಮವಹಿಸಲು ಹಾಗೂ ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ ರವರಿಗೆ ತಿಳಿಸಿದರು.

ಜಿಲ್ಲೆಯಲ್ಲಿನ ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೆರೆಕಟ್ಟೆಗಳಿಗೆ ನೀರು ಬರುವಂತಹ ನಾಲೆಗಳು ಮುಚ್ಚಿದ್ದಲ್ಲಿ ಅವುಗಳನ್ನು ತೆರವುಗೊಳಿಸಿ, ಕೆರೆಗಳಲ್ಲಿ ನೀರು ಸಂಗ್ರಹವಾಗುವಂತೆ ಕ್ರಮವಹಿಸಲು ತಹಶೀಲ್ದಾರ್, ಸಣ್ಣ ನೀರಾವರಿ ಹಾಗೂ ಜಿಲ್ಲಾ ಪಂಚಾಯತ್ ಇಲಾಖೆಗಳ ಅಧಿಕಾರಿಗಳಿಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**ಕೋವಿಡ್–19:** ಜಿಲ್ಲೆಯಲ್ಲಿ ಕೊರೋನಾ ವೈರಸ್ ಪ್ರಕರಣಗಳ ಮಾಹಿತಿಯನ್ನು ಪರಿಶೀಲಿಸಲಾಗಿ, ಜಿಲ್ಲಾ ಆರೋಗ್ಯಾಧಿಕಾರಿಗಳು, ಹಾಸನ ರವರು ಮಾತನಾಡಿ ಈವರೆಗೆ 3158 ಕೋವಿಡ್ ಸಕಾರಾತ್ಮಕ ಪ್ರಕರಣಗಳು ಕಂಡುಬಂದಿದ್ದು, 1247 ಪ್ರಕರಣಗಳು ಆಸ್ಪತ್ರೆಯಿಂದ ಗುಣಮುಖರಾಗಿ ಹೋಂ ಕ್ವಾರಂಟೈನ್‌ಗೆ ತೆರಳಿರುತ್ತಾರೆ. ಒಟ್ಟು 1823 ಸಕ್ರಿಯ ಪ್ರಕರಣಗಳಿದ್ದು, ಒಟ್ಟು 88 ಪ್ರಕರಣಗಳ ವ್ಯಕ್ತಿಗಳು ಮೃತರಾಗಿರುತ್ತಾರೆಂದು ತಿಳಿಸಿದರು.

ಶ್ರೀ ಹೆಚ್.ಡಿ.ರೇವಣ್ಣ ರವರು ಮಾನ್ಯ ಶಾಸಕರು ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ರವರು ಮಾತನಾಡಿ ಹೊಳೆನರಸೀಪುರ ತಾಲ್ಲೂಕಿನಲ್ಲಿ ತೆರೆಯಲಾಗಿರುವ ಕೋವಿಡ್ ಕೇರ್ ಸೆಂಟರ್‌ನಲ್ಲಿ ಸೋಂಕಿತರ ಚಿಕಿತ್ಸೆಗೆ ಅಗತ್ಯವಿರುವ Remidesevir ಲಸಿಕೆಯ ಕೊರತೆಯಿರುತ್ತದೆ ಎಂದು

ತಿಳಿಸಿದರು. ಈ ಸಂಬಂಧ ತುರ್ತು ಕ್ರಮವಹಿಸಿ ಅಗತ್ಯ ಲಸಿಕೆಯ ದಾಸ್ತಾನು ಅನ್ನು ಒದಗಿಸಲಾಗುವುದೆಂದು ಜಿಲ್ಲಾ ಆರೋಗ್ಯಾಧಿಕಾರಿಗಳು, ಹಾಸನ ರವರು ತಿಳಿಸಿದರು.

ಶ್ರೀ ಪ್ರೀತಂ ಜೆ.ಗೌಡ ರವರು ಮಾನ್ಯ ಶಾಸಕರು, ಹಾಸನ ವಿಧಾನಸಭಾಕ್ಷೇತ್ರ ರವರು ಮಾತನಾಡಿ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಹಾಸಿಗೆಗಳ ಪೈಕಿ ಶೇಕಡಾ 50 ರಷ್ಟು ಹಾಸಿಗೆಗಳನ್ನು ಕೋವಿಡ್-19 ನಿಯಂತ್ರಣಕ್ಕೆ ಉಪಯೋಗಿಸಿಕೊಳ್ಳಲು ಹಾಗೂ ನಗರದಲ್ಲಿರುವ ಸಂಜೀವಿನಿ ಸಹಕಾರ ಆಸ್ಪತ್ರೆಯನ್ನು ಸಂಪೂರ್ಣವಾಗಿ ಕೋವಿಡ್ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ತಿಳಿಸಿದರು. ಈ ಸಂಬಂಧ ಖಾಸಗಿ ಆಸ್ಪತ್ರೆಗಳ ಪೈಕಿ ಸದರಿ ಆಸ್ಪತ್ರೆಯನ್ನು ಮೊದಲ ಆದ್ಯತೆಯಾಗಿ ಪರಿಗಣಿಸಿ ಕೋವಿಡ್ ರೋಗಿಗಳನ್ನು ದಾಖಲಿಸಲು ಹಾಗೂ ನಂತರ ದಾಖಲಾಗುವ ಪ್ರಕರಣಗಳನ್ನು ಉಳಿದ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸುವ ಬಗ್ಗೆ ಕ್ರಮವಹಿಸಲು ಹಾಗೂ ತುರ್ತು ಸಂದರ್ಭದ ನಿಮಿತ್ತ ಹಿಮ್ಸ್ ಆಸ್ಪತ್ರೆಯಲ್ಲಿ 05 ಬೆಡ್‌ಗಳನ್ನು ಹೆಚ್ಚುವರಿಯಾಗಿ ಕಾಯ್ದಿರಿಸಲು ಮಾನ್ಯ ಸಚಿವರು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುವ ಸಂಬಂಧ ಬೆಳ್ಳೂರು ಕ್ರಾಸ್‌ನಲ್ಲಿರುವ ಆದಿಚುಂಚನಗಿರಿ ಆಸ್ಪತೆಯ ವೈದ್ಯರನ್ನು ನಿಯೋಜಿಸಿಕೊಳ್ಳುವ ಕುರಿತು ತುರ್ತು ಕ್ರಮವಹಿಸಲು ಮಾನ್ಯ ಸಚಿವರು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

ಈ ಸಭೆಯಲ್ಲಿ ಪ್ರವಾಹ ಹಾಗೂ ಕೋವಿಡ್ ನಿಯಂತ್ರಣದ ಸಂಬಂಧ ಜನಪ್ರತಿನಿಧಿಗಳು ನೀಡಿದ ಎಲ್ಲಾ ಸಲಹೆ-ಸೂಚನೆಗಳನ್ನು ತೆಗೆದುಕೊಂಡು ಸರ್ಕಾರದ ಮಟ್ಟದಲ್ಲಿ ಚರ್ಚಿಸುವುದಾಗಿಯೂ ಜಿಲ್ಲೆಯ ಶಾಸಕರು ಆತಂಕ ಪಡುವುದು ಬೇಡ ಎಂದು ಮಾನ್ಯ ಉಸ್ತುವಾರಿ ಸಚಿವರು ತಿಳಿಸಿದರು. ಪ್ರವಾಹ ಹಾಗೂ ಕೋವಿಡ್-19 ಅನ್ನು ನಿಯಂತ್ರಿಸುವ ಸಂಬಂಧ ಸರ್ಕಾರದಿಂದ ಹೊರಡಿಸಿರುವ ಆದೇಶ/ಸುತ್ತೋಲೆಗಳನ್ವಯ ಕಟ್ಟುನಿಟ್ಟಿನ ಕ್ರಮವಹಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**(ಆರ್.ಗಿರೀಶ್, ಭಾ.ಆ.ಸೇ)**
**ಜಿಲ್ಲಾಧಿಕಾರಿ,**
**ಹಾಸನ ಜಿಲ್ಲೆ, ಹಾಸನ.**

**ಪ್ರತಿಯನ್ನು:**

1. ಆಪ್ತ ಕಾರ್ಯದರ್ಶಿಗಳು, ಸನ್ಮಾನ್ಯ ಮಾನ್ಯ ಆಹಾರ, ನಾಗರೀಕ ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರು, ವಿಧಾನ ಸೌಧ, ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ.
3. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಹಾಸನ.
4. ಮುಖ್ಯ ಇಂಜಿನಿಯರ್, ಹೇಮಾವತಿ ಜಲಾಶಯ ಯೋಜನೆ, ಗೊರೂರು.
5. ಜಿಲ್ಲಾ ಅರಣ್ಯಾಧಿಕಾರಿಗಳು, ಅರಣ್ಯ ಇಲಾಖೆ, ಹಾಸನ.
6. ಉಪವಿಭಾಗಾಧಿಕಾರಿಗಳು, ಹಾಸನ/ಸಕಲೇಶಪುರ ಉಪವಿಭಾಗ.
7. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾಸನ.
8. ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ.
9. ಸೂಪರಿಂಟೆಂಡೆಂಟ್ ಅಭಿಯಂತರರು, ಚೆಸ್ಕಾಂ, ಹಾಸನ.
10. ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಹಾಸನ.
11. ಉಪ ನಿರ್ದೇಶಕರು, ತೋಟಗಾರಿಕಾ ಇಲಾಖೆ, ಹಾಸನ.

12. ಜಿಲ್ಲಾ ಆರೋಗ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾಸನ.
13. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಹಾಸನ/ ಚನ್ನರಾಯಪಟ್ಟಣ ವಿಭಾಗ.
14. ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಹಾಸನ.
15. ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.
16. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ.
17. ಕಾರ್ಯಪಾಲಕ ಅಭಿಯಂತರರು, ಕೆ.ಪಿ.ಟಿ.ಸಿ.ಎಲ್., ಹಾಸನ.
18. ಕಾರ್ಯಪಾಲಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ಇಲಾಖೆ, ಹಾಸನ.
19. ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಹಾಸನ.
20. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಹಾಸನ.
21. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ, ಹಾಸನ.
22. ಜಿಲ್ಲೆಯ ಎಲ್ಲಾ ತಾಲ್ಲೂಕು ತಹಸೀಲ್ದಾರರು.
23. ಇತರೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು.

ಅಭಿಯಾನ ನಿರ್ದೇಶಕರ ಕಚೇರಿ
ರಾಷ್ಟ್ರೀಯ ಜೀವನೋಪಾಯ ಅಭಿಯಾನ

ಕರ್ನಾಟಕ ಸರ್ಕಾರ

ಫೋನ್ ನಂ. 080–25599991/2/3
ಇ–ಮೇಲ್:daynulm@gmail.com
ನಂ.11, ಕೊಠಡಿ ನಂ: 305, 3ನೇ ಮಹಡಿ,
ಬ್ಲೂ ಕ್ರಾಸ್ ಛೇಂಬರ್ಸ್ ಕಟ್ಟಡ,
ಇನ್‌ಫ್ಯಾಂಟ್ರಿ ಅಡ್ಡರಸ್ತೆ, ಬೆಂಗಳೂರು–560 001.

ನಂ. ಅನಿಕ 11 ಡೇ–ನಲ್ಮ್ 2020–21

ದಿನಾಂಕ: 19 .08.2020

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಸುಧಾರಣೆ), ಬೆಂಗಳೂರು–560 001.

ಮಾನ್ಯರೇ,

ವಿಷಯ: ಗದಗ ಜಿಲ್ಲೆಯ ಭೇಟಿಯ ವರದಿಯನ್ನು ನಿಗದಿತ ನಮೂನೆಯಲ್ಲಿ ಒದಗಿಸುತ್ತಿರುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಇಸಪ 2019, ದಿನಾಂಕ:24.04.2020.

2) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಇಸಪ 2019, ದಿನಾಂಕ:22.04.2020.

---*/*/*---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರಿ ಆದೇಶದಂತೆ, ದಿನಾಂಕ:05 ಮತ್ತು 06, ಆಗಸ್ಟ್ 2020 ರಂದು ಗದಗ ಜಿಲ್ಲೆಗೆ 5ನೇ ಭೇಟಿ ನೀಡಿ ಕೈಗೊಂಡ ಪ್ರಗತಿ ಪರಿಶೀಲನಾ ವರದಿಯನ್ನು ಉಲ್ಲೇಖ(2)ರ ಸರ್ಕಾರದ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ.ಎಂ.ಟಿ.ರೇಜು, ಭಾ.ಆ.ಸೇ.)
ಅಭಿಯಾನ ನಿರ್ದೇಶಕರು,
ರಾಷ್ಟ್ರೀಯ ಜೀವನೋಪಾಯ ಅಭಿಯಾನ,
ಬೆಂಗಳೂರು ಹಾಗೂ
ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಪ್ರತಿಯನ್ನು ಮಾಹಿತಿಗಾಗಿ:–

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳಿಗೆ – ಗದಗ ಜಿಲ್ಲೆ ಭೇಟಿಯ ವರದಿಯನ್ನು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
2) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ – ಗದಗ ಜಿಲ್ಲೆ ಭೇಟಿಯ ವರದಿಯನ್ನು ಮಾನ್ಯರ ಅವಗಾಹನೆಗೆ ತರಲು ಕೋರಿದೆ.
3) ಕಚೇರಿ ಪ್ರತಿ.

## I. ಕೋವಿಡ್-19 ಪಾಸಿಟಿವ್ ವ್ಯಕ್ತಿಗಳ ಸಂಪರ್ಕ ಪತ್ತೆ

1. **24 ಗಂಟೆಗಳ ಒಳಗೆ ಕೊವಿಡ್ ಪಾಸಿಟೀವ್ ವ್ಯಕ್ತಿಗಳ ಸಂಪರ್ಕಗಳನ್ನು ಪತ್ತೆಹಚ್ಚಲು ರಚಿಸಲಾದ ಸಂಪರ್ಕ(ಟ್ರೇಸಿಂಗ್) ತಂಡಗಳು ಸಾಕಷ್ಟು ಇವೆಯೇ?**

ಹೌದು ಜಿಲ್ಲಾ ಮತ್ತು ತಾಲ್ಲುಕು ಹಂತದಲ್ಲಿ ತಮಡಗಳನ್ನು ರಚಿಸಲಾಗಿದೆ. ಆಗಸ್ಟ್ 5 ರವರೆಗೆ ಗದಗ ಜಿಲ್ಲೆಯಲ್ಲಿ 1764 ಪ್ರಕರಣಗಳು ಸಕಾರಾತ್ಮಕ (ಪಾಸಿಟೀವ್) ಎಂದು ವರದಿಯಾಗಿರುತ್ತವೆ. ಅದರಲ್ಲಿ 633 ಕೋವಿಡ್ ಸೋಂಕಿತರು ನಿಗದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿ ಆಸೊತ್ರೆಯಿಂದ ಬಿಡುಗಡೆಯಾಗಿರುತ್ತಾರೆ. ಜುಲೈ ಮಧ್ಯದಿಂದ ಇತ್ತೀಚಿನ ದಿನಗಳಲ್ಲಿ ಪ್ರತಿ ದಿನ 90 ರಿಂದ 100 ಪಾಸಿಟೀವ್ ಪ್ರಕರಣಗಳು ವರದಿಯಾಗುತ್ತಿವೆ. ಈ ಪ್ರತಿಯೊಂದು ಪ್ರಕರಣಕ್ಕೂ ಸರಾಸರಿ ನಾಲ್ಕರಿಂದ ಎಂಟು ಪ್ರಾಥಮಿಕ ಸಂಪರ್ಕ ಇರುವ ವ್ಯಕ್ತಿಗಳನ್ನು ಗುರುತಿಸಲಾಗುತ್ತಿದೆ.

2. **ಜಿಲ್ಲೆಯಲ್ಲಿ ಸಂಪರ್ಕ ಪತ್ತೆಹಚ್ಚುವಕೆಯನ್ನು ಸುಧಾರಿಸುವ ಕುರಿತು ಯಾವುದೇ ಸಲಹೆಗಳದ್ದಲ್ಲಿ, 50 ಪದಗಳಿಗೆ ಮಿರದಂತೆ ವರದಿ;**

ಜುಲೈ ಮಧ್ಯದಿಂದ ಇತ್ತೀಚಿನ ದಿನಗಳಲ್ಲಿ ಪ್ರತಿ ದಿನ 90 ರಿಂದ 100 ಪಾಸಿಟೀವ್ ಪ್ರಕರಣಗಳು ವರದಿಯಾಗುತ್ತಿವೆ. ಈ ಪ್ರತಿಯೊಂದು ಪ್ರಕರಣಕ್ಕೂ ಸರಾಸರಿ ನಾಲ್ಕರಿಂದ ಎಂಟು ಪ್ರಾಥಮಿಕ ಸಂಪರ್ಕ ಇರುವ ವ್ಯಕ್ತಿಗಳನ್ನು ಗುರುತಿಸಲಾಗುತ್ತಿದೆ. ಆದರೇ, ಲಾಕ್‌ಡೌನ್ ಇಲ್ಲದೇ ಇರುವುದರಿಂದ ಹಾಗೂ ಜಿಲ್ಲೆಯಲ್ಲಿ ಎಲ್ಲಾ ರಿತಿಯ ಆರ್ಥಿಕ ಚಟುವಟಿಕೆಗಳು ನಡೆಯುತ್ತಿರುವುದರಿಂದ ಎಸ್.ಒ.ಪಿ ಯಂತೆ 14 ದಿನಗಳ ಒಳಗೆ ಸಂಪರ್ಕಕ್ಕೆ ಬಂದಿರುವ ಪ್ರಾಥಮಿಕ ಸಂಪರ್ಕಗಳನ್ನು ಪತ್ತೆಹಚ್ಚುವುದು ಅತ್ಯಂತ ಕಷ್ಟಸಾಧ್ಯವಾಗುತ್ತಿದೆ. ದ್ವಿತೀಯ ಸಂಪರ್ಕ ಇರುವ ವ್ಯಕ್ತಿಗಳ ಪಟ್ಟಿ ಮಾಡಿ ಗುರುತು ಮಾಡುವುದು ಅಸಾಧ್ಯವೇ ಆಗಿರುತ್ತದೆ. ಸಂಪರ್ಕ ಪತ್ತೆ ಮಾಡುವುದಕ್ಕೆ ನಿಯೋಜಿಸಲಾಗಿರುವ ತಂಡಗಳು ಕರ್ತವ್ಯದಲ್ಲಿ ಪೂರ್ಣಸಮಯ ತೊಡಗಿದ್ದರೂ ಸಹ ಕೇವಲ 10% ಸಂಪರ್ಕಿತರನ್ನು ಸಹ ಪತ್ತೆ ಹಚ್ಚಲು ಸಾಧ್ಯವಾಗದೇ ಇರುವುದರಿಂದ, ಈ ಪ್ರಕ್ರಿಯೆಯನ್ನು ಇದೇ ರೀತಿ ಮುಂದುವರೆಸುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕಾಗಿರುತ್ತದೆ.

ಇದಲ್ಲದೇ ಎಲ್ಲಾ ಆರೋಗ್ಯ ಕಾರ್ಯಕರ್ತರು ಹಾಗೂ ಸಿಬ್ಬಂದಿ ವರ್ಗದವರು ಸಂಪರ್ಕ ಪತ್ತೆಹಚ್ಚುವಿಕೆ ಹಾಗೂ ಕೋವಿಡ್ ಸಂಬಂಧ ವಿವಿಧ ಕಾರ್ಯದಲ್ಲಿ ತೊಡಗಿರುವುದರಿಂದ, ಈ ಋತುಮಾನದಲ್ಲಿ ಮಾಡಬೇಕಾಗಿರುವ ಆರೋಗ್ಯ ಸಂಬಂಧ ಇನ್ನಿತರ ಎಲ್ಲಾ ಸೇವೆಗಳಿಗೆ ಅಡಚಣೆಯುಂಟಾಗುತ್ತಿದೆ.

3. **ಪ್ರತಿ ಕೋವಿಡ್ ಸಕಾರಾತ್ಮಕ ಪ್ರಕರಣದ ಪ್ರಾಥಮಿಕ, ದ್ವಿತೀಯ ಸಂಪರ್ಕಗಳ ಸಂಖ್ಯೆ:**
ಜಿಲ್ಲೆಯಲ್ಲಿ ಈವರೆಗೆ 1764 ಕೋವಿಡ್ ಸೋಂಕಿತರು ಪತ್ತೆಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ

ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆಹಚ್ಚಿ ಕ್ರಮ ಕೈಗೊಂಡಿದ್ದು, ವಿವರ ಈ ಕೆಳಗಿನಂತಿದೆ:

| ಒಟ್ಟು ಪ್ರಕರಣಗಳ ಸಂಖ್ಯೆ | ಪ್ರಾಥಮಿಕ ಸಂಪರ್ಕ | ದ್ವಿತೀಯ ಸಂಪರ್ಕ |
|---|---|---|
| 1764 | 7819 | 7712 |

4. ಜಿಲ್ಲಾಡಳಿತವು ಯಾವುದೇ ಸಂಪರ್ಕಗಳನ್ನು ಬಿಡದೆ ಸಮಗ್ರ ಸಂಪರ್ಕ ಪತ್ತೆಹಚ್ಚುವಿಕೆಯನ್ನು ಮಾಡಿದೆಯೇ?

ಹೌದು.

5. ಕಾಂಟ್ಯಾಕ್ಟ್ ಟ್ರೇಸಿಂಗ್‌ನಲ್ಲಿ ಯಾವುದೇ ನ್ಯೂನತೆಗಳಿರುವ ಬಗ್ಗೆ ಸೂಚನೆ(50 ಪದಗಳಿಗೆ ಮೀರದಂತೆ ವರದಿ)

ಜಿಲ್ಲೆಯಲ್ಲಿ ಇತರೆ ಇಲಾಖೆಗಳು ಸೇರಿದಂತೆ ಲಭ್ಯವಿರುವ ಮಾನವ ಸಂಪನ್ಮೂಲ ಬಳಸಿ ಕಾಂಟ್ಯಾಕ್ಟ್ ಟ್ರೇಸಿಂಗ್ ಮಾಡುವುದಕ್ಕೆ ಜಿಲ್ಲಾಡಳಿತದಿಂದ ಎಲ್ಲಾ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಜನರ ಚಲನವಲನಗಳಿಗೆ ಲಾಕ್‌ಡೌನ್ ಅಥವಾ ನಿರ್ಬಂಧಗಳು ಇರದ ಕಾರಣ ಎಲ್ಲಾ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಪತ್ತೆಹಚ್ಚುವುದು ಅತ್ಯಂತ ಕಷ್ಟಸಾಧ್ಯವಿರುತ್ತದೆ.

6. ಪ್ರಾಥಮಿಕ ಸಂಪರ್ಕಗಳನ್ನು ಪ್ರತ್ಯೇಕವಾಗಿ ಇರಿಸಲಾಗಿರುವ ಆಸ್ಪತ್ರೆಗಳು ಮತ್ತು ಹಾಸ್ಟೆಲ್‌ಗಳು ಉತ್ತಮ ಮತ್ತು ಆರೋಗ್ಯಕರ ಸ್ಥಿತಿಯಲ್ಲಿವೆಯೇ?

ಪ್ರಾಥಮಿಕ ಸಂಪರ್ಕಿತರು ಎಂದು ಕಂಡುಬಂದಿರುವ ವ್ಯಕ್ತಿಗಳನ್ನು ಇತ್ತೀಚಿನ ಎಸ್.ಒ.ಪಿ ಪ್ರಕಾರ ಯಾವುದೇ ವಸತಿಗೃಹಗಳಲ್ಲಾಗಲಿ ಅಥವಾ ಆಸ್ಪತ್ರೆಗಳಲ್ಲಗಲೀ ಇರಿಸಿರುವುದಿಲ್ಲ. ದಿನಾಂಕ 05/08/2020ರವರೆಗಿನ ಮಾಹಿತಿಯಂತೆ, ಒಟ್ಟು 1091 ಸಕ್ರಿಯ **(Active)** ಕೋವಿಡ್-19ರ ಪ್ರಕರಗಳು ಗದಗದ ಜಿಲ್ಲೆಯಲ್ಲಿ ವರದಿಯಾಗಿರುತ್ತವೆ. ಇದರಲ್ಲಿ 150 ಪ್ರಕರಣಗಳು ಕೋವಿಡ್ ಆಸ್ಪತ್ರೆಗಳಲ್ಲಿ, 72 ಪ್ರಕರಣಗಳು ಖಾಸಗಿ ಆಸ್ಪತ್ರೆಗಳಲ್ಲಿ, 469 ಪ್ರಕರಣಗಳು ಕೋವಿಡ್ ಕೇರ್ ಕೇಂದ್ರಗಳಲ್ಲಿ ಹಾಗೂ 400 ಮನೆಗಳಲ್ಲಿ **(Asymptomatic but Positive)** ಪ್ರಕರಣಗಳು ಇವೆ. ಕೋವಿಡ್ ಕೇರ್ ಕೇಂದ್ರಗಳು ಉತ್ತಮ ಮತ್ತು ಆರೋಗ್ಯಕರ ಸ್ಥಿತಿಯಲ್ಲಿವೆ.

7. ಪ್ರತ್ಯೇಕತೆಯಿಂದ ಬಿಡುಗಡೆಯಾಗುವ ಮೊದಲು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಗಳ 12 ದಿನದ ಪರೀಕ್ಷೆಗಳನ್ನು ಮಾಡಲಾಗಿದೆಯೇ?

ಇತ್ತೀಚಿನ ಎಸ್.ಒ.ಪಿಯಂತೆ ನಿಗದಿತ ಅವಧಿ ಮುಗಿದ ನಂತರ ಆಸ್ಪತ್ರೆಯಿಂದ **discharge** ಮಾಡುವಾಗ ಪುನಃ ಕೋವಿಡ್ ಪತ್ತೆ ಪರೀಕ್ಷೆ ಮಾಡುತ್ತಿಲ್ಲ.

## II. ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳು:

1. **ಎಲ್ಲಾ ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳನ್ನು ವಿವಿಧ ಕೋವಿಡ್ ಧನಾತ್ಮಕ ಪ್ರಕರಣಗಳನ್ನು ಅವುಗಳನ್ನು ಗುರುತಿಸಿದ 28 ದಿನಗಳ ಒಳಗೆ ನೋಟಿಫೈ ಮಾಡಲಾಗಿದೆಯೇ?**

   ಹೌದು. ಆಗಸ್ಟ್ 5 ರವರೆಗೆ ಗದಗ ಜಿಲ್ಲೆಯಲ್ಲಿ 701 ನಿರ್ಭಂದಿತ ವಲಯಗಳನ್ನು ಗುರುತಿಸಲಾಗಿದ್ದು, ಅವುಗಳೆಲ್ಲವು ಸಕ್ರಿಯವಾಗಿವೆ. ಆದರೇ, ಪ್ರಸ್ತುತ ಚಾಲ್ತಿಯಲ್ಲಿರುವ ಎಸ್.ಒ.ಪಿ ಯಂತೆ ಜಿಲ್ಲಾಡಳಿತದ ವತಿಯಿಂದ ನಿರ್ಬಂಧಿತ ವಲಯಗಳನ್ನು ಅಧಿಸೂಚಿಸಲಾಗುತ್ತಿದೆ. ಪ್ರಾರಂಭದಲ್ಲಿ 1 ಕಿ.ಮೀ ವ್ಯಾಪ್ತಿಯನ್ನು ನಿಗದಿಪಡಿಸಿದ್ದ ಕಂಟೈನ್‌ಮೆಂಟ್ ವಲಯ ಪ್ರಸ್ತುತ ಎರಡು ಮೂರು ಮನೆಗಳಿಗೆ ಮಾತ್ರ ನಿರ್ಭಂದಿತ ವಲಯಗಳಾಗಿ ಉಳಿದಿರುತ್ತವೆ. ಆದರೇ ನಿರ್ಭಂದಿತ ವಲಯಗಳು ತುಂಬಾ ಹೆಚಾಗುತ್ತಿರುವುದರಿಂದ ಮತ್ತು ಪ್ರತಿನಿತ್ಯ ದೊಡ್ಡ ಪ್ರಮಾಣದಲ್ಲಿ ಸಂಖ್ಯೆಗಳು ಹೆಚ್ಚಾಗುತ್ತಿರುವುದರಿಂದ, ಈ ವಲಯಗಳಿಗೆ ಮೇಲುಸ್ತುವಾರಿ ವಹಿಸುವುದು ಹಾಗೂ ಎಲ್ಲಾ ಸಂಬಂಧಿಸಿದ ಸಿಬ್ಬಂದಿಗಳು ಲಭ್ಯವಾಗುವುದು ಕಷ್ಟವಾಗುತ್ತಿದೆ. ಆದ್ದರಿಂದ, ಸಮುದಾಯದಲ್ಲಿನ ನೆರೆಹೊರೆ ಸಮಿತಿಗಳಂದಲ್ಲದೇ ಬೇರಾವುದೇ ವ್ಯವಸ್ಥೆಯಿಂದ ಉಸ್ತುವಾರಿ ಮಾಡುವುದು ವಾಸ್ತವಿಕವಾಗಿ ತುಂಬಾ ಕಷ್ಟಸಾಧ್ಯವಾಗುತ್ತಿದೆ.

2. **ನೀವು ಎಲ್ಲಾ ಕಂಟೈನ್‌ಮೆಂಟ್ ವಲಯದ ನಕ್ಷೆಗಳನ್ನು ಪರಿಶೀಲಿಸಿದ್ದೀರಾ ಮತ್ತು ಕೆಲವನ್ನು ಅಗತ್ಯ ಮುನ್ನೆಚ್ಚರಿಕೆಯೊಂದಿಗೆ ಭೇಟಿ ಮಾಡಿದ್ದಿರಾ.**

   ನಿರ್ಭಂದಿತ ವಲಯಗಳು ಹೆಚ್ಚಾಗಿರುವುದರಿಂದ ಎಲ್ಲಾ ಕಂಟೈನ್‌ಮೆಂಟ್ ವಲಯಗಳನ್ನು ಭೇಟಿ ಮಾಡಿರುವುದಿಲ್ಲ. ಆದರೇ, ನಿರ್ಭಂದಿತ ವಲಯಗಳ ಕಾರ್ಯ ನಿರ್ವಹಣೆ ಹಾಗೂ ಕೈಗೊಂಡಿರುವ ಕ್ರಮಗಳನ್ನು ಸಭೆಯಲ್ಲಿ ಖಚಿತಪಡಿಲಾಗಿದೆ.

3. **ಕಂಟೈನ್‌ಮೆಂಟ್ ಮತ್ತು ಬಫರ್ ವಲಯಕ್ಕೆ incident commander/ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್ ಅವರನ್ನು ನೇಮಿಸಲಾಗಿದೆಯೇ?**
   ಹೌದು.

4. **ಕಂಟೈನ್‌ಮೆಂಟ್ ಮತ್ತು ಬಫರ್ ವಲಯಗಳಲ್ಲಿ ILIs/SARI ಗಳಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಕಣ್ಗಾವಲು ವ್ಯವಸ್ಥೆ ಇದೆಯೇ?**

   ಹೌದು. ಆದರೇ, ಕಾರ್ಯಕ್ಷಮತೆ ಕಡಿಮೆಯಾಗಿದೆ. ಸಮುದಾಯದ ಪಾಲ್ಗೊಳ್ಳುವಿಕೆ ಇಲ್ಲದೇ ಮುಂದಿನ ದಿನಗಳಲ್ಲಿ ನಿರ್ಭಂದಿತ ವಲಯಗಳ ಕಣ್ಗಾವಲಿನ ಕಾರ್ಯ ನಿರ್ವಹಿಸುವುದು ತುಂಬಾ ಕಷ್ಟಸಾಧ್ಯವಾಗುತ್ತಿದೆ.

## III. ಕೋವಿಡ್‌ಗಾಗಿ ಕಣ್ಗಾವಲು ಮತ್ತು ಸೌಲಭ್ಯಗಳು.

1. **ಗೊತ್ತುಪಡಿಸಿದ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾದ ಮಾದರಿಗಳ ಕುರಿತು ಯಾವುದೇ ವರದಿಗಳು ಜಿಲ್ಲೆಯಲ್ಲಿ ಬಾಕಿ ಉಳಿದಿವೆಯೇ?**

   ದಿನಾಂಕ 05/08/2020 ರಂತೆ 648 ಪ್ರಕರಣಗಳು ಬಾಕಿ ಉಳಿದಿವೆ. ಜಿಲ್ಲೆಯಲ್ಲಿ ಕಳೆದ ಎರಡು ದಿನಗಳಾಗಿ ಒಂದು ಆರ್.ಎ.ಟಿ ಕಿಟ್‌ಗಳು ಸಹ ಲಭ್ಯವಿರಲಿಲ್ಲ. ಪ್ರತಿನಿತ್ಯ 700 ರಷ್ಟು ಮಾದರಿಗಳನ್ನು ಸಂಗ್ರಹಿಸುತ್ತಿರುವುದರಿಂದ, ಬೇಕಾಗುವಷ್ಟು ಆರ್.ಎ.ಟಿ ಕಿಟ್‌ಗಳನ್ನು ನೀಡದೇ ಇರುವುದರಿಂದ ವರದಿಗಳು ಬಾಕಿ ಉಳಿದಿರುತ್ತವೆ. ಈಗಾಗಲೇ ಈ ವಿಷಯವನ್ನು ಆರೋಗ್ಯ ಮತ್ತು ಕುಟುಮಬ ಇಲಾಖೆಗೆ ಮತ್ತು Drugs and Logistics society ಹಾಗೂ ನೋಡೆಲ್ ಅಧಿಕಾರಿ testing ಇವರುಗಳ ಗಮನಕ್ಕೆ ಜಿಲ್ಲಾಡಳಿತವು ತಂದಿರುತ್ತದೆ. ಇದಲ್ಲದೇ, RNA extractor, ಹಾಗೂ TRUE-NAT, CB-NAAT ಪರೀಕ್ಷೆಗಳಿಗೆ ಬೇಕಾಗಿರುವ ಕಿಟ್‌ಗಳು ಈಗಲೂ ನಿಡದಿರುವುದರಿಂದ, ಜಿಲ್ಲೆಯಲ್ಲಿ ಲಭ್ಯವಿರುವ ಒಂದೇ ಒಂದು RTPCR ಯಂತ್ರದ ಗರಿಷ್ಠ ಸಾಮರ್ಥ್ಯಕ್ಕನುಗುಣವಾಗಿ ಪರೀಕ್ಷೆಗಳನ್ನು ಮಾಡಿ ವರದಿ ನಿಡಲಾಗುತ್ತಿದೆ.

2. **ಆರೋಗ್ಯ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯ ಪ್ರಕಾರ ಆರೋಗ್ಯ ಕಾರ್ಯಕರ್ತರು/ಆರೋಗ್ಯ ಸಿಬ್ಬಂದಿಗೆ Hydroxy chloroquine Sulphate (HCQ)ನೀಡಲಾಗಿದೆಯೇ?**

   ಪ್ರಸ್ತುತ ಅನ್ವಯವಾಗುವುದಿಲ್ಲ.

3. **ನೀವು ಮೀಸಲಿರುವ ಕೋವಿಡ್ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದೀರಾ?**

   ಹೌದು.

4. **ನೀವು ಮೀಸಲಿರುವ ಕೋವಿಡ್ ಆಸ್ಪತ್ರೆಯನ್ನು ವೀಕ್ಷಣೆ ಮಾಡಿ ಆಗಮಿಸಿದ ಅಂಶಗಳು (50 ಪದಗಳಿಗೆ ಮಿರದಂತೆ ವರದಿ)**

   ಈಗಾಗಲೇ ಕೋವಿಡ್ ಆಸ್ಪತ್ರೆ ಎಂದು ನಿಗದಿ ಮಾಡಿರುವ ಆಯುಷ್ ಆಸ್ಪತ್ರೆಯಲ್ಲಿ ಸಾಕಷ್ಟು ರೋಗಿಗಳಿರುವುದರಿಂದ ಗದಗ ಜಿಲ್ಲಾ ಕೇಂದ್ರದಲ್ಲಿರುವ ಜಿಮ್ಸ್ (Gadag institute of Medical Science) ನ ಒಂದು ವಿಭಾಗದಲ್ಲಿ ಕೋವಿಡ್-19 ಸಕಾರಾತ್ಮಕ ಪ್ರಕರಣಗಳನ್ನು ದಾಖಲೆ ಮಾಡಲಾಗುತ್ತಿದೆ. ಇದಲ್ಲದೇ ಖಾಸಗಿ ಆಸ್ಪತ್ರೆಗಳಲ್ಲಿ ಮತ್ತು ಕೋವಿಡ್ ನಿಗಾ ಕೇಂದ್ರಗಳಲ್ಲಿ ಹಾಗೂ ಮನೆಗಳಲ್ಲಿ ಕೊವಿಡ್ ಪಾಸಿಟೀವ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

5. **ರಾಜ್ಯವು ನೀಡಿದ ಗುರಿಗಳ ಪ್ರಕಾರ ಕಂಟಿಜೆನ್ಸಿ ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ?**

   ಹೌದು.

6. **(ಎ) ಕಂಟಿಜೆನ್ಸಿ ಯೋಜನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ಗುರುತಿಸಲಾಗಿದೆಯೇ?**

   ಗದಗ ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಈಗಾಗಲೇ ಕಂಟಿಜೆನ್ಸಿಗಳಿಗಾಗಿ ತೆಗೆದುಕೊಳ್ಳಲಾಗಿದೆ. ಪ್ರತಿ ದಿನ 100 ರಷ್ಟು ಕೋವಿಡ್ ಪಾಸಿಟೀವ್

ಪ್ರಕರಣಗಳು ಹಾಗೂ ಹೊಸ ನಿರ್ಭಂದಿತ ವಲಯಗಳು ಉಂಟಾಗಿರುವುದರಿಂದ ನೀರೀಕ್ಷಿತ ಮಟ್ಟದಲ್ಲಿ discharge ಆಗದೇ ಇರುವುದರಿಂದ ಲಭ್ಯವಿರುವ ಮಾನವ ಸಂಪನ್ಮೂಲಗಳ ಮೇಲೆ ತುಂಬಾ ಒತ್ತಡ ಈಗಾಗಲೇ ಬಂದಿರುತ್ತದೆ. ಇದು ಬೇರೆ ಬೇರೆ ಇಲಾಖೆಗಳ, ವಿಶೇಷವಾಗಿ ಆರೋಗ್ಯ ಇಲಾಖೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿರುವ ಇತರ ಆರೋಗ್ಯ ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸುವುದು ಸವಾಲಾಗಿರುತ್ತದೆ. ವೈದ್ಯಕೀಯ ಸೇವೆಗಳಾದ ನಿರಂತರ ಮನೆ ಭೇಟಿ, ಮಲೇರಿಯಾ/ಸೊಳ್ಳೆ ಅಭಿವೃದ್ಧಿ ಸಮೀಕ್ಷೆ/ಹೆಚ್1 ಎನ್1 ಕಣ್ಗಾವಲಿನ ಬಗ್ಗೆ ವೈಜ್ಞಾನಿಕ ಪರೀಕ್ಷಾ ಮಾದರಿಗಳ ಸಿದ್ಧಪಡಿಸುವಿಕೆ, ಆರ್.ಬಿ.ಎಸ್.ಕೆ ವತಿಯಿಂದ ಮಕ್ಕಳ ಪರೀಕ್ಷೆ, ಪೌಷ್ಟಿಕ ಪುನರ್ವಸತಿ ಕೇಂದ್ರಗಳಲ್ಲಿ ಅಪೌಷ್ಟಿಕ ಮಕ್ಕಳ ದಾಖಲಾತಿ, ಟಿ.ಬಿ ಖಾಯಿಲೆಗೆ ಸಂಬಂಧಿಸಿದ ಗುರುತಿಸುವಿಕೆ ಮತ್ತು ಮಾದರಿ ಅಭಿವೃದ್ಧಿ & ಔಷಧ ಸಂವೇದನೆ ಪರೀಕ್ಷೆಗಳು ಮುಂತಾದ ಕಾರ್ಯಗಳ ಪ್ರಗತಿ ಕುಂಠಿತವಾಗಿದೆ. ಇದರಿಂದ ಸಮುದಾಯ ಆರೋಗ್ಯದ ಮೇಲೆ ಹೆಚ್ಚಿನ ಋಣಾತ್ಮಕ ಪರಿಣಾಮ ಬೀರಲು ಕಾರಣವಾಗುತ್ತದೆ. ಉದಾಹರಣೆಯಾಗಿ ಜೂನ್ . 2020ರ ಮಾಹೆಯಲ್ಲಿ maternal mortality rate MMR 227 ಆಗಿರುತ್ತದೆ. 2019ರ ಜೂನ್ ಮಾಹೆಗೆ ಹೋಲಿಸಿದಾಗ, ಇದು 94 ಇರುತ್ತದೆ.

7. **(ಬಿ)ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆಯೇ?**

ಕೋವಿಡ್ ನಿಗಾ ಕೇಂದ್ರ ಹಾಗೂ home isolation ನಲ್ಲಿರುವ ಕೋವಿಡ್-19 ಪಾಸಿಟೀವ್ ಪ್ರಕರಣಗಳ ಸಂಖ್ಯೆ ಅಧಿಕವಾಗುತ್ತಿರುವುದರಿಂದ, ಕೋವಿಡ್ ಕೇಸ್‌ಗಳನ್ನು ನಿರ್ವಹಣೆ ಮಾಡುವ ಬಗ್ಗೆ ಸಮುದಾಯದ ವತಿಯಿಂದ ಹೆಚ್ಚಿನ ಜನರಿಗೆ ತರಬೇತಿ ನೀಡುವುದು ಅವಶ್ಯಕ್ತೆಯಿರುತ್ತದೆ.

## ಒಟ್ಟಾರೆ ವೀಕ್ಷಿಸಿದ ಅಂಶಗಳು:

1. ಆಗಸ್ಟ್, 2020ರ ಮೊದಲನೆಯ ವಾರದಲ್ಲಿ ಆರೋಗ್ಯ ಇಲಾಖೆಯ 20 ಸಿಬ್ಬಂದಿಗಳಿಗೆ, 36 ಪೋಲೀಸ್ ಸಿಬ್ಬಂದಿಗಳಿಗೆ, 08 ಇತರೆ ಇಲಾಖೆಗಳ ಸಿಬ್ಬಂದಿಗೆ ಕೋವಿಡ್ ಪಾಸಿಟೀವ್ ದೃಢಪಟ್ಟಿರುತ್ತದೆ.
2. ಆರ್.ಎ.ಟಿ ಪರೀಕ್ಷೆ ಚಾಲ್ತಿಗೆ ಬಂದ ಮೇಲೆ 24 ಗಂಟೆಗಳಲ್ಲಿ ಆಗುತ್ತಿರುವ ಟೆಸ್ಟ್‌ಗಳ ಸಂಖ್ಯೆ ಗಣನೀಯವಾಗಿರುತ್ತವೆ. ಆದರೆ, ಪ್ರಸ್ತು ಜಿಲ್ಲೆಯಲ್ಲ ಆರ್.ಎ.ಟಿ ಟೆಸ್ಟ್‌ಗಳಿಗೆ ಕಿಟ್‌ಗಳು ಲಭ್ಯವಿರುವುದಿಲ್ಲ.
3. ಆದ್ದರಿಂದ ಆರಂಭಿಕ ಹಂತದಲ್ಲಿ ನಿರಂತರವಾಗಿ ಉಪಯೋಗವಾಗುತ್ತಿದ್ದ ಐದು ತಂತ್ರಾಂಶಗಳಾದ 1) ಸಂಪರ್ಕ ಪತ್ತೆ ತಂತ್ರಾಂಶ(Contact tracing app), 2) ಗೃಹ ದಿಗ್ಬಂಧನ ತಂತ್ರಾಂಶ(Home Quarantine app) 3) ಕೆ.ಪಿ.ಎಮ್.ಇ ತಂತ್ರಾಂಶ(KPME app), 4) ಔಷಧಾಲಯ ತಂತ್ರಾಂಶ (Pharmacy app) ಮತ್ತು 5) ಕಂಟೈನ್‌ಮೆಂಟ್ ತಂತ್ರಾಂಶ

(Containment Zone app)ಗಳ ಪ್ರಾಮುಖ್ಯತೆ ಪುನಃ ಪರಿಶೀಲಿಸಬೇಕಾಗಿದ್ದು, ಇವುಗಳಿಂದ ಕ್ಷೇತ್ರ ಮಟ್ಟಟದಲ್ಲಿ ನಿರೀಕ್ಷಿತ ಪ್ರಯೋಜನ ಕಂಡುಬರುತ್ತಿಲ್ಲ. ಇದರ ಬದಲಾಗಿ ಆಪ್ತಮಿತ್ರ ತಂತ್ರಾಂಶವನ್ನು ಹೆಚ್ಚಾಗಿ ಉತ್ತೇಜಿಸಿ ನಿರಂತರವಾಗಿ ಪತ್ತೆಹಚ್ಚುವಿಕೆಯನ್ನು ಉತ್ತೇಜಿಸಿ ದುರ್ಬಲ ಜನರಿಗೆ ತುರ್ತಾಗಿ ವೈಕ್ಯಕೀಯ ಸೇವೆ ಒದಗಿಸಬಹುದಾದರೆ ಹಾಗೂ fatality rateನ್ನು ಕಡಿಮೆ ಮಾಡಬಹುದಾಗಿರುತ್ತದೆ.

4. ತುರ್ತು ಸಂದರ್ಭದಲ್ಲಿ ಅವಶ್ಯಕತೆ ಬಂದಲ್ಲಿ, ಮೃತದೇಹಗಳ ಅಂತಿಮ ಸಂಸ್ಕಾರಕ್ಕಾಗಿ ಹೊಸ ರುದ್ರಭೂಮಿಯನ್ನು ಗುರುತಿಸಿ ಜಿಲ್ಲಾಡಳಿತದಿಂದ ಕ್ರಮ ವಹಿಸಲಾಗಿದೆ.

5. ಗದಗ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಕೃಷಿ ಚಟುವಟಿಕೆಗಳು ಭರದಿಂದ ಸಾಗುತ್ತಿದ್ದು, ಮಲಪ್ರಭ ನದಿಯಲ್ಲಿ ನವಿಲುತೀರ್ಥ ಅನೆಕಟ್ಟಿನ ನೀರಿನ ಮಟ್ಟವು ಈಗಾಗಲೇ 2062 ಅಡಿಗಳು ಭರ್ತಿಯಾಗಿದ್ದು, 2070 ಅಡಿಗಳು ದಾಟಿದಲ್ಲಿ ನೀರಿನ ಬಿಡುಗಡೆಗೆ ಕ್ರಮ ವಹಿಸಲಾಗಿರುತ್ತದೆ. ಆದುದರಿಂದ ಹಿಂದಿನ ಸಾಲುಗಳಲ್ಲಿ ಆಗಿರುವಂತೆ ರೋಣ ಹಾಗೂ ನರಗುಂದ ತಾಲ್ಲೂಕುಗಳಲ್ಲಿ ಅನಿರೀಕ್ಷಿತ ಪ್ರವಾಹದ ಮುನ್ನೆಚ್ಚರಿಕೆಗಳನ್ನು ಜಿಲ್ಲಾಡಳಿತವು ಕೈಗೊಂಡಿರುತ್ತದೆ.

ದಿನಾಂಕ: 05/08/2020

19/08/2020

ಡಾ|| ಎಂ.ಟಿ.ರೇಜು,ಭಾ.ಆ.ಸೇ
**ಅಭಿಯಾನ ನಿರ್ದೇಶಕರು**
**ಸಂಜೀವಿನಿ–ಎನ್.ಎಲ್.ಎಮ್, ಬೆಂಗಳೂರು**
**ಹಾಗೂ**
**ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು**

**ದಿನಾಂಕ: 18.08.2020 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಕೋವಿಡ್-19 ಪ್ರಗತಿ ಪರೀಸಿಲನಾ ಸಭೆಯ ನಡುವಳಿಗಳು**

**ಹಾಜರಿದ್ದವರು:**

1. ಜಿಲ್ಲಾಧಿಕಾರಿಗಳು, ಬಳ್ಳಾರಿ.
2. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು,ಬಳ್ಳಾರಿ
3. ಅಪರ ಜಿಲ್ಲಾಧಿಕಾರಿಗಳು, ಬಳ್ಳಾರಿ.
4. ನಿರ್ದೇಶಕರು, ವಿಜಯನಗರ ವೈದ್ಯಕೀಯ ಸಂಸ್ಥೆ, ಬಳ್ಳಾರಿ.
5. ಜಿಲ್ಲಾ ಆರೋಗ್ಯ ಅಧಿಕಾರಿಗಳು, ಬಳ್ಳಾರಿ
6. ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್ , ಬಳ್ಳಾರಿ.
7. ಜಿಲ್ಲಾ ಸರ್ವೆಕ್ಷಣಾಧಿಕಾರಿಗಳು, ಜಿಲ್ಲಾ ಸರ್ವೆಕ್ಷಣಾಧಿಕಾರಿಗಳ ಕಛೇರಿ, ಬಳ್ಳಾರಿ
8. ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ
9. ಹಿರಿಯ ಸಹಾಯಕ ನಿರ್ದೆಶಕರು, ವಾರ್ತಾ ಇಲಾಖೆ, ಬಳ್ಳಾರಿ.

******

ಜಿಲ್ಲಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಮತ್ತು ಸಭೆಯಲ್ಲಿ ಭಾಗವಹಿಸಿದ ಆಧಿಕಾರಿಗಳನ್ನು ಸ್ವಾಗತಿಸಿದರು

ನಂತರ ಬಳ್ಳಾರಿ ಜಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಜಿಲ್ಲಾ ಮಟ್ಟದ ಕೋವಿಡ್-19 ನ ಪ್ರಗತಿಯ ಕ್ರಮಗಳ ಕುರಿತು ವಿವರಣೆ ಬಯಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಜಿಲ್ಲೆಯಲ್ಲಿ ಕೋವಿಡ್ 19 ಗೆ ಸಂಬಂಧಿಸಿದಂತೆ ಈಗಾಗಲೇ 700 ಹಾಸಿಗೆಗಳ ಸಾಮರ್ಥ್ಯದ 04 ಕೋವಿಡ್ ಆಸ್ಪತ್ರೆಗಳು ( ಜಿಲ್ಲಾ ಆಸ್ಪತ್ರೆ, ಪ್ರಧಾನ ಮಂತ್ರಿ ಟ್ರಾಮಾ ಸೆಂಟರ್, ಸಂಜೀವಿನಿ ಆಸ್ಪತ್ರೆ, ಹಾಗೂ ವಿಮ್ಸ್ ಆಸ್ಪತ್ರೆ ) ಕಾರ್ಯನಿರ್ವಹಿಸುತ್ತಿವೆ. ವಿಮ್ಸ್ ಡೆಂಟಲ್ ಕಾಲೇಜು, ಒಪಿಜಿ ಕೇಂದ್ರ, ವಿಮ್ಸ್ ಒಲ್ಡ್ ಡೈರಕ್ಟರ್ ಕಚೇರಿ, ಟಿಬಿ ಸ್ಯಾನಿಟೋರಿಮ್ ಹಾಗೂ ತಾಲೂಕು ಮಟ್ಟದ 07 ಸಾರ್ವಜನಿಕ ಆಸ್ಪತ್ರೆಗಳಲ್ಲಿ ತಲಾ 20 ಬೆಡ್ ಸೇರಿದಂತೆ 28 ಕೋವಿಡ್ ಹೆಲ್ತ್ ಸೆಂಟರ್‌ಗಳು (550 ಹಾಸಿಗೆಗಳು) ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ 11 ಪ್ರಮುಖ ಹಾಸ್ಟೇಲ್‌ಗಳನ್ನು ಕೋವಿಡ್ ಕೇರ್ ಸೆಂಟರ್‌ಗಳಾಗಿ ಪರಿವರ್ತಿಸಿದ್ದು ( 1100 ಹಾಸಿಗೆಗಳು ) ದಿನದ 24 ಗಂಟೆಗಳ ಕಾಲ ವೈದ್ಯಕೀಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿವುದಾಗಿ ತಿಳಿಸಿದರು.

ಗಂಭೀರ ಕಾಯಿಲೆಯಿಂದ ಬಳಲುವ ಕೋವಿಡ್ ರೋಗಿಗಳ ತುರ್ತು ಆರೈಕೆಗಾಗಿ 92 ವೆಂಟಿಲೇಟರ್ ಗಳನ್ನು, 105 ಐಸಿಯು ಬೆಡ್ಗಳನ್ನು ಸಿದ್ಧಪಡಿಸಲಾಗಿದೆ. 45 ಹೆಚ್ಎಫ್ಎನ್‌ಸಿ ಬೆಡಗಳ ವ್ಯವಸ್ಥೆ ಮಾಡಲಾಗಿದೆ ಹಾಗೂ 1213 ಆಕ್ಸಿಜನ್ ಬೆಡ್ಸ್ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ವಿವರಿಸಿದರು.

ಕೋವಿಡ್ ಡೈಯಾಲಿಸ್ ರೋಗಿಗಳಿಗೆ 2 ಡೈಯಾಲಿಸ್ ಮಿಷಿನ್ ಹಾಗೂ 01 ಆರ್‌ಓ ಪ್ಲಾಂಟ್ ಒಂದು ವಾಷಿಂಗ್ ಮಷಿನ್ ಅಳವಡಿಸಲಾಗಿದೆ. ಜಿಲ್ಲಾ ಆಸ್ಪತ್ರೆಯಲ್ಲಿ 6 ಸಾವಿರ ಲೀಟರ್ ಆಕ್ಸಿಜನ್ ಪ್ಲಾಂಟ್ ಒಳಗೊಂಡಂತೆ ವಿಮ್ಸ್ ಡೆಂಟಲ್ ಕಾಲೇಜ್ 10 ಸಾವಿರ ಕಿಲೋ ಲೀಟರ್, ಟ್ರಾಮಾ ಕೇರ್ ಸೆಂಟರನಲ್ಲಿ 13 ಸಾವಿರ ಕಿಲೋ ಲೀಟರ್ ಆಕ್ಸಿಜನ್ ಪ್ಲಾಂಟ್ ಅಳವಡಿಸಲಾಗಿದೆ. ಎಲ್ಲಾ ರೋಗಿಗಳಿಗೆ ಬಿಸಿ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ. ಹೊಸದಾಗಿ 15 ಹೆಚ್‌ಎಫ್‌ಎನ್‌ಸಿ, 05 (ಪೋರ್ಟೆಬಲ್) ಎಕ್ಸ್ ಮೇಷಿನ್ ಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿ ಸಭೆಗೆ ವಿವರಿಸಿದರ.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಸರ್ಕಾರದಿಂದ ಜಿಲ್ಲೆಗೆ ಕೋವಿಡ್-19 ಪರೀಕ್ಷೆಗಳ ಗುರಿಗಳನ್ನು ನಿಗಧಿಪಡಿಸಿದ್ದು, ಬಳ್ಳಾರಿ ಜಿಲ್ಲೆಗೆ ದಿನಕ್ಕೆ **1500 RAT** ಪರೀಕ್ಷೆಗಳು ಮತ್ತು **450 RTPCR** ಪರೀಕ್ಷೆಗಳು ಒಳಪಡಿಸಲು ಗುರಿ ನಿಗಧಿಯಾಗಿರುತ್ತದೆ. ಅದರಂತೆ ಸರಾಸರಿ ಪ್ರತಿದಿನ **2350 RAT** ಪರೀಕ್ಷೆಗಳು ಮತ್ತು **615 RTPCR** ಪರೀಕ್ಷೆಗಳಿಗೆ ಒಳಪಡಿಸಲಾಗುತ್ತದೆ. ಕೋವಿಡ ಪರೀಕ್ಷೆಗಳಲ್ಲಿ ರಾಜ್ಯದಲ್ಲಿ ಜಿಲ್ಲೆಯು ಎರಡನೇ ಸ್ಥಾನದಲ್ಲಿದೆ. ಆದ್ದರಿಂದ ಸಕಾರತ್ಮಕ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುತ್ತಿವೆ ಎಂದು ವಿವರಿಸಿದರು.

ಇಲ್ಲಿಯವರೆಗೆ **5194** ಮನೆ ಪ್ರತ್ಯಕತೆಯಲ್ಲಿ ಆರೈಕೆ ಪಡೆಯುತ್ತಿದ್ದು, ಅದರಲ್ಲಿ **2842** ಸಕಾರತ್ಮಕ ಪ್ರಕರಣಗಳು ಮನೆ ಪ್ರತ್ಯಕತೆಯಲ್ಲಿ ಆರೈಕೆಯನ್ನು ಯಶ್ವಸಿಯಾಗಿ ಪೂರ್ಣಗೊಳಿಸಿ ಆರೋಗ್ಯವಾಗಿದ್ದಾರೆ ಮತ್ತು ಇನ್ನುಳಿದ **2842** ಸಕಾರತ್ಮಕ ಪ್ರಕರಣಗಳು ಸಕ್ರೀಯವಾಗಿ ಮನೆ ಪ್ರತ್ಯಕತೆಯಲ್ಲಿ ಆರೈಕೆ ಪಡೆಯುತ್ತಿದ್ದಾರೆ.

ಈ ಕುರಿತು ಜಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲೆಯಲ್ಲಿ ಪರೀಕ್ಷೆಗಳು ಹೆಚ್ಚಾಗಿ ಮಾಡುತ್ತಿರುವದರಿಂದ ಬಹುಬೇಗ ರೋಗ ಲಕ್ಷಣಗಳ ರಹಿತ ಸಕಾರತ್ಮಕ ಪ್ರಕರಣಗಳು ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವದರಿಂದ ಸದರಿಯವರು ಮನೆಯ ಆರೈಕೆಯಲ್ಲಿ ಇರುವವರ ಸಂಖ್ಯೆ ಹೆಚ್ಚಾಗಿ ಕಂಡು ಬಂದಿರುವುದು ಮತ್ತು ಮರಣದ ಪ್ರಮಾಣ ಕಡಿಮೆಯಾಗಿರುವುದು ಸಕಾರತ್ಮಕ ಬೆಳವಣಿಗೆಗೆ ನಿಮ್ಮೆಲ್ಲರ ಶ್ರಮವಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಮುಂದುವರೆದು ಇನ್ನು ಜಿಲ್ಲೆಯ ನಗರ ಪ್ರದೇಶಗಳಲ್ಲಿ ಮತ್ತು ಕೊಳಚೆ ಪ್ರದೇಶಗಳಲ್ಲಿ ಪರೀಕ್ಷೆಗಳು ಹೆಚ್ಚು ಹೆಚ್ಚು ಮಾಡುವಂತೆ ಕ್ರಮವಹಿಸಲು ಸೂಚಿಸಿದರು.

**ಸಂಪರ್ಕಿತರನ್ನು ಸಂಪರ್ಕ ಪತ್ತೆ ಹಚ್ಚುವ ಆಪ್ (CT App):** ಜಿಲ್ಲೆಯಲ್ಲಿ ದಿನಾಂಕ: 17.08.2020 ರ ಅಂತ್ಯಕ್ಕೆ **14663** ಸಕಾರಾತ್ಮಕ ಕೋವಿಡ್ ವರದಿಯಾಗಿದ್ದು, ಎಲ್ಲಾ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ವಿವರಗಳನ್ನು 24 ಗಂಟೆಯೊಳಗಾಗಿ ಸಂಪರ್ಕ ಪತ್ತೆ ಹಚ್ಚುವ ಆಪ್ (CT App) ನಲ್ಲಿ ದಾಖಲಿಸಲು ಕ್ರಮವಹಿಸಲಾಗಿದೆ. ಈ ವರೆಗೆ **64319** ಪ್ರೈಮರಿ ಕಾಂಟ್ಯಾಕ್ಟ್ಸ್ ಮತ್ತು **17384** ಸೆಕೆಂಡರಿ ಕಾಂಟ್ಯಾಕ್ಟ್ಸ್ ಗಳನ್ನು ದಾಖಲು ಮಾಡಲಾಗಿ ಅವರನ್ನು ಅನುಸರಣೆ ಮಾಡಲಾಗಿತ್ತಿದೆ ಎಂದು ತಿಳಿಸಿದರು. ಮತ್ತು ಶಿಕ್ಷಣ ಇಲಾಖೆಯ ತಂಡಗಳೊಂದಿಗೆ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ವಿವರಗಳನ್ನು ಪತ್ತೆ ಹಚ್ಚುವುದು ಸದರಿ ವಿವರಗಳನ್ನು ಸಲ್ಲಿಸುವುದರಿಂದ ಹೆಚ್ಚು ಹೆಚ್ಚು ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಗುರುತಿಸಲು ಸಾಧ್ಯವಾಗುತ್ತಿದೆ ಎಂದು ವಿವರಿಸಿದರು.

**ಕ್ವಾರಂಟೈನ್ ವಾಚ್ ಆಪ್ಸ್ (QW app):** ಜಿಲ್ಲೆಯಲ್ಲಿ ದಿನಾಂಕ: 18.08.2020 ರ 10:00am ರ ಅಂತ್ಯಕ್ಕೆ Quarantine watch App ನಲ್ಲಿ ಇದುವರೆಗೂ ಒಟ್ಟು **21500** ಇದ್ದು, ಸಿಬ್ಬಂದಿಯವರು **2331 (10.84.31%)** ವ್ಯಕ್ತಿಗಳನ್ನು ಬೇಟಿ ಮಾಡಿದ್ದಾರೆ. ಉಳಿದ **19169** ವ್ಯಕ್ತಿಗಳನ್ನು ಸಾಯಂಕಾಲ ಒಳಗೆ ಬೇಟಿ ಮತ್ತು ಫೋನ್ ಮೂಲಕ ಸಂಪರ್ಕಿಸಿ ಗೃಹ ನಿರ್ಭಂದಿತ ವ್ಯಕ್ತಿಗಳ ದೈನಂದಿನ ವರದಿಯನ್ನು ಮನೆಯ ಸ್ಥಳದಿಂದ ಮಾಡಲು ಪ್ರೋತ್ಸಾಹಿಸಲಾಗುತ್ತಿದೆ. **1481** ಉಲ್ಲಂಘನೆ ಪ್ರಕರಣಗಳಿಗೆ ಕಟ್ಟುನಿಟ್ಟಾಗಿ ಕಡ್ಡಾಯವಾಗಿ ಗೃಹ ನಿರ್ಭಂದನದಲ್ಲಿರುವಂತೆ ಸೂಚಿಸಿದೆ ಎಂದು ತಿಳಿಸಿದರು.

ಈ ಕುರಿತು ಉಸ್ತುವಾರಿ ಕಾರ್ಯದರ್ಶಿಗಳು **19169** ವ್ಯಕ್ತಿಗಳನ್ನು ಕೂಡಲೇ ಸಂಪರ್ಕಿಸಿ ವರದಿ ಮಾಡಿ ಮತ್ತು **1481** ಉಲ್ಲಂಘನೆ ಪ್ರಕರಣಗಳಿಗೆ ಕಟ್ಟುನಿಟ್ಟಾಗಿ ಸೂಚಿಸುವಂತೆ ಜಿಲ್ಲಾ ಆರೋಗ್ಯ ಆಧಿಕಾರಿಗಳಿಗೆ ಸೂಚಿಸಿದರು.

Containment zone app: 17-08-2020 ರಂತೆ ಜಿಲ್ಲೆಯ **2457** ಗಳಲ್ಲಿ **1722** ಸಕ್ರೀಯ ಪ್ರತಿ ನಿರ್ಭಂದಿತ ವಲಯದ ವ್ಯಾಪ್ತಿಯ ಮನೆಗಳ ಪ್ರಾರಂಭಿಕ ಮಾಹಿತಿಯನ್ನು ಹಾಗೂ ದೈನಂದಿನ ಆರೋಗ್ಯ ತಪಾಸಣೆ ವಿವರಗಳನ್ನು Containment zone App ನಲ್ಲಿ ದಾಖಲಿಸಲು ಕ್ರಮವಹಿಸಲಾಗಿದೆ. ಅದರಲ್ಲಿ **735** ನಿರ್ಭಂದಿತ ವಲಯಗಳನ್ನು de notified ಮಾಡಲಾಗಿದೆ. ಸದರಿ App ನಲ್ಲಿ **18543** ಮನೆಗಳಲ್ಲಿ ಇದುವರೆಗೂ **10402 (56.09%)** ಮನೆಗಳ ಸಮೀಕ್ಷೆಯ ವಿವರಗಳನ್ನು ದಾಖಲಿಸಲಾಗಿದೆ ಮತ್ತು ಉಳಿದ ಮನೆಗಳ ಆರೋಗ್ಯ ತಪಾಸಣೆ ವಿವರಗಳನ್ನು ದಾಖಲಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

**ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆ (House hold risk and outreach survey) app:** ಜಿಲ್ಲೆಯಲ್ಲಿ ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆಯನ್ನು Health watch app ಮೂಲಕ ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು **677912** ಮನೆಗಳ ಸಮೀಕ್ಷೆಯ ಗುರಿಗೆ ಅನುಗುಣವಾಗಿ ಇದುವರೆಗೆ **636292 (ಶೇ. 93.86)** ಮನೆಗಳ ಸಮೀಕ್ಷೆಯನ್ನು Health watch app ಮೂಲಕ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಮತ್ತು ಆರೋಗ್ಯ ಅಪಾಯ ಮತ್ತು ಸಂಪೂರ್ಣ ಸಮೀಕ್ಷೆಯಲ್ಲಿ ಗುರುತಿಸಿದ ಅಪಾಯದ ಗುಂಪುಗಳಲ್ಲಿ ಆಶಾ ಕಾರ್ಯಕರ್ತರಿಂದ ಮನೆ-ಮನೆ ಬೇಟಿ ಮಾಡಿ ಆರೋಗ್ಯ ವಿಚಾರಿಸುವುದರ ಮೂಲಕ ಕೋವಿಡ್ ಲಕ್ಷಣವುಳ್ಳ ವ್ಯಕ್ತಿಗಳನ್ನು ಫೀವರ್ ಕ್ಲೀನಿಕ್ ನಲ್ಲಿ ಪರೀಕ್ಷೆಗೆ ಕಳಿಸಿ ಪರೀಕ್ಷೀಸಲಾಗುತ್ತಿದೆ ಎಂದು ತಿಳಿಸಿದರು.

ವೆಬ್ ಅಪ್ಲಿಕೇಷನ್ನಲ್ಲಿ ಇನ್ ಫ್ಲೂಎನ್ಸ್/ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡುವ ಖಾಸಗಿ ಸಂಸ್ಥೆಗಳು ಮತ್ತು ಮೆಡಿಕಲ್ ಶಾಪ್ ಗಳು ಜಿಲ್ಲೆಯಲ್ಲಿ ದಿನಾಂಕ **17/08/2020** ರಂದು **478** ಖಾಸಗಿ ಆಸ್ಪತ್ರೆಗಳಲ್ಲಿ **342 (71.54%)** ಮತ್ತು ಇಲ್ಲಿಯವರೆಗೆ **581** ಖಾಸಗಿ ಆಸ್ಪತ್ರೆ ಮತ್ತು ಲ್ಯಾಬ್ ಗಳಲ್ಲಿ **522 (89.84 %)** ಖಾಸಗಿ ಆಸ್ಪತ್ರೆಗಳು ವೆಬ್ ಅಪ್ಲಿಕೇಷನ್ ನಲ್ಲಿ ಇನ್ ಫ್ಲೂಎನ್ಜ್ / ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡಿವೆ.

ಜಿಲ್ಲೆಯಲ್ಲಿ ದಿನಾಂಕ **17/08/2020** ರಂದು **1075** ಖಾಸಗಿ ಮೆಡಿಕಲ್ ಗಳಲ್ಲಿ **739 (68.74%)** ಮತ್ತು ಇಲ್ಲಿಯವರೆಗೆ **1078** ಮೆಡಿಕಲ್ ಗಳಲ್ಲಿ **1015 (94.15%)** ಖಾಸಗಿ ಸಂಸ್ಥೆಗಳು ವೆಬ್ ಅಪ್ಲಿಕೇಷನ್ ನಲ್ಲಿ ಇನ್ ಫ್ಲೂಎನ್ಜ / ತೀವ್ರ ಉಸಿರಾಟದ ತೊಂದರೆ ಪ್ರಕರಣಗಳನ್ನು ವರದಿ ಮಾಡಿವೆ.

ಅಪರ ಜಿಲ್ಲಾಧಿಕಾರಿಗಳು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು

ಎಂ.ಎಸ್.ಶ್ರೀಕರ್

ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 01 | ಜಿಲ್ಲೆಯ ಹೆಸರು | ಉಡುಪಿ ಜಿಲ್ಲೆ |
| 02 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಎಂ.ಮಹೇಶ್ವರ್ ರಾವ್ |
| 03 | ಭೇಟಿಯಾದ/ಪ್ರವಾಸದ ದಿನಾಂಕ | 30ನೇ ಜುಲೈ, 2020 |
| 04 | ಮುಖ್ಯವಾಗಿ ಗಮನಿಸಿದ ಅಂಶಗಳು | ಉಡುಪಿ ಜಿಲ್ಲೆಯಲ್ಲಿನ ಅಭಿವೃದ್ಧಿ ಕಾರ್ಯಗಳ, ಮರಳು ಸಮಸ್ಯೆ ಹಾಗೂ ಕೋವಿಡ್-19ನ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸಿ ಸಭೆ ನಡೆಸಲಾಯಿತು. ಸದರಿ ವಿಷಯದ ಬಗ್ಗೆ ನಡೆದ ಸಭೆಯ ಸಭಾ ನಡವಳಿಯನ್ನು ಸಹ ಇದರೊಡನೆ ಲಗತ್ತಿಸಿದೆ. |

(ಎಂ.ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (MSME & Mines) ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:30.07.2020 ರಂದು ಜರುಗಿದ ಕೋವಿಡ್ 19 ನ ಇತ್ತೀಚಿನ ವಸ್ತುಸ್ಥಿತಿಯ ಬಗ್ಗೆ ಹಾಗೂ ಉಡುಪಿ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಡನೆ ನಡೆದ ಸಭೆಯ ನಡವಳಿ:**

**ಸಮಯ: ಅಪರಾಹ್ನ 2.00 ಗಂಟೆ** **ಸ್ಥಳ: ಡಾ. ವಿ.ಎಸ್ ಆಚಾರ್ಯ ಸಭಾಂಗಣ**

**ಉಪಸ್ಥಿತರು:**

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ **ಪ್ರಧಾನ** ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (MSME & Mines) ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀಮತಿ ಪ್ರೀತಿ ಗೆಹಲೋತ್ , ಭಾ.ಆ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
4) ಶ್ರೀ ವಿಷ್ಣುವರ್ಧನ್, ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ
5) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
6) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕೋವಿಡ್ -19 ಸ್ಥಿತಿಗತಿಗಳ ಬಗ್ಗೆ ವಿವರ ಮತ್ತು ಈ ಬಗ್ಗೆ ಕೈಗೊಂಡ ಕ್ರಮಗಳ ಮಾಹಿತಿ ನೀಡುವಂತೆ ಜಿಲ್ಲಾ ಕೋವಿಡ್ -19 ನೋಡಲ್ ಅಧಿಕಾರಿಯವರಿಗೆ ಸೂಚಿಸಿದರು. ಕೋವಿಡ್ -19 ನೋಡಲ್ ಅಧಿಕಾರಿಯವರು ಕೋವಿಡ್ -19 ವೈರಸ್ ನಿಯಂತ್ರಣದ ಬಗ್ಗೆ ಕೈಗೊಂಡ ಕ್ರಮಗಳ ಮತ್ತು ಈಗಿನ ಸ್ಥಿತಿಗತಿಗಳ ಬಗ್ಗೆ ಅಂಕಿ ಅಂಶಗಳೊಂದಿಗೆ ಕ್ವಾರೈಂಟೈನ್ ಮಾಡಿದ ಬಗ್ಗೆ ವಿವರ , SARI Cases ,ILI , Swab test ಇತ್ಯಾದಿಗಳ ಬಗ್ಗೆ ಮಾಹಿತಿ ನೀಡಿದರು.

- ಈ ಬಗ್ಗೆ ಈವರೆಗೆ ಒಟ್ಟು 3893 ಖಚಿತ ಪ್ರಕರಣಗಳು ವರದಿಯಾಗಿರುವುದಾಗಿ ಪ್ರಸ್ತುತ 1547 ಸಕ್ರಿಯ ಪ್ರಕರಣಗಳು ಇರುವುದಾಗಿ ಸರಾಸರಿ ಕಳೆದ 2 ವಾರಗಳಿಂದ ದಿನಕ್ಕೆ 147 ರಂತೆ ಪ್ರಕರಣಗಳು ದಾಖಲಾಗುತ್ತಿರುವುದಾಗಿ, ಈವರೆಗೆ ಜಿಲ್ಲೆಯಲ್ಲಿ ಕೊವಿಡ್ 19 ನಿಂದ ಒಟ್ಟು 25 ಜನ ಮರಣ ಹೊಂದಿರುವುದಾಗಿ, ಹಾಗೂ ಜಿಲ್ಲೆಯ ಮರಣ ಪ್ರಮಾಣವು 0.64% ಇರುವುದಾಗಿ ಜಿಲ್ಲಾ ಕೋವಿಡ್ ನೋಡಲ್ ಅಧಿಕಾರಿಯವರು ಸಭೆಗೆ ಮಾಹಿತಿ ನೀಡಿದರು.
- ದಿನಾಂಕ 20.07.2020 ರಿಂದ ದಿನಾಂಕ 26.07.2020 ರವರೆಗೆ ವಿವಿಧ ವರ್ಗಗಳಲ್ಲಿ ಜಿಲ್ಲೆಯಲ್ಲಿ ಕೋವಿಡ್ 19 ವರದಿಯಾಗಿರುವ ಬಗ್ಗೆ ಈ ಕೆಳಗಿನಂತೆ ಸಭೆಗೆ ಮಾಹಿತಿ ನೀಡಿದರು.

| Category | Positive | Total Tested | Positivity |
|---|---|---|---|
| Traveller | 21 | 605 | 3% |
| Primary Contacts | 269 | 774 | 35% |
| Health Professionals | 87 | 230 | 38% |
| SARI | 38 | 95 | 40% |
| ILI | 365 | 1490 | 24% |
| Other Sector & Community | 384 | 1080 | 36% |
| Total | 1164 | 4274 | 27% |

- ಜಿಲ್ಲೆಯ ಒಟ್ಟು 3893 ಕೋವಿಡ್-19 ಖಚಿತ ಪ್ರಕರಣಗಳಲ್ಲಿ 34% Symptomatic, 66% Asymptomatic ವರದಿಯಾಗಿರುವುದಾಗಿ, ಕೋವಿಡ್ ನೋಡಲ್ ಅಧಿಕಾರಿಯವರು ತಿಳಿಸಿದರು.

- ಜಿಲ್ಲೆಯಲ್ಲಿ ನಿನ್ನೆಯವರೆಗೆ ಒಟ್ಟು 1550 ಕೋವಿಡ್-19 active cases ಇದ್ದು ಅವರಲ್ಲಿ 813 ಜನ ಹಾಸ್ಪಿಟಲ್‌ಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದು, 737 ಜನ Home isolation ನಲ್ಲಿ ಇರುವುದಾಗಿ, ಜಿಲ್ಲೆಯ Recovery Rate 59.6% ಇರುವುದಾಗಿ ಸಭೆಗೆ ಮಾಹಿತಿ ನೀಡಿದರು.

- ಈವರೆಗೆ ಜಿಲ್ಲೆಯಲ್ಲಿ ಒಟ್ಟು 3893 ಪ್ರಕರಣಗಳಲ್ಲಿ 2454 ಪುರುಷರು ಹಾಗೂ 1439 ಮಹಿಳೆಯರಿಗೆ ಕೋವಿಡ್-19 ಖಚಿತವಾಗಿರುವುದಾಗಿ ಸಭೆಗೆ ಮಾಹಿತಿ ನೀಡಿದರು ಹಾಗೂ ತಾಲೂಕುವಾರು ಕೊವಿಡ್ 19 ಪ್ರಕರಣಗಳ ವರದಿಯನ್ನು ಈ ಕೆಳಕಂಡಂತೆ ಸಭೆಗೆ ನೀಡಿದರು.

| Taluk | Total Cases | % Taluk wise | Total Death |
|---|---|---|---|
| Udupi | 1443 | 37% | 9 |
| Kundapura | 1828 | 47% | 10 |
| Karkala | 610 | 16% | 6 |
| Out of District Admitted in Hospital for treatment | 12 | 0.3% | - |
| | 3893 | | 25 |

- ಜಿಲ್ಲೆಯಲ್ಲಿ ಕೇವಲ ಒಂದು ಮೆಡಿಕಲ್ ಕಾಲೇಜು ಇರುವುದಾಗಿ, ಜಿಲ್ಲೆಯ ಗಡಿಭಾಗದಲ್ಲಿರುವ ಶ್ರೀನಿವಾಸ ಮೆಡಿಕಲ್ ಕಾಲೇಜು ಉಡುಪಿ ಜಿಲ್ಲೆಯ ಕೋವಿಡ್ ಸಂತ್ರಸ್ತರಿಗೆ ದೊರೆತಲ್ಲಿ ಅನುಕೂಲವಾಗುವುದಾಗಿ ಕೋವಿಡ್ ನೋಡಲ್ ಅಧಿಕಾರಿಯವರು ತಿಳಿಸಿದರು.

- ಜಿಲ್ಲೆಯ ಸರಕಾರಿ ಆಸ್ಪತ್ರೆಯಲ್ಲಿ 18 ವೆಂಟಿಲೇಟರ್‌ಗಳು, ಟಿ.ಎಂ.ಎ ಪೈ ಆಸ್ಪತ್ರೆಯಲ್ಲಿ 14 ವೆಂಟಿಲೇಟರ್‌ಗಳು, ಕೆ.ಎಂ.ಸಿ ಆಸ್ಪತ್ರೆಯಲ್ಲಿ 65 ವೆಂಟಿಲೇಟರ್‌ಗಳು ಇರುವುದಾಗಿ ಸಭೆಗೆ ಮಾಹಿತಿ ನೀಡಿದರು.

- ಜಿಲ್ಲೆಯಲ್ಲಿ Lab Equipments ಗಳ ಸಾಕಷ್ಟು ಲಭ್ಯತೆ ಇಲ್ಲದಿರುವ ಬಗ್ಗೆ ಚರ್ಚಿಸಲಾಗಿ , ಕೊಟೇಶನ್ ಕರೆದು ಆದಷ್ಟು ಶೀಘ್ರವಾಗಿ Lab Equipments ಗಳನ್ನು ಖರೀದಿಸುವಂತೆ ಜಿಲ್ಲಾಧಿಕಾರಿಯವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಸೂಚಿಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ)**

- ಜಿಲ್ಲೆಯಲ್ಲಿ ಸರ್ವೇಕ್ಷಣೆ ನಡೆಸುವ ಸಿಬ್ಬಂದಿಗಳ 80% ನಷ್ಟು ಕೊರತೆ ಇರುವುದಾಗಿ, ಪ್ರಸಕ್ತ ಕೋವಿಡ್ 19 ರ ಕ್ಷಿಪ್ರ ಕಾರ್ಯಾಚರಣೆಗೆ ಹೊರಗುತ್ತಿಗೆ ಆಧಾರದಲ್ಲಿ 6 ತಿಂಗಳ ಅವಧಿಗೆ ಸಿಬ್ಬಂದಿಗಳನ್ನು ನೇಮಿಸುವಲ್ಲಿ ಅನುಮತಿ ದೊರೆತಲ್ಲಿ ಸಮರ್ಪಕವಾಗಿ ಕೊವಿಡ್ 19 ನ್ನು ಎದುರಿಸುವಲ್ಲಿ ಉಪಯೋಗವಾಗುವುದಾಗಿ ಜಿಲ್ಲಾಧಿಕಾರಿಯವರು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

- ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ Bed Management ಬಗ್ಗೆ chimsudupi.kar.nic.in ಎಂಬ web ಅಪ್ಲಿಕೇಶನ್ನು ಉಡುಪಿ ಜಿಲ್ಲೆಯಲ್ಲಿ ಅಭಿವೃದ್ಧಿ ಪಡಿಸಿರುವುದಾಗಿ , ಸದರಿ web ಅಪ್ಲಿಕೇಶನಲ್ಲಿ ಜಿಲ್ಲೆಯ ಪ್ರತಿ ಕೋವಿಡ್ ಆಸ್ಪತ್ರೆಯಲ್ಲಿ ಇರುವ ಬೆಡ್‌ಗಳ ಲಭ್ಯತೆ ಹಾಗೂ ಅವುಗಳಲ್ಲಿ ಖಾಲಿ ಇರುವ ಬೆಡ್‌ಗಳ ಮಾಹಿತಿ ಮತ್ತು ರೋಗಿಗಳ ದಾಖಲಾತಿ ಮತ್ತು ಬಿಡುಗಡೆಯ ವಿವರಗಳನ್ನು ನಿಖರವಾಗಿ ಪಡೆಯಬಹುದಾಗಿ, ಹಾಗೂ Ambulance tracking system ಗೂ ಒಂದು web ಅಪ್ಲಿಕೇಶನನ್ನು ಅಭಿವೃದ್ಧಿ ಪಡಿಸಿರುವುದಾಗಿ ಜಿಲ್ಲಾಧಿಕಾರಿಯವರು ಸಭೆಗೆ ಮಾಹಿತಿ ನೀಡಿದರು.

- ಕ್ವಾರಂಟೈನ್ watch app ಅಡಿಯಲ್ಲಿ ಕಟ್ಟುನಿಟ್ಟಾಗಿ ಕ್ವಾರಂಟೈನ್ ನಲ್ಲಿ ಇರುವವರ ಬಗ್ಗೆ ನಿಗಾ ವಹಿಸಲು ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**ಇತರೆ ವಿಷಯಗಳು :**

- ಜಿಲ್ಲೆಯಲ್ಲಿ ಅಕ್ರಮ ಮರಳುಗಾರಿಕೆ ಮತ್ತು ಮರಳು ಸಾಗಾಟ ತಡೆಯುವ ಕುರಿತಂತೆ ದೂರುಗಳು ಬರುತ್ತಿದ್ದು ಜಿಲ್ಲೆಯಲ್ಲಿ ಯಾವುದೇ ಅಕ್ರಮ ಮರಳುಗಾರಿಕೆ ನಡೆಯದಂತೆ ಎಚ್ಚರವಹಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಈ ಬಗ್ಗೆ ಹಿರಿಯ ಭೂ ವಿಜ್ಞಾನಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಡುಪಿ ಇವರು ಮಾತನಾಡಿ, ಧಕ್ಕೆ area violation ಬಗ್ಗೆ 3 ಕೇಸ್ ದಾಖಲಿಸಿರುವುದಾಗಿ, 2 ಲಾರಿ ಮೇಲೆ penalty ಹಾಕಿರುವುದಾಗಿ ತಿಳಿಸಿದರು. ಈ ಬಗ್ಗೆ ಜಿಲ್ಲಾಧಿಕಾರಿಯವರು ಮಾತನಾಡಿ penalty ಕಟ್ಟದಿದ್ದವರ ವಾಹನಗಳ ನವೀಕರಣವನ್ನು ಮಾಡಬಾರದಾಗಿ ಹಿರಿಯ ಭೂ ವಿಜ್ಞಾನಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರಿಗೆ ಸೂಚಿಸಿದರು. ಈ ಬಗ್ಗೆ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಏಕೀಕೃತ ಅಧಿಕಾರ ವ್ಯಾಪ್ತಿಯುಳ್ಳ ಒಂದು ತಂಡವನ್ನು ರಚಿಸಿ, ಜಿಲ್ಲಾಧಿಕಾರಿಯವರ ಟಾಸ್ಕ್ ಫೋರ್ಸ್ ಮುಖಾಂತರ monitor ಮಾಡಲು ಸೂಚಿಸಿದರು.
- ನಿಯಮಿತವಾಗಿ ತಪ್ಪದೇ ಪ್ರತಿ ತಿಂಗಳು Sand Committee ಸಭೆಯನ್ನು ನಡೆಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.
- ಪ್ರತಿ ದಿನ ತಪ್ಪದೇ ಹಾಗೂ ರಾತ್ರಿ ವೇಳೆಯೂ ತಪ್ಪದೇ ಅಕ್ರಮ ಮರಳುಗಾರಿಕೆ ಬಗ್ಗೆ ಪರಿಶೀಲನೆಯನ್ನು ನಡೆಸುವಂತೆ ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರಿಗೆ ಸೂಚಿಸಿದರು ಹಾಗೂ ಅವರಿಗೆ ಎಲ್ಲಾ ರೀತಿಯ ಸಹಕಾರ ನೀಡಲು ಉಸ್ತುವಾರಿ ಕಾರ್ಯದರ್ಶಿಯವರು ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ ಇವರಿಗೆ ಸೂಚಿಸಿದರು.

.ಕೊನೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ.ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್‌ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ:07-08-2020ರಂದು ಡಾ:ತ್ರಿಲೋಕ್ ಚಂದ್ರ ಭಾ.ಆ.ಸೇ. ಮಾನ್ಯ ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಕರೋನಾ ನಿಯಂತ್ರಣ ಸಂಬಂಧ ನಡೆದ ಸಭೆಯ ನಡವಳಿ**

*****

ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯರವರು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಾರ್ಯಕಲಾಪವನ್ನು ನಡೆಸಿಕೊಡಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಜಿಲ್ಲೆಯಲ್ಲಿ ಕೋವಿಡ್-19 ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಿಯಂತ್ರಣ ಸಂಬಂಧ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಮಾಹಿತಿ ನೀಡಲು ಡಿ.ಹೆಚ್.ಓ.ರವರಿಗೆ ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಜಿಲ್ಲೆಯಲ್ಲಿ 31534 ಆರ್.ಟಿ.ಪಿ.ಸಿ.ಆರ್. ಸ್ವಾಬ್ ಸಂಗ್ರಹಿಸಿದ್ದು, ರ್ಯಾಪಿಡ್-7909, ಒಟ್ಟು 39443 ಸ್ವಾಬ್ ಸಂಗ್ರಹಿಸಲಾಗಿದ್ದು, ಅದರಲ್ಲಿ 2292 ಪಾಸಿಟಿವ್ ಬಂದಿದ್ದು, ಸ್ಯಾಂಪಲ್ ಪಾಸಿಟಿವ್ ರೇಟ್ ಶೇ.5.81ರಷ್ಟಿದೆ. ಅದರಲ್ಲಿ ಮಂಡ್ಯ-ಶೇ.9.11, ಕೆ.ಆರ್.ಪೇಟೆ- ಶೇ.7.98 ಹೆಚ್ಚಿದೆ ಎಂದು ಸಭೆಗೆ ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, ಮಂಡ್ಯ ನಗರದಲ್ಲಿ ಪ್ರತಿ ದಿನ ಜನಸಾಂದ್ರತೆ ಹೆಚ್ಚಿರುವ 4 ಕಡೆಗಳಲ್ಲಿ ಶಾಲೆ ಹಾಗೂ ಹಾಸ್ಟೆಲ್‌ಗಳಲ್ಲಿ ಕೋವಿಡ್ ಟೆಸ್ಟ್ ಮಾಡಲಾಗುತ್ತಿದೆ, ಅಲ್ಲದೇ ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲೂ ಕೋವಿಡ್ ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡಿ, ಮೊಬೈಲ್ ಬಸ್ ಒಂದು ತಾಲ್ಲೂಕಿಗೆ ಒಂದರಲ್ಲಿ ಟೆಸ್ಟ್ ಮಾಡಲಾಗುತ್ತಿದ್ದು, ಪ್ರತಿ ದಿನ ಸುಮಾರು 30-60ರವರೆಗೆ ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದರು. ಲ್ಯಾಬ್ ಅಧಿಕಾರಿಗಳು ಮಾತನಾಡಿ, ರ್ಯಾಪಿಡ್ ಆ್ಯಂಟಿಜೆನ್ ಟೆಸ್ಟ್ ಪ್ರತಿ ದಿನ 350 ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲೆಯ ಸ್ಯಾಂಪಲ್ ಪಾಸಿಟಿವ್ ರೇಟ್ ಶೇ.5 ರಷ್ಟು ಇರಬೇಕು. ಎಲ್ಲಿ ಜಾಸ್ತಿ ಇದೆ, ಸೊಂಕಿತರ ಮತ್ತು ಮೃತಪಟ್ಟವರ spatial mapping ಮಾಡಿ, ಅಲ್ಲಿ ಜಾಸ್ತಿ testing ಮಾಡಬೇಕು, ಜೊತೆಗೆ, ಟೆಸ್ಟ್ ಮಾಡಿಸಿಕೊಳ್ಳುವುದಕ್ಕೆ ಜನರು ಮುಂದೆ ಬರುವುದಿಲ್ಲ, ಮನೆ ಮನೆ ಸರ್ವೆ ಮಾಡಿ ಸಿಂಪ್ಟಮ್ಸ್ ಇರುವವರಿಗೆ ಮಾತ್ರವಲ್ಲದೆ uncontrolled diabetes, HTN cases ಅವರಿಗೂ testing ಗೆ ಒಳಪಡಿಸಬೇಕೆಂದು ಸೂಚಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಕೋವಿಡ್ ದೃಢಪಟ್ಟ ಪ್ರಕರಣಗಳು-2292, ಅದರಲ್ಲಿ ಡಿಸ್‌ಛಾರ್ಜ್ ಆದವರು-1248, ಸಕ್ರಿಯ

ಪ್ರಕರಣಗಳು–1023, ಮೃತಪಟ್ಟವರು–21. ಮೃತಪಟ್ಟವರಲ್ಲಿ 19 SARI ಪ್ರಕರಣವಾಗಿರುವುದಾಗಿ ತಿಳಿಸಿದರು. ಮುಂದುವರೆದು ಕೆ.ಪಿ.ಎಂ.ಇ. ರಿಪೋರ್ಟ್‌ನಲ್ಲಿ ಶೇ.81ರಷ್ಟಿದೆ. ಔಷಧಿಗಳ ದಾಸ್ತಾನಿನ ವಿವರವನ್ನು ತಿಳಿಸಿ, ಕೋವಿಡ್ ಕೇರ್ ಸೆಂಟರ್ ನೇರವಾಗಿ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ತಾಲ್ಲೂಕು ಆಸ್ಪತ್ರೆಗಳಲ್ಲಿ ಕೋವಿಡ್ ಸಂಬಂಧ ಯಾವ ರೀತಿ ಕ್ರಮ ವಹಿಸಲಾಗುತ್ತಿದೆ ಎಂದು ಕೇಳಲಾಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮಾತನಾಡಿ, ತಾಲ್ಲೂಕು ಆಸ್ಪತ್ರೆಗಳಲ್ಲಿ ಕೋವಿಡ್‌ಗೆ 50 ಹಾಸಿಗೆಗಳ ವ್ಯವಸ್ಥೆಯನ್ನು ಮಾಡಲಾಗಿದ್ದು, ಎಕ್ಸ್‌ಪರ್ಟ್ ಕಮಿಟಿ ರಚಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಆರ್.ಸಿ.ಹೆಚ್.ಓ.ರವರು ಎಲ್.ಇ.ಡಿ.ಲೈಟ್ ಇದೆ, ಸಿ.ಸಿ.ಟಿ.ವಿ. ಇದೆ, ಆದರೆ ಡಿಸ್‌ಪ್ಲೇ ಆಗುತ್ತಿಲ್ಲವೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಕಳೆದ 7 ದಿನದಲ್ಲಿ ಎಷ್ಟು ಸಾವು ಸಂಭವಿಸಿದೆ ಎಂದು ಕೇಳಲಾಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರು 17 ಸಾವು ಸಂಭವಿಸಿದ್ದು, ಅದರಲ್ಲಿ 4 ಜನರು 60 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದು, ವಿವಿಧ ಖಾಯಿಲೆಯಿಂದ ಬಳಲುತ್ತಿದ್ದರೆಂದು ಮಾಹಿತಿ ನೀಡಿದರು.

ಮಂಡ್ಯ ತಾಲ್ಲೂಕು ವೈದ್ಯಾಧಿಕಾರಿ ಮಾತನಾಡುತ್ತಾ, ಮಂಡ್ಯ ನಗರದ 4 ಕಡೆ ಅಂದರೆ ಪೇಟೆ ಬೀದಿ, ಗುತ್ತಲು, ಬಿ.ಸಿ.ಎಂ.ಹಾಸ್ಟೆಲ್, ಹಾಲಹಳ್ಳಿಯಲ್ಲಿ ಈ ದಿನದಿಂದ ಕೋವಿಡ್ ಟೆಸ್ಟ್ ಮಾಡುವುದಕ್ಕೆ ಚಾಲನೆ ನೀಡಲಾಗಿದ್ದು, ಗುತ್ತಲು ಸ್ಲಂ ಏರಿಯಾದಲ್ಲಿ ಸೋಂಕಿತ ಪ್ರಕರಣಗಳು ಜಾಸ್ತಿ ಬರುತ್ತಿದೆ, ನಿನ್ನೆ 9 ಪ್ರಕರಣಗಳು ದೃಢಪಟ್ಟಿರುತ್ತದೆ ಎಂದು ತಿಳಿಸಿದಾಗ, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸೋಂಕು ದೃಢಪಟ್ಟ ಪ್ರಕರಣಗಳಲ್ಲಿ ಎಷ್ಟು ಪ್ರೈಮರಿ ಸಂಪರ್ಕಿತರನ್ನು ಗುರುತಿಸಲಾಗಿದೆ? ಎಂದು ಕೇಳಿದಾಗ, ಮಂಡ್ಯ ಟಿ.ಹೆಚ್.ಓ.ರವರು ಮಾತನಾಡಿ, ಸೋಂಕು ದೃಢಪಟ್ಟ 7ನೇ ದಿನ 68 ಪ್ರೈಮರಿ ಸಂಪರ್ಕಿತರನ್ನು ಗುರುತಿಸಿದ್ದು, ನೆಗೆಟಿವ್ ಬಂದಿರುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿರವರು ಮಾತನಾಡಿ, ಸೋಂಕು ದೃಢಪಟ್ಟ ಪ್ರಕರಣಗಳಲ್ಲಿ ಸಿಂಪ್ಟಮ್ಸ್ ಇದ್ದರೆ 5ನೇ ದಿನ ಟೆಸ್ಟ್ ಮಾಡಬೇಕು, ಸಿಂಪ್ಟಮ್ಸ್ ಇಲ್ಲದಿದ್ದರೆ 7ನೇ ದಿನ ಟೆಸ್ಟ್ ಮಾಡಿ ಪಾಸಿಟಿವ್ ಬಂದ ಪ್ರೈಮರಿ, ಸೆಕೆಂಡರಿ ಸಂಪರ್ಕಿತರ ಮಾಹಿತಿಯನ್ನು ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕ್ವಾರಂಟೈನ್ ವಾಚ್ ಆ್ಯಪ್‌ನ ಪ್ರಗತಿ ಮಾಹಿತಿ ಕೇಳಲಾಗಿ, ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ., ಮಂಡ್ಯರವರು ಮಾತನಾಡುತ್ತಾ, ಮಂಡ್ಯದಲ್ಲಿ ಕ್ವಾರಂಟೈನ್‌ನಲ್ಲಿ 385 ಜನ ಇದ್ದು, 70 ಜನರು ಪುನರಾವರ್ತನೆಯಾಗಿರುತ್ತಾರೆ, ಕ್ವಾರಂಟೈನ್ ಉಲ್ಲಂಘಿಸಿದ 35 ಜನರ ಮೇಲೆ ಎಫ್.ಐ.ಆರ್. ದಾಖಲಿಸಲಾಗಿರುತ್ತಾರೆ, ಒಂದು ಸಾರಿ ಎಚ್ಚರಿಕೆ ನೀಡಿದರೆ ಜನರು ಎಚ್ಚೆತ್ತುಕೊಳ್ಳುತ್ತಿದ್ದಾರೆಂದು ತಿಳಿಸಿದರು. ಮದ್ದೂರು, ಟಿ.ಹೆಚ್.ಓ.ರವರು ಮಾತನಾಡಿ, ಕಳೆದ ಮೂರು ದಿನದಿಂದ ಸಾಯಿ ಗಾರ್ಮೆಂಟ್ಸ್‌ನಲ್ಲಿ ಟೆಸ್ಟ್ ಮಾಡಿದಾಗ ಸೋಂಕಿತ ಪ್ರಕರಣಗಳು ಜಾಸ್ತಿ ಬರುತ್ತಿದೆ.

ಅದರಲ್ಲಿ ಖಾಸಗಿ ನರ್ಸಿಂಗ್ ಹೋಂಗಳಲ್ಲಿ 101 ಐ.ಎಲ್.ಐ. ಮತ್ತು ಸಾರಿ ಪ್ರಕರಣಗಳನ್ನು ಟೆಸ್ಟ್ ಮಾಡಿದಾಗ, 11 ಪ್ರಕರಣಗಳು ದೃಢಪಟ್ಟಿದ್ದು, ಇದರಲ್ಲಿ 7 ಪ್ರಕರಣಗಳು ಸಕ್ಕರೆ ಖಾಯಿಲೆ, ಕ್ಯಾನ್ಸರ್ ಮತ್ತು ಕೋಮಾ ಸ್ಟೇಜ್‌ನಲ್ಲಿರುವವರು ಇರುತ್ತಾರೆಂದು ತಿಳಿಸಿದಾಗ, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಪಾಸಿಟಿವ್ ರೇಟ್ ಶೇ.10ರಷ್ಟು ಇದೆ ಅದನ್ನು ಶೇ.5ಕ್ಕೆ ಇಳಿಸಬೇಕೆಂದರೆ ಸ್ವಾಬ್ ಟೆಸ್ಟ್ ಜಾಸ್ತಿ ಮಾಡಬೇಕೆಂದು ಟಿ.ಹೆಚ್.ಓ.ಗಳಿಗೆ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿರವರು ಎಲ್ಲಾ ಪಿ.ಹೆಚ್.ಸಿ.ಗಳಲ್ಲಿ ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದಾಗ, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಹೈರಿಸ್ಕ್ ಪ್ರಕರಣಗಳು, ಐ.ಎಲ್.ಐ. ಹಾಗೂ ಸಾರಿ ಪ್ರಕರಣಗಳನ್ನು ಸಹ ಪಿ.ಹೆಚ್.ಸಿ.ಯಲ್ಲಿ ಟೆಸ್ಟ್ ಮಾಡಬೇಕೆಂದು ಟಿ.ಹೆಚ್.ಓ.ಗಳಿಗೆ ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, ಪ್ರೈಮರಿ, ಸೆಕೆಂಡರಿ ಸಂಪರ್ಕಿತರು, ಐ.ಎಲ್.ಐ. ಪ್ರಕರಣಗಳ ಜೊತೆಗೆ, ಸಕ್ಕರೆ ಖಾಯಿಲೆ ಇರುವವರಿಗೂ ಟೆಸ್ಟ್ ಮಾಡಬೇಕೆಂದು ಟಿ.ಹೆಚ್.ಓ.ಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಸಕ್ಕರೆ ಖಾಯಿಲೆ ಇರುವವರಿಗೂ ಟೆಸ್ಟ್ ಮಾಡಲು ಟಿ.ಹೆಚ್.ಓ.ಗಳಿಗೆ ತಿಳಿಸಲಾಗಿದ್ದು, ವಾಟ್ಸಾಪ್ ಗ್ರೂಪ್‌ನಲ್ಲಿ ಎಷ್ಟು ಜನರಿಗೆ ಟೆಸ್ಟ್ ಮಾಡಲಾಗಿದೆ ಎಂಬ ಮಾಹಿತಿ ಇರುವುದಾಗಿ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಪಿ.ಹೆಚ್.ಸಿ./ಸಿ.ಹೆಚ್.ಸಿ.ವಾರು ಯಾವ ಖಾಯಿಲೆ ಇರುವ ಎಷ್ಟು ಜನರಿಗೆ ಟೆಸ್ಟ್ ಮಾಡಲಾಗಿದೆ ಎಂದು ಮಾಹಿತಿಯನ್ನು ಇಡಬೇಕೆಂದು ಟಿ.ಹೆಚ್.ಓ.ಗಳಿಗೆ ತಿಳಿಸಿದರು. ಹಾಗೆಯೇ ಸರ್ವೇಲೆನ್ಸ್ ಅಧಿಕಾರಿಗಳಿಂದ ಡೇಟಾವನ್ನು ಪಡೆದು ಅದರ ಬಗ್ಗೆ ತಹಶೀಲ್ದಾರ್‌ಗಳು ಪರಿಶೀಲಿಸಬೇಕೆಂದು ಸಹ ತಿಳಿಸಿದರು.

ಮಳವಳ್ಳಿ ಟಿ.ಹೆಚ್.ಓ.ರವರು ಮಾತನಾಡಿ, ತಾಲ್ಲೂಕಿನಲ್ಲಿ 826 ಜನರನ್ನು ಟೆಸ್ಟ್ ಮಾಡಿದಾಗ, 19 ಜನರಿಗೆ ಸೋಂಕು ದೃಢಪಟ್ಟಿದೆ, ಈ ಬಗ್ಗೆ ಸಭೆ ಮಾಡಿ, ಮನೆ ಮನೆ ಸರ್ವೆ ಮಾಡಿ ರ್‍ಯಾಂಡಮ್ ಆಗಿ ಚೆಕ್ ಮಾಡಲು ಕ್ರಮ ವಹಿಸಲಾಗಿದೆ. ಹಲಗೂರಿನಲ್ಲಿ ಒಂದೇ ಕುಟುಂಬದ 7 ಜನರಿಗೆ ಸೋಂಕು ದೃಢಪಟ್ಟಿದ್ದು ಅವರನ್ನು ಮಳವಳ್ಳಿ ತಾಲ್ಲೂಕು ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ, ಕಳೆದ ಮೂರು ದಿನದಲ್ಲಿ 39 ಸೋಂಕು ದೃಢಪಟ್ಟಿರುತ್ತದೆ, ಹೈರಿಸ್ಕ್ ಇರುವ ಕಡೆ ಎಲ್ಲರಿಗೂ ಟೆಸ್ಟ್ ಮಾಡಲು ಉಪ ವಿಭಾಗಾಧಿಕಾರಿಗಳು ತಿಳಿಸಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಯವರು ಮಾತನಾಡಿ, ಸಕ್ಕರೆ ಖಾಯಿಲೆ ನಿಯಂತ್ರಣದಲ್ಲಿಲ್ಲದೇ ಇರುವವರು, ಗರ್ಭಿಣಿಯರು, ಹೈರಿಸ್ಕ್ ಇರುವವರಿಗೆ ಟೆಸ್ಟ್ ಮಾಡುವಂತೆ ಟಿ.ಹೆಚ್.ಓ.ಗಳಿಗೆ ತಿಳಿಸಿದರು. ಟಿ.ಹೆಚ್.ಓ.ರವರು ಮಾತನಾಡಿ, ಎಲ್ಲಾ ಪಿ.ಹೆಚ್.ಸಿ./ಸಿ.ಹೆಚ್.ಸಿ.ಗಳಿಗೆ ಟೆಸ್ಟಿಂಗ್ ಕಿಟ್‌ಗಳನ್ನು ನೀಡಿ, ವೈದ್ಯರು, ನರ್ಸ್, ಲ್ಯಾಬ್ ಟೆಕ್ನಿಶಿಯನ್‌ಗಳಿಗೆ ತರಬೇತಿ ನೀಡಲಾಗಿದ್ದು, ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, ಪ್ರತಿ ತಾಲ್ಲೂಕಿಗೆ ಒಂದು ಆಂಬ್ಯೂಲೆನ್ಸ್‌ನಲ್ಲಿ ಮನೆ ಮನೆಗೆ ಭೇಟಿ ನೀಡಿ ಹೈಪರ್‌ಟೆನ್ಷನ್, ಪಾರ್ಶ್ವವಾಯು, ಗರ್ಭಿಣಿಯರ ಪಟ್ಟಿಯನ್ನು ತೆಗೆದುಕೊಂಡು ಟೆಸ್ಟ್ ಮಾಡಬೇಕೆಂದು ಟಿ.ಹೆಚ್.ಓ.ಗಳಿಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಎಲ್ಲಾ ಪಿ.ಹೆಚ್.ಸಿ. ಹಾಗೂ ಸಿ.ಹೆಚ್.ಸಿ.ಗಳ ಡೇಟಾವನ್ನು ಟಿ.ಹೆಚ್.ಓ.ಗಳು ಇಟ್ಟುಕೊಳ್ಳಬೇಕು, ಮೊಬೈಲ್ ಆ್ಯಪ್‌ನಲ್ಲಿ ಟೆಸ್ಟ್ ರಿಸಲ್ಟ್ ಅಪ್‌ಲೋಡ್ ಮಾಡಲು ಅವಕಾಶವಿದ್ದಲ್ಲಿ ಕೂಡಲೇ ಮಾಹಿತಿಯನ್ನು ಎಂಟ್ರಿ ಮಾಡುವಂತೆ ಟಿ.ಹೆಚ್.ಓ.ಗಳಿಗೆ ತಿಳಿಸಿದರು.

ಪಾಂಡವಪುರ ಟಿ.ಹೆಚ್.ಓ.ರವರು ಮಾತನಾಡಿ, ಕಳೆದ ಮೂರು ದಿನದಲ್ಲಿ ದಿ:05-08-2020 ರಂದು 135, ದಿ:06-08-2020ರಂದು 127, ದಿ:07-08-2020ರಂದು 77 ಟೆಸ್ಟ್ ಮಾಡಿದ್ದು, ಅದರಲ್ಲಿ 18 ಪಾಸಿಟಿವ್ ಬಂದಿದ್ದು, ಪಾಸಿಟಿವ್ ರೇಟ್ ಶೇ.7.3ರಷ್ಟಿದೆ. ಸಿ.ಹೆಚ್.ಸಿ.ಯಲ್ಲೂ ಟೆಸ್ಟ್ ಮಾಡುತ್ತಿದ್ದು, ಸೋಂಕು ದೃಢಪಟ್ಟ ರೋಗಿಯ 15-20 ಪ್ರೈಮರಿ ಸಂಪರ್ಕಿತರನ್ನು ರೆಗ್ಯೂಲರ್ ಆಗಿ ಟೆಸ್ಟ್ ಮಾಡಿಸಲಾಗುತ್ತಿದೆ. ಜ್ವರ, ಐ.ಎಲ್.ಐ./ಸಾರಿ, ಅಧಿಕ ರಕ್ತದೊತ್ತಡ, ಸಕ್ಕರೆ ಖಾಯಿಲೆ ಇರುವವರನ್ನು ಸಹ ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ನಿಯಂತ್ರಣದಲ್ಲಿಲ್ಲದವರು (Uncontrolled) ಎಷ್ಟು ಇದ್ದಾರೆಂದು? ಸರ್ವೆಲೆನ್ಸ್ ಅಧಿಕಾರಿಗಳಿಂದ ಮಾಹಿತಿ ಪಡೆದು ಅದನ್ನು ನಿಯಂತ್ರಿಸಬೇಕು. ಇದರಿಂದ ಸೋಂಕಿತ ಪ್ರಕರಣಗಳು ಕಡಿಮೆ ಆಗುತ್ತದೆಂದು ಟಿ.ಹೆಚ್.ಓ.ಗಳಿಗೆ ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲೆಯಲ್ಲಿ ಐದು ಸಾವಿರ ಸಕ್ಕರೆ ಖಾಯಿಲೆ, ರಕ್ತದೊತ್ತಡ ಇರುವ ರೋಗಿಗಳಿದ್ದು, ಯಾರಿಗೆ ರೋಗ ನಿಯಂತ್ರಣದಲ್ಲಿಲ್ಲ ಅವರನ್ನು ಪಿ.ಹೆಚ್.ಸಿ.ಗೆ Refer ಮಾಡಿದ್ದಾರೆ. ಮನೆಯಲ್ಲಿ ಹಾಸಿಗೆ ಹಿಡಿದಿರುವ ರೋಗಿಗಳನ್ನು ಮನೆಗೆ ಹೋಗಿ ಟೆಸ್ಟ್ ಮಾಡಬೇಕು, ಮೊದಲು ಪಾಸಿಟಿವ್ ರೇಟ್ ಶೇ.4.5 ಇತ್ತು, ಈಗ ಜಾಸ್ತಿ ಆಗಿದೆ. ಆದ್ದರಿಂದ ಪ್ರೈಮರಿ, ಸೆಕೆಂಡರಿ, ಗರ್ಭಿಣಿಯರು ಮತ್ತು ಖಾಯಿಲೆ ನಿಯಂತ್ರಣದಲ್ಲಿ ಇಲ್ಲದೆ ಇರುವವರನ್ನು ಟೆಸ್ಟ್ ಜಾಸ್ತಿ ಮಾಡಬೇಕೆಂದು ಹಾಗೂ ಸರ್ವೆಲೆನ್ಸ್ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡು ಟೆಸ್ಟ್ ಮಾಡುವಂತೆ ಟಿ.ಹೆಚ್.ಓ.ಗಳಿಗೆ ತಿಳಿಸಿದರು.

ಶ್ರೀರಂಗಪಟ್ಟಣ, ಟಿ.ಹೆಚ್.ಓ.ರವರು ಮಾತನಾಡಿ, ತಾಲ್ಲೂಕಿನಲ್ಲಿ 304 ಸೋಂಕು ದೃಢಪಟ್ಟಿದ್ದು, ಅದರಲ್ಲಿ ಐ.ಎಲ್.ಐ.-67, ಪ್ರೈಮರಿ ಸಂಪರ್ಕಿತರು 58 ಇದ್ದಾರೆ, ಜೆ.ಕೆ.ಟೈಯರ್ ಕಂಪೆನಿಯಲ್ಲಿ ಕೆಲಸ ಮಾಡುವ 38 ಜನರಿಗೆ ಸೋಂಕು ದೃಢಪಟ್ಟಿದೆ. ಮುಂಬೈಯಿಂದ ಬಂದ 7 ಜನರಿಗೆ ಸೋಂಕು ದೃಢಪಟ್ಟಿದೆ. ಇದುವರೆಗೂ 104 ಪಾಸಿಟಿವ್ ಪ್ರಕರಣಗಳಲ್ಲಿ 1152 ಜನರಿಗೆ ಟೆಸ್ಟ್ ಮಾಡಲಾಗಿದ್ದು, ಪಾಸಿಟಿವ್ ರೇಟ್ ಶೇ.1.9ರಷ್ಟಿದೆ ಎಂದು ತಿಳಿಸಿದರು.

ಕೆ.ಆರ್.ಪೇಟೆ ಟಿ.ಹೆಚ್.ಓ.ರವರು ಮಾತನಾಡಿ, ಹೈಪರ್ ಟೆನ್ಷನ್ ಇರುವ 173 ಜನರನ್ನು ರ್‍ಯಾಪಿಡ್ ಟೆಸ್ಟ್ ಮಾಡಲಾಗಿದ್ದು, ಈ ದಿನ 7 ಪಾಸಿಟಿವ್ ಬಂದಿದೆ, ಒಬ್ಬರು 66ವರ್ಷ ವಯಸ್ಸಿನವರು ಮೃತಪಟ್ಟಿರುತ್ತಾರೆ. ತಾಲ್ಲೂಕು ಆಸ್ಪತ್ರೆಯಲ್ಲಿ ಸ್ವ್ಯಾಬ್ ಸಂಗ್ರಹಿಸಲಾಗುತ್ತಿದೆ, ತಾಲ್ಲೂಕಿನಲ್ಲಿರುವ ಐ.ಸಿ.ಎಲ್. ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡಲು ಹೊರಗಡೆಯಿಂದ ಕಾರ್ಮಿಕರು ಬಂದಿದ್ದು, ಅವರಿಗೆ ಟೆಸ್ಟ್ ಮಾಡಲು ಯೋಜನೆ ರೂಪಿಸಲಾಗಿದೆ, ಅವರು ಹಳ್ಳಿಗಳಿಗೆ ಹೋಗಿದ್ದಾರೆ. ಆದ್ದರಿಂದ ಪಿ.ಹೆಚ್.ಸಿ.ಯಲ್ಲಿ ಎಲ್ಲರಿಗೂ ಟೆಸ್ಟ್ ಮಾಡಲು ತಿಳಿಸಲಾಗಿದೆ. ಸರಬರಾಜಾಗಿರುವ 30 ಕಿಟ್ ಬಿಟ್ಟು ಎಲ್ಲಾ ಕಿಟ್‌ಗಳನ್ನು ಟೆಸ್ಟ್‌ಗೆ ಬಳಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, ಟೆಸ್ಟ್‌ಗೆ ಕಿಟ್‌ಗಳನ್ನು ಕಾಯಬೇಡಿ, ಕಳೆದ ಮೂರು ದಿನದಿಂದ ಪಾಸಿಟಿವ್ ರೇಟ್ ಜಾಸ್ತಿಯಾಗುತ್ತಿದೆ, ಮೊದಲು ಆರ್.ಟಿ.ಪಿ.ಸಿ.ಆರ್. ಟೆಸ್ಟ್ ಮಾಡಿ, ಪ್ರೈಮರಿ, ಸೆಕೆಂಡರಿ, ಖಾಯಿಲೆ ನಿಯಂತ್ರಣದಲ್ಲಿ ಇಲ್ಲದೆ ಇರುವವರು, ಸಕ್ಕರೆ ಖಾಯಿಲೆ ಇರುವವರು, ಹೈಪರ್ ಟೆನ್ಷನ್ ಇರುವ ಎಲ್ಲರಿಗೂ ಟೆಸ್ಟ್ ಮಾಡಬೇಕೆಂದು ಟಿ.ಹೆಚ್.ಓ.ಗಳಿಗೆ ತಿಳಿಸಿದರು.

ನಾಗಮಂಗಲ ಟಿ.ಹೆಚ್.ಓ.ರವರು ಮಾತನಾಡಿ, ತಾಲ್ಲೂಕಿನಲ್ಲಿ ಪಾಸಿಟಿವ್ ರೇಟ್ ಶೇ.6.8ರಷ್ಟಿದೆ, ಆರ್.ಟಿ.ಪಿ.ಸಿ.ಆರ್. ಟೆಸ್ಟ್ 42 ಜನರಿಗೆ ಮಾಡಿದ್ದು, ಅದರಲ್ಲಿ ಎರಡು ಕುಟುಂಬದ 18 ಜನರಿಗೆ ಸೋಂಕು ದೃಢಪಟ್ಟಿದೆ, ಕಳೆದ ಮೂರು ದಿನದಲ್ಲಿ ಐ.ಎಲ್.ಐ., ಹೈಪರ್ ಟೆನ್ಷನ್, ಸಿಂಪ್ಟಮ್ಯಾಟಿಕ್ ಇರುವವರಿಗೆ ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಟಿ.ಹೆಚ್.ಓ.ರವರು ಸರ್ವೇಲೆನ್ಸ್ ಅಧಿಕಾರಿಗಳಿಂದ ಹಾಗೂ ಪಿ.ಹೆಚ್.ಸಿ.ಯಿಂದ ಮಾಹಿತಿಯನ್ನು ತೆಗೆದುಕೊಂಡು ಹೈಪರ್ ಟೆನ್ಷನ್, ಮಧುಮೇಹ ಇನ್ನಿತರೆ ಹೈರಿಸ್ಕ್ ಖಾಯಿಲೆ ಇರುವವರಿಗೂ ಮನೆಗೆ ಹೋಗಿ ಟೆಸ್ಟ್ ಮಾಡಬೇಕೆಂದು ತಿಳಿಸಿದಾಗ, ಟಿ.ಹೆಚ್.ಓ.ರವರು ಮಾತನಾಡಿ, ತಾಲ್ಲೂಕಿನಲ್ಲಿ ಎರಡು ಮೊಬೈಲ್ ಟೀಂ ಇದ್ದು, ಅದರಲ್ಲಿ ಒಂದರಲ್ಲಿ ಟೆಸ್ಟ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಕ್ವಾರಂಟೈನ್ ಉಲ್ಲಂಘನೆ ಆಗಿರುವುದಕ್ಕೆ ಎಫ್.ಐ.ಆರ್. ಇನ್ನು ಹೆಚ್ಚು ಮಾಡಬೇಕು, ಏಮ್ಸ್‌ರವರು ಆರ್.ಟಿ.ಪಿ.ಸಿ.ಆರ್. ಟೆಸ್ಟ್‌ನ್ನು ಹೆಚ್ಚು ಮಾಡಬೇಕೆಂದು ತಿಳಿಸಿದರು.

ನಾಗಮಂಗಲ, ಏಮ್ಸ್ ಅಧಿಕಾರಿಯವರು ಮಾತನಾಡಿ, ಪ್ರತಿದಿನ 50 ಟೆಸ್ಟ್ ಮಾಡಲಾಗುತ್ತಿದೆ, ಮೂರು ವೆಂಟಿಲೇಟರ್ ಇದೆ, 6–ಹೆಚ್.ಎಫ್.ಎನ್.ಸಿ. ಇದೆ, ಮಿಮ್ಸ್‌ನಲ್ಲಿ 5 ಹೆಚ್.ಎಫ್.ಎನ್.ಸಿ. ಇದೆ ಎಂದು ತಿಳಿಸಿದರು.

ಮಂಡ್ಯ ಲ್ಯಾಬ್ ಅಧಿಕಾರಿಯವರು ಮಾತನಾಡಿ, ಟೆಸ್ಟ್ ಗುರಿ 200 ಇದ್ದು, 500 ಟೆಸ್ಟ್ ಮಾಡಲಾಗುತ್ತಿದೆ, ಯಾವುದೇ ಸಮಸ್ಯೆಯಿಲ್ಲವೆಂದು ಹಾಗೂ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಕೆಲಸ ಮಾಡುವವರು 8 ಗಂಟೆ ಕೆಲಸ ಮಾಡಿದ ಮೇಲೆ ಮನೆಯಲ್ಲೇ ಇರಿ ಹೊರಗಡೆ ಓಡಾಡಬಾರದೆಂದು ಅವರಿಗೆ ತಿಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, C.T. Value ಬಗ್ಗೆ ಕೇಳಿದಾಗ, ಲ್ಯಾಬ್ ಅಧಿಕಾರಿಯವರು, ಪರಿಶೀಲಿಸಿ ವರದಿ ನೀಡುವುದಾಗಿ ಹೇಳಿದರು.

ಜಿಲ್ಲಾ ಲೆಪ್ರಸಿ ಅಧಿಕಾರಿಗಳು ಮಾತನಾಡಿ, ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕದಡಿ ಮಿಮ್ಸ್, ಸ್ಯಾಂಜೋ ಆಸ್ಪತ್ರೆ, ಒಕ್ಕಲಿಗರ ಹಾಸ್ಟೆಲ್ ಮಂಡ್ಯ, ನಾಗಮಂಗಲ ಏಮ್ಸ್‌ನಲ್ಲಿ ಒಟ್ಟು ಡಿ.ಸಿ.ಹೆಚ್.-960 ಬೆಡ್ ವ್ಯವಸ್ಥೆ ಇದೆ, ಡಿ.ಸಿ.ಹೆಚ್.ಸಿ.ಯಲ್ಲಿ ಒಟ್ಟು 790 ಬೆಡ್ ವ್ಯವಸ್ಥೆ ಇದೆ ಎಂದು ತಿಳಿಸಿದಾಗ, ಇದಕ್ಕೆ ಕ್ಲೈಮ್ ಮಾಡುತ್ತಿದ್ದೇವೆಂದು ಡಿ.ಹೆಚ್.ಓ.ರವರು ತಿಳಿಸಿದರು.

ನೋಡಲ್ ಅಧಿಕಾರಿಯವರು ಮಾತನಾಡಿ, 593 ಕಂಟೈನ್ಮೆಂಟ್ & ಬಫರ್ ಝೋನ್ ಇದ್ದು, ನಗರ ಪ್ರದೇಶದಲ್ಲಿ ಜಾಸ್ತಿಯಿರುವುದರಿಂದ, ಒಂದೇ ಏರಿಯಾದಲ್ಲಿ 3-4 ಕೇಸ್ ಪಾಸಿಟಿವ್ ಬರುತ್ತಿರುವುದರಿಂದ ಹಾಗೂ ಸಿಬ್ಬಂದಿ ಕೊರತೆಯಿಂದ ವಿಳಂಬವಾಗುತ್ತಿದೆ ಎಂದು ತಿಳಿಸಿದಾಗ, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಏಮ್ಸ್ ನರ್ಸಿಂಗ್ ಹಾಗೂ ಬಿ.ಎಸ್.ಸಿ. ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳನ್ನು ಈ ಕೆಲಸಕ್ಕೆ ಬಳಸಿಕೊಳ್ಳುವಂತೆ ಡಿ.ಹೆಚ್.ಓ./ಟಿ.ಹೆಚ್.ಓ.ಗಳಿಗೆ ತಿಳಿಸಿದರು.

ಆರ್.ಸಿ.ಹೆಚ್.ಓ. ಅಧಿಕಾರಿಯವರು ಮಾತನಾಡಿ, ಕೋವಿಡ್ ಇರುವ ಗರ್ಭಿಣಿಯರನ್ನು ಕೋವಿಡ್ ಆಸ್ಪತ್ರೆ, ಮಿಮ್ಸ್‌ನಲ್ಲಿ ದಾಖಲಾತಿ ಮಾಡಿಕೊಂಡು ಅವರ ಸುರಕ್ಷಿತ ಹೆರಿಗೆಗೆ ಕ್ರಮ ವಹಿಸಲಾಗುತ್ತಿದೆ, ಇಲ್ಲಿಯವರೆಗೆ ಮಿಮ್ಸ್ ಆಸ್ಪತ್ರೆಯಲ್ಲಿ 60 ಗರ್ಭಿಣಿಯರನ್ನು ದಾಖಲಾತಿ ಮಾಡಲಾಗಿರುತ್ತದೆ, ಅದರಲ್ಲಿ 18 ಸಹಜ ಹೆರಿಗೆಗಳು, 27 ಎಲ್.ಎಸ್.ಸಿ.ಎಸ್./ಸಿಜೇರಿಯನ್ ಹೆರಿಗೆಗಳು ಆಗಿರುತ್ತದೆ ಹಾಗೂ ಒಂದು ತಾಯಿ ಮರಣ ಸಂಭವಿಸಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕ್ವಾರಂಟೈನ್ ವಾಚ್ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಮಂಡ್ಯ ರವರು ಮಾತನಾಡಿ, ಎಲ್ಲಾ ಗ್ರಾ.ಪಂ.ಗಳಲ್ಲಿ ಟಾಸ್ಕ್‌ಫೋರ್ಸ್ ರಚನೆ ಆಗಿದೆ ಎಂದು ತಿಳಿಸಿದಾಗ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಮಾತನಾಡಿ, ಟಾಸ್ಕ್‌ಫೋರ್ಸ್ ರಚನೆ ಆಗಿರುವುದಕ್ಕೆ 168 ಮಾತ್ರ ಎಂಟ್ರಿ ಆಗಿದೆ, ಉಳಿದವುಗಳನ್ನು ಎಂಟ್ರಿ ಮಾಡಬೇಕೆಂದು ಎಲ್ಲಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು. ತಾಲ್ಲೂಕುವಾರು ಕ್ವಾರಂಟೈನ್ ವಾಚ್ ಬಗ್ಗೆ ಪರಿಶೀಲಿಸಿ ಈ ದಿನವೇ ಆ್ಯಪ್‌ನಲ್ಲಿ ಮಾಹಿತಿಯನ್ನು ಅಪ್‌ಡೇಟ್ ಮಾಡುವಂತೆ ತಿಳಿಸಲಾಯಿತು. Unsorted ಪ್ರಕರಣಗಳನ್ನು ತಹಶೀಲ್ದಾರ್ ಹಾಗೂ ಟಿ.ಹೆಚ್.ಓ.ಗಳು ಸೇರಿ ಸರಿ ಮಾಡಬೇಕೆಂದು ಹಾಗೂ ಪ್ರೈಮರಿ, ಸೆಕೆಂಡರಿ ಸಂಪರ್ಕಿತರನ್ನು ಹೆಚ್ಚು ಗುರುತಿಸಬೇಕೆಂದು, ಹಾಗೆ ಐ.ಎಲ್.ಐ. ಮತ್ತು ಸಾರಿ ಪ್ರಕರಣಗಳಿಗೆ ಹೆಚ್ಚಿನ ಆದ್ಯತೆ ನೀಡಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ 25 ಟೆಸ್ಟ್‌ಗಳನ್ನು ಮಾಡಬೇಕೆಂದು ಸಹ ತಿಳಿಸಲಾಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಪಾಂಡವಪುರ ತಾಲ್ಲೂಕಿನಲ್ಲಿ ಸೋಂಕಿತರ ಪ್ರೈಮರಿ ಸಂಪರ್ಕಿತರು Nil ಆಗಿದೆ ಎಂದು ಮಾಹಿತಿ ಇದೆ. ಸೋಂಕಿತರ ಮನೆಯವರು, ಅಕ್ಕಪಕ್ಕದ ಮನೆಯವರನ್ನು ಗುರುತಿಸಿ ಟೆಸ್ಟ್ ಮಾಡಬೇಕೆಂದು ಟಿ.ಹೆಚ್.ಓ.ಗೆ ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, ತಹಶೀಲ್ದಾರ್, ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಟಿ.ಹೆಚ್.ಓ.ರವರುಗಳು Contact Tracing ಹೊಸ ಅಪ್ಲಿಕೇಶನ್ ಬಂದ ಮೇಲೆ ಅದರಲ್ಲಿ ಏನು ದಾಖಲಿಸಲಾಗುತ್ತದೆ, ಅದು ಕ್ವಾರಂಟೈನ್ ವಾಚ್‌ನಲ್ಲಿ ಇರುತ್ತದೆ. ಮೊದಲು ಸೋಂಕಿತರನ್ನು ಟೆಸ್ಟ್ ಮಾಡುವ ಸಂದರ್ಭದಲ್ಲಿ ಅವರ ಸರಿಯಾದ ವಿಳಾಸ, ದೂರವಾಣಿ ಸಂಖ್ಯೆಯನ್ನು ಎಂಟ್ರಿ ಮಾಡಬೇಕು, ರೋಗಿಯ ಹೆಸರು ಎಂಟ್ರಿ ಆದಾಗ ಮಿಮ್ಸ್ ಎಂದು ಇದೆ, ವಾರ್ಡ್, ತಾಲ್ಲೂಕು ಯಾವುದೆಂದು ಮಾಹಿತಿ ಇರುವುದಿಲ್ಲ, ಇಂತಹ ಪ್ರಕರಣಗಳು ಒಂದು ಸಾವಿರ ಇದೆ. ಕಳೆದ ಮೂರು ದಿನದಿಂದ Unsorted 517 ಜನರಿದ್ದಾರೆ. ಆದ್ದರಿಂದ ಟೆಸ್ಟ್ ಮಾಡುವ ಸಂದರ್ಭದಲ್ಲಿ ರೋಗಿಯ ಹೆಸರು, ವಿಳಾಸಗಳನ್ನು ಸರಿಯಾಗಿ ನಮೂದು ಮಾಡಿದರೆ ಅಂದರೆ ರೋಗಿಯ ಊರು, ವಾರ್ಡ್ ಎಂದು ನಮೂದು ಮಾಡಿದಲ್ಲಿ ಆತನ ಪ್ರೈಮರಿ, ಸೆಕೆಂಡರಿ ಸಂಪರ್ಕಿತರನ್ನು ಗುರುತಿಸಿ ಎಂಟ್ರಿ ಮಾಡಲು ಅನುಕೂಲವಾಗುತ್ತದೆಂದು, ಮಿಮ್ಸ್, ತಾಲ್ಲೂಕು ಆಸ್ಪತ್ರೆ, ಪಿ.ಹೆಚ್.ಸಿ./ಸಿ.ಹೆಚ್.ಸಿ.ಗಳಲ್ಲಿ ಸೋಂಕಿತರ ಪೂರ್ಣ ವಿಳಾಸವನ್ನು ಎ.ಎನ್.ಎಂ. ಹಾಗೂ ವಿ.ಎ.ಗಳು ಸೋಂಕಿತರ ಮನೆಗಳಲ್ಲಿರುವ ಪ್ರೈಮರಿ, ಸೆಕೆಂಡರಿ ಸಂಪರ್ಕಿತರನ್ನು ಎಂಟ್ರಿ ಮಾಡಿಸಬೇಕೆಂದು ಡಿ.ಹೆಚ್.ಓ./ಟಿ.ಹೆಚ್.ಓ.ಗಳಿಗೆ ತಿಳಿಸಿದರು.

ಕೋವಿಡ್-19 ಪಾಸಿಟಿವ್ ಹೊಂದಿರುವ ವ್ಯಕ್ತಿಗಳ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ತುರ್ತಾಗಿ ಪತ್ತೆಹಚ್ಚಿ, ಗೃಹನಿರ್ಬಂಧಿಸಿ, Contact Tracing appನಲ್ಲಿ ದಾಖಲಿಸಲು ಅಗತ್ಯ ಕ್ರಮ ವಹಿಸುವುದು. ಸದರಿ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಕಡ್ಡಾಯವಾಗಿ ಕೋವಿಡ್-19 ಪರೀಕ್ಷೆಗೆ ಒಳಪಡಿಸಲು ಕ್ರಮ ವಹಿಸುವುದು. ಗೃಹ ನಿರ್ಬಂಧಿತ ವ್ಯಕ್ತಿಗಳಿಂದ CQAS breach ಕಂಡು ಬಂದಲ್ಲಿ ನಿಯಮಾನುಸಾರ ಎಚ್ಚರಿಕೆ ನೀಡುವುದು ಹಾಗೂ CQAS breach ಪುನರಾವರ್ತನೆಯಾದಲ್ಲಿ ಸದರಿ ವ್ಯಕ್ತಿಗಳ ವಿರುದ್ಧ ಎಫ್.ಐ.ಆರ್. ದಾಖಲಿಸಲು ಕ್ರಮವಹಿಸುವಂತೆ ತಹಶೀಲ್ದಾರರು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ನಗರಸಭೆ/ಪುರಸಭೆ ಮುಖ್ಯಾಧಿಕಾರಿಗಳು ಕ್ರಮ ವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು. Quarantine watch appನಲ್ಲಿ ಗೃಹನಿರ್ಬಂಧಿತ ವ್ಯಕ್ತಿಗಳ ಫೋಟೋ ದಾಖಲೀಕರಣವನ್ನು ಅವಧಿ ಮುಗಿಯುವವರೆಗೆ ಪ್ರತಿನಿತ್ಯ ತಪ್ಪದೆ ದಾಖಲಿಸಲು ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಕೋವಿಡ್-19 ಪರಿಣಾಮಕಾರಿ ಹತೋಟಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಭಿವೃದ್ಧಿಪಡಿಸಿರುವ ವಿವಿಧ Appಗಳಲ್ಲಿ ವಿವರಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ದಾಖಲೀಕರಣಗೊಳಿಸಲು ಜಿಲ್ಲಾಧಿಕಾರಿಗಳು ಈ ಕೆಳಕಂಡ ಸೂಚನೆಗಳನ್ನು ನೀಡಿದರು.

1. ಕೋವಿಡ್-19 ಪರೀಕ್ಷಾ ಕೇಂದ್ರಗಳಲ್ಲಿ ಮಾದರಿಗಳನ್ನು ನೀಡುವ ವ್ಯಕ್ತಿಗಳ ಪೂರ್ಣ ವಿಳಾಸವನ್ನು (Present Address) RTPCR appನಲ್ಲಿ ಸರಿಯಾಗಿ ದಾಖಲಿಸುವುದು.
2. RAT Test ಮೂಲಕ ಕೋವಿಡ್-19 ಪಾಸಿಟಿವ್ ದೃಢಪಟ್ಟ ತಕ್ಷಣ ಸದರಿ ವ್ಯಕ್ತಿಗಳ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ವಿವರಗಳನ್ನು ಪರೀಕ್ಷಾ ಕೇಂದ್ರಗಳಲ್ಲಿ ದಾಖಲೀಕರಿಸಿ, ಸದರಿ ವ್ಯಕ್ತಿಗಳ ವಿವರಗಳನ್ನು Contact Tracing appನಲ್ಲಿ TEAM-1 ಮೂಲಕ ದಾಖಲಿಸಲು ಸಂಬಂಧಿಸಿದ ತಾಲ್ಲೂಕಿನ ತಾಲ್ಲೂಕು ಆರೋಗ್ಯ ಅಧಿಕಾರಿಗಳು ಹಾಗೂ ತಹಶೀಲ್ದಾರರಿಗೆ ಕಳುಹಿಸಿಕೊಡುವುದು. ನಂತರ ಹೆಚ್ಚುವರಿ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಬೂತ್ ಮಟ್ಟದ ತಂಡದಿಂದ (TEAM-2) ಪತ್ತೆಹಚ್ಚಿ Contact Tracing appನಲ್ಲಿ ದಾಖಲಿಸಲು ತಹಶೀಲ್ದಾರರು ಕ್ರಮವಹಿಸುವುದು.

3. ಮಂಡ್ಯ ಜಿಲ್ಲೆಯಲ್ಲಿ ವಾಸವಿದ್ದು, ಪ್ರಸ್ತುತ ಇತರೆ ಜಿಲ್ಲೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್-19 ಪಾಸಿಟಿವ್ ಹೊಂದಿರುವ ವ್ಯಕ್ತಿಗಳ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರನ್ನು ಬೂತ್ ಮಟ್ಟದ ತಂಡದಿಂದ (TEAM-2) ಪತ್ತೆಹಚ್ಚಿ Contact Tracing appನಲ್ಲಿ ದಾಖಲಿಸಲು ತಹಶೀಲ್ದಾರರು ಕ್ರಮವಹಿಸುವುದು.
4. Contact Tracing app ಹಾಗೂ Quarantine watch appನಲ್ಲಿ ದಾಖಲಿಸಿರುವ ವ್ಯಕ್ತಿಗಳ ವಿಳಾಸ ಸರಿಯಿಲ್ಲದ ಕಾರಣ, ಸದರಿ ವಿವರಗಳು unsorted listನಲ್ಲಿ ಲಭ್ಯವಿದ್ದು, ಕೂಡಲೆ ವಿಳಾಸ ಸರಿಪಡಿಸಿ, ಮುಂದಿನ ಕ್ರಮವಹಿಸುವುದು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲೆಯಲ್ಲಿ ಆರ್.ಐ.ಡಿ.ಎಫ್. ಯೋಜನೆಯಡಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ 23 ಅಂಗನವಾಡಿ ಕಟ್ಟಡ ನಿರ್ಮಿಸುವುದಕ್ಕೆ ಗುರಿ ನೀಡಿದ್ದು, ಕಾಮಗಾರಿ ಅನುಷ್ಠಾನವನ್ನು ಲೋಕೋಪಯೋಗಿ ಇಲಾಖೆರವರಿಗೆ ಜವಾಬ್ದಾರಿ ನೀಡಲಾಗಿದ್ದು, ಕಾಮಗಾರಿ ಯಾವ ಹಂತದಲ್ಲಿದೆ ಎಂದು ಕಾರ್ಯಪಾಲಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಮಂಡ್ಯರವರನ್ನು ಕೇಳಲಾಗಿ, ಸಭೆಯಲ್ಲಿ ಹಾಜರಿದ್ದ ಕಾರ್ಯಪಾಲಕ ಅಭಿಯಂತರು ಮಾತನಾಡಿ, ಕೆ.ಆರ್.ಪೇಟೆ ತಾಲ್ಲೂಕಿಗೆ 14 ಅಂಗನವಾಡಿ ಕಟ್ಟಡಕ್ಕೆ ಗುರಿ ನೀಡಿದ್ದು, ಅದರಲ್ಲಿ ಒಂದು ಕಟ್ಟಡವನ್ನು ಮಾತ್ರ ಕೆಡವಿ ಕಾಮಗಾರಿ ಅನುಷ್ಠಾನ ಮಾಡಬಹುದಾಗಿದೆ, ಉಳಿದ ಕಟ್ಟಡಗಳು ಸುಸ್ಥಿತಿಯಲ್ಲಿವೆ, ಇಂಡುವಾಳು, ದೇಶವಳ್ಳಿ, ಹೊಸಬೂದನೂರು ಅಂಗನವಾಡಿ ಕಾಮಗಾರಿಗಳಿಗೆ ಅಂದಾಜು ಪಟ್ಟಿ ಅನುಮೋದನೆಯಾಗಿ ಟೆಂಡರ್ ಕರೆಯಲಾಗಿದ್ದು, ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲಾಗುತ್ತಿದ್ದು. 6 ತಿಂಗಳ ಒಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, ಕೆ.ಆರ್.ಪೇಟೆ ತಾಲ್ಲೂಕಿನ ಅಂಗನವಾಡಿ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಂಡ್ಯರವರೊಂದಿಗೆ ಕಾರ್ಯಪಾಲಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಮಂಡ್ಯರವರು ಸಮಾಲೋಚಿಸಿ ಅಂಗನವಾಡಿಗೆ ಬಿಡುಗಡೆಯಾಗಿರುವ ಅನುದಾನವನ್ನು ಅವಶ್ಯವಿರುವ ಕಡೆ ಅಂಗನವಾಡಿಗಳನ್ನು ನಿರ್ಮಿಸಲು ಕ್ರಮ ವಹಿಸುವಂತೆ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಆರ್.ಐ.ಡಿ.ಎಫ್. ಯೋಜನೆಯಡಿ ಜಿಲ್ಲೆಗೆ ಮಂಜೂರಾಗಿರುವ ಅಂಗನವಾಡಿ ಕಟ್ಟಡ ಕಾಮಗಾರಿಗಳನ್ನು ಇನ್ನು 4 ತಿಂಗಳ ಒಳಗಾಗಿ ಪೂರ್ಣಗೊಳಿಸುವಂತೆ ಕಾರ್ಯಪಾಲಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಮಂಡ್ಯರವರಿಗೆ ನಿರ್ದೇಶಿಸಿದರು.

**(ಕ್ರಮ:- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯ)**

**<u>ಕೃಷಿ ಇಲಾಖೆ:-</u>**

ಜಿಲ್ಲಾಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಪ್ರಸ್ತುತ ಶೇ.40ರಷ್ಟು ಅಧಿಕ ಮಳೆ ಆಗಿದ್ದು, ಕಳೆದ ವರ್ಷ ಮಳೆ ಪ್ರವಾಹದಿಂದ ಮೃತಪಟ್ಟ ಒಬ್ಬರಿಗೆ ರೂ.5.00 ಲಕ್ಷಗಳ ಪರಿಹಾರವನ್ನು ನೀಡಲಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದ್ದು, ಜುಲೈ 28 ರಿಂದ ಕೆ.ಆರ್.ಎಸ್. ಜಲಾಶಯದಿಂದ ನೀರು ಬಿಡಲಾಗಿದ್ದು. ರೈತರು ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿರುತ್ತಾರೆ. ಏಪ್ರಿಲ್ 1 ರಿಂದ ಆಗಸ್ಟ್ 7 ನೇ ತಾರೀಖಿನವರೆಗೆ ಜಿಲ್ಲೆಯ ವಾಡಿಕೆ ಮಳೆ 293.2 ಮಿ.ಮಿ ಇದ್ದು, ವಾಸ್ತವವಾಗಿ 412.6 ಮಿ.ಮಿ (ಶೇ.40.7 ಹೆಚ್ಚುವರಿ) ಮಳೆಯಾಗಿರುತ್ತದೆ.

ಮುಂಗಾರು ಹಂಗಾಮಿಗೆ ಕೃಷಿ ಬೆಳೆಗಳಿಗೆ 196179 ಹೆಕ್ಟೇರ್ ಬಿತ್ತನೆ ಗುರಿ ನಿಗದಿಪಡಿಸಲಾಗಿದ್ದು, ಇದುವರೆವಿಗೂ 43485 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಪ್ರಸ್ತುತ ಭತ್ತದ ಬೆಳೆಯ ನಾಟಿ ಕಾರ್ಯ ಚುರುಕುಗೊಂಡಿರುತ್ತದೆ, ರಾಗಿ 17910 ಹೆಕ್ಟೇರ್ ಪ್ರದೇಶದಲ್ಲಿ ಇದುವರೆವಿಗೂ ಬಿತ್ತನೆಯಾಗಿರುತ್ತದೆ. ಆಗಸ್ಟ್ ಮಾಹೆಯ 2ನೇ ಹಾಗೂ 3ನೇ ವಾರದಲ್ಲಿ ಭತ್ತ ಹಾಗೂ ರಾಗಿ ಬೆಳೆಗಳ ಬಿತ್ತನೆ/ನಾಟಿ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಜಿಲ್ಲೆಯ ಎಲ್ಲಾ ರೈತಸಂಪರ್ಕ ಕೇಂದ್ರಗಳಲ್ಲಿ ಹಾಗೂ 80ಪಿ.ಎ.ಸಿ.ಎಸ್.ಲಿ.ಗಳಲ್ಲಿ ಸಹಾಯಧನದಲ್ಲಿ ರಾಗಿ ಹಾಗೂ ಭತ್ತದ ಬಿತ್ತನೆ ಬೀಜವನ್ನು ಜುಲೈ 25 ರಿಂದಲೇ ರೈತರಿಗೆ ವಿತರಿಸಲು ಕ್ರಮ ವಹಿಸಲಾಗಿದೆ. ಇದುವರೆವಿಗೂ 7041 ಕ್ವಿಂಟಾಲ್ ಬಿತ್ತನೆ ಬೀಜ ಸಹಾಯಧನದಲ್ಲಿ ರೈತರಿಗೆ ವಿತರಿಸಲಾಗಿದೆ. ಜಿಲ್ಲೆಯಲ್ಲಿ ಬಿತ್ತನೆ ಬೀಜಗಳಿಗೆ ಯಾವುದೇ ಕೊರತೆ ಇರುವುದಿಲ್ಲ ಎಂದು ಸಭೆಯಲ್ಲಿ ಹಾಜರಿದ್ದ ಕೃಷಿ ಅಧಿಕಾರಿಗಳು ತಿಳಿಸಿದರು. ನಂತರ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಆಯುಕ್ತರು
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಬೆಂಗಳೂರು
ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ/ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ:

1) ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರುರವರ ಅವಗಾಹನೆಗೆ
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನಸೌಧ, ಬೆಂಗಳೂರುರವರ ಅವಗಾಹನೆಗೆ
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರುರವರ ಅವಗಾಹನೆಗೆ
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ , ವಿಶಿಷ್ಟ ಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆ, ಬೆಂಗಳೂರುರವರ ಅವಗಾಹನೆಗೆ
5) ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಮಂಡ್ಯ
6) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ
7) ಜಂಟಿ ಕೃಷಿ ನಿರ್ದೇಶಕರು, ಮಂಡ್ಯ
8) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮಂಡ್ಯ
9) ನಿರ್ದೇಶಕರು, ಮಿಮ್ಸ್, ಮಂಡ್ಯ
10) ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಮಂಡ್ಯ
11) ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಮಂಡ್ಯ
12) ಎಲ್ಲಾ ನೋಡಲ್ ಅಧಿಕಾರಿಗಳು, ಮಂಡ್ಯ
13) ಉಪ ವಿಭಾಗಾಧಿಕಾರಿಗಳು, ಮಂಡ್ಯ/ಪಾಂಡವಪುರ
14) ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ., ಮಂಡ್ಯ
15) ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು
16) ಜಿಲ್ಲೆಯ ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು
17) ಹೆಚ್ಚುವರಿ ಪ್ರತಿ

ಡಾ॥ ಕೆ.ವಿ. ತ್ರಿಲೋಕ್ ಚಂದ್ರ, ಭಾ.ಆ.ಸೇ.,
ಆಯುಕ್ತರು
ಕೈಗಾರಿಕಾ ತರಬೇತಿ ಮತ್ತು ಉದ್ಯೋಗ

**Dr. K.V.THRILOK CHANDRA,** I.A.S.
Commissioner of Industrial Training &
Employment

"ಕೌಶಲ್ಯ ಭವನ", ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029.

" KOUSHALYA BHAVAN", DAIRY CIRCLE,
Bannerughatta Road, Bangalore-560 029.
Phone : +91 80 25189100 / 25189102
email : cet.bangalore@gmail.com
Website : www.emptrg.kar.nic.in

---

ಅ.ಸ.ಪ.ಸಂ: ಕೈತಉ/ಆಆಶಾ/ಪ.ವ್ಯ/2020-21 ದಿನಾಂಕ: 11-08-2020.
ಅಡಕ : ೧

ಶ್ರೀ. ವೆಂಕಟೇಶ್ ಅವರೆ,

ವಿಷಯ :- ಸ್ವಂತ ಕಟ್ಟಡವಿಲ್ಲದ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡ ನಿರ್ಮಿಸಲು ನಿವೇಶನ ಒದಗಿಸುವ ಬಗ್ಗೆ.

ಉಲ್ಲೇಖ :- ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅವರ ಅ.ಸ.ಪತ್ರ ಸಂ : ಡಿಡಬ್ಲ್ಯೂಸಿ/ಐಸಿಡಿ/ಬಿಎಲ್‌ಡಿ-001/04/2019-20, ದಿನಾಂಕ : 28-07-2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದ ಉಲ್ಲೇಖಿತ ಅರೆ ಸರ್ಕಾರಿ ಪತ್ರದ ಪ್ರತಿಯನ್ನು ಈ ಮೂಲಕ ಕಳುಹಿಸುತ್ತಾ, ಸದರಿ ಪತ್ರದಲ್ಲಿನ ಪ್ರಸ್ತಾಪಿತ ಕೋರಿಕೆಯ ಕುರಿತಾಗಿ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆಯು ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
K.V. Thrilok

ಗೆ,
ಡಾ: ಎಂ.ವಿ.ವೆಂಕಟೇಶ್, ಭಾ.ಆ.ಸೇ.,
ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡನಾಧಿಕಾರಿಗಳು,
ಜಿಲ್ಲಾಧಿಕಾರಿಗಳ ಕಚೇರಿ, ಮಂಡ್ಯ ಜಿಲ್ಲೆ.

ಡಾ॥ ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

ಕಛೇರಿ ದೂರವಾಣಿ : 080–22353991
080–22032562
ಕರ್ನಾಟಕ ಸರ್ಕಾರದ ಸಚಿವಾಲಯ
3ನೇ ಗೇಟ್, ಮೊದಲನೇ ಮಹಡಿ
ಎಂ.ಎಸ್. ಬಿಲ್ಡಿಂಗ್, ಬೆಂಗಳೂರು – 560 001
ಇ–ಮೇಲ್ : prisecy-wc@karnataka.gov.in

ಅ.ಸ.ಪತ್ರ ಸಂ: ಡಿಡಬ್ಲ್ಯೂ ಸಿ/ಐಸಿಡಿ/ಬಿಎಲ್‌ಡಿ-01/04/2019-20

ದಿನಾಂಕ: 28.07.2020

ವಿಷಯ : ಸ್ವಂತ ಕಟ್ಟಡವಿಲ್ಲದ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡ ನಿರ್ಮಿಸಲು ನಿವೇಶನ ಒದಗಿಸುವ ಬಗ್ಗೆ.

** ** **

DO letter to DC for n/a 11/8/2020

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ 65911 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಅಂಗನವಾಡಿ ಕೇಂದ್ರಗಳಲ್ಲಿ 3 ವರ್ಷದಿಂದ 6 ವರ್ಷದವರೆಗಿನ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ ಕಲಿಕೆ, 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಮತ್ತು ಗರ್ಭಿಣಿ, ಬಾಣಂತಿ ಹಾಗೂ ಕಿಶೋರಿಯರಿಗೆ ಪೂರಕ ಪೌಷ್ಠಿಕ ಆಹಾರ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಮಾತೃಪೂರ್ಣ, ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಗಳು ಜಾರಿಯಲ್ಲಿವೆ. ಇದಲ್ಲದೇ ಅಂಗನವಾಡಿ ಕೇಂದ್ರಗಳಲ್ಲಿ ತಾಯಂದಿರ ಸಭೆ, ಆರೋಗ್ಯ ತಪಾಸಣೆ, ಆರೋಗ್ಯ ಮತ್ತು ಪೌಷ್ಠಿಕ ಶಿಕ್ಷಣ, ಮಕ್ಕಳಿಗೆ ತೂಕ ಹಾಕುವುದು ಮೊದಲಾದ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

ರಾಜ್ಯದಲ್ಲಿ ಪ್ರಸ್ತುತ 65911 ಅಂಗನವಾಡಿ ಕೇಂದ್ರಗಳ ಪೈಕಿ 44558 ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುತ್ತದೆ. ಅಂದಾಜು 4078 ಕಟ್ಟಡ ಕಾಮಗಾರಿಗಳು ವಿವಿಧ ಯೋಜನೆಗಳಡಿ ಮಂಜೂರಾಗಿದ್ದು, ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. ಪ್ರಸ್ತುತ 17275 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡವಿಲ್ಲದೇ ವಿವಿಧ ಪರ್ಯಾಯ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ 13782 ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ನಿವೇಶನ ಲಭ್ಯವಿರುವುದಿಲ್ಲ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಲಭ್ಯಗಳುಳ್ಳ ಸ್ವಂತ ಕಟ್ಟಡಗಳನ್ನು ಕಲ್ಪಿಸುವುದು ಫಲಾನುಭವಿಗಳ ಹಿತದೃಷ್ಟಿಯಿಂದ ಅತೀ ಅವಶ್ಯಕವಾಗಿರುತ್ತದೆ. ಆದುದರಿಂದ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಸ್ವಂತ ಕಟ್ಟಡವಿಲ್ಲದ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡ ನಿರ್ಮಿಸಲು ಅನುವಾಗುವಂತೆ ಸೂಕ್ತ ನಿವೇಶನಗಳನ್ನು ಒದಗಿಸಲು ಆದ್ಯತೆ ಮೇರೆಗೆ ಕ್ರಮಕೈಗೊಳ್ಳಬೇಕಾಗಿ ತಮ್ಮಲ್ಲಿ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ: ಎನ್. ನಾಗಾಂಬಿಕಾ ದೇವಿ)

ಗೆ,

ಡಾ: ಕೆ.ವಿ ತ್ರಿಲೋಕಚಂದ್ರ, ಭಾ.ಆ.ಸೇ.
ಆಯುಕ್ತರು, ಕೈಗಾರಿಕಾ ತರಬೇತಿ ಉದ್ಯೋಗ ಇಲಾಖೆ, ಕೌಶಲ್ಯ ಭವನ,
ಡೈರಿವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ಮಂಡ್ಯ ಜಿಲ್ಲೆ.

C.No: 1602894
14/8/2020

**ದಿನಾಂಕ:07-08-2020ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ನಡೆದ ಪ್ರವಾಹ ಪರಿಸ್ಥಿತಿಯ ಕುರಿತು ಭದ್ರಾವತಿ ವಿಐಎಸ್ ಎಲ್ ಅತಿಥಿ ಗೃಹದಲ್ಲಿ ನಡೆದ ಸಭೆಯ ನಡವಳಿಗಳು**

ಸಭೆಯಲ್ಲಿ ಹಾಜರಿದ್ದವರು:

1. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ.
2. ಅಪರ ಜಿಲ್ಲಾಧಿಕಾರಿಗಳು, ಶಿವಮೊಗ್ಗ.
3. ಆಯುಕ್ತರು, ಮಹಾನಗರ ಪಾಲಿಕೆ, ಶಿವಮೊಗ್ಗ.
4. ಉಪ ವಿಭಾಗಾಧಿಕಾರಿಗಳು, ಶಿವಮೊಗ್ಗ ಉಪ ವಿಭಾಗ.
5. ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ, ಸಾಗರ.
6. ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಶಿವಮೊಗ್ಗ.
7. ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಶಿವಮೊಗ್ಗ.
8. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮೆಸ್ಕಾಂ ಶಿವಮೊಗ್ಗ.
9. ತಹಶೀಲ್ದಾರ್, ಶಿವಮೊಗ್ಗ / ಭದ್ರಾವತಿ.

*****

**1. ತುಂಗಾ-ಭದ್ರಾ ಮತ್ತು ಲಿಂಗನಮಕ್ಕಿ ಜಲಾಶಯಗಳ ನೀರಿನ ಮಟ್ಟದ ಬಗ್ಗೆ:**

ತುಂಗಾ ಜಲಾಶಯದ ನೀರಿನ ಗರಿಷ್ಠ ಮಟ್ಟ 588.24 ಅಡಿ, ನೀರಿನ ಒಳ ಅರಿವು 56525 ಕ್ಯೂಸೆಕ್ಸ್ ಹಾಗೂ ಒಟ್ಟು ಹೊರ ಹರಿವು 46525 ಕ್ಯೂಸೆಕ್ಸ್ ಕೊಡಲಾಗುತ್ತಿದೆ. ಇನ್ನೂ ಕಳೆದ ವರ್ಷ ಇದೇ ಸಮಯದಲ್ಲಿ ಹೊರ ಹರಿವು 115000 ಕ್ಯೂಸೆಕ್ಸ್ ಇದ್ದು, ಇದನ್ನು ಗಮನಿಸಿದಾಗ ಈ ಸಾಲಿನಲ್ಲಿ ಪ್ರವಾಹವು ನಿಯಂತ್ರಣದಲ್ಲಿದೆ ಎಂದೂ, ಶಿವಮೊಗ್ಗದಲ್ಲಿ ಇದೇ ರೀತಿ ನಿರಂತರವಾಗಿ ಹೆಚ್ಚಿನ ಮಳೆ ಬಂದಲ್ಲಿ ಪ್ರವಾಹ ಉಂಟಾಗುವ ಸಂಭವವಿರುತ್ತದೆ ಎಂಬ ಮಾಹಿತಿಯನ್ನು ಸಭೆಗೆ ವಿವರಿಸಲಾಯಿತು.

**ಜಲಾಶಯಗಳ ನೀರಿನ ಮಟ್ಟ:**

| ಜಲಾಶಯ | ನೀರಿನ ಮಟ್ಟ ಅಡಿಗಳಲ್ಲಿ | | | ನೀರಿನ ಹರಿವು ಕ್ಯೂಸೆಕ್ಸ್ ಗಳಲ್ಲಿ | | ಬಿದ್ದ ಮಳೆ ಮಿ.ಮೀ.ಗಳಲ್ಲಿ |
|---|---|---|---|---|---|---|
| ಲಿಂಗನಮಕ್ಕಿ | 1819.00 | 1789.80 | 1782.00 | 84806.00 | 0.00 | 162.40 |
| ಭದ್ರಾ | 186.00 | 149.11 | 159.50 | 35875.00 | 2184.00 | 16.20 |
| ತುಂಗಾ | 588.24 | 588.24 | 588.24 | 56525.00 | 46525.00 | |

ಜಿಲ್ಲೆಯಲ್ಲಿ ಮಳೆ ಪ್ರಮಾಣ ಜಾಸ್ತಿ ಇರುವುದರಿಂದ ಹಾಗೂ ನದಿಗಳಲ್ಲಿ ನೀರು ಶೇಖರಣೆಯಾಗಿ ಹೊರ ಹರಿವು ಹೆಚ್ಚಿಗೆ ಇರುವುದರಿಂದ ಪ್ರವಾಹ ಉಂಟಾಗಿ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗುವ ಸಂಭವ ಇರುವ ಕಡೆ ಸಂತ್ರಸ್ತರಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವುದು ಅವಶ್ಯವಿರುವುದರಿಂದ ಕಾಳಜಿ ಕೇಂದ್ರವನ್ನು ತಕ್ಷಣ ಆರಂಭಿಸಿ, ಈ ಕಾಳಜಿ ಕೇಂದ್ರಕ್ಕೆ ನೋಡಲ್ ಅಧಿಕಾರಿ, ಕಾಳಜಿ ಕೇಂದ್ರದ ಉಸ್ತುವಾರಿ ಅಧಿಕಾರಿ ಸಿಬ್ಬಂದಿಗಳು, ಸ್ವಚ್ಛತಾ ಸಿಬ್ಬಂದಿಗಳು, ಸಹಾಯಕ ಸಿಬ್ಬಂದಿಗಳು ಮುಂತಾದವರನ್ನು ನೇಮಕ ಗೊಳಿಸಿ ಪೂರ್ವಸಿದ್ಧತೆಯನ್ನು ಇಂದಿನಿಂದಲೇ ಮಾಡಿಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

ಸಣ್ಣ ನೀರಾವರಿ ಇಲಾಖೆಯ ಇಂಜಿನಿಯರ್ ರವರು ಸಭೆಗೆ ಮಾಹಿತಿಯನ್ನು ನೀಡುತ್ತಾ ಜಿಲ್ಲೆಯಲ್ಲಿ 306 ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳಿದ್ದು, ಇದರಲ್ಲಿ ಒಂದು ಕೆರೆ ಒಡೆದಿದ್ದು, ಇನ್ನುಳಿದ ಕೆರೆಗಳು ಸುಸ್ಥಿತಿಯಲ್ಲಿದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಸಭೆಯಲ್ಲಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ, ಸಾಗರ ರವರು ಉಪಸ್ಥಿತರಿದ್ದು, ಇವರಲ್ಲಿ ಶಿವಮೊಗ್ಗ ವಿಭಾಗದಲ್ಲಿ ಒಂದು ಕೆರೆ ಕೋಡಿ ಒಡೆದಿರುವುದನ್ನು ಸಭೆಯ ಗಮನಕ್ಕೆ ತಂದರು. ಈ ಸಂಬಂಧ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆಗಳನ್ನು ನೀಡುತ್ತಾ ತಕ್ಷಣ ಮರಳು ಚೀಲಗಳನ್ನು ಸಿದ್ಧಪಡಿಸಿಟ್ಟುಕೊಳ್ಳಲು ತಿಳಿಸಿದರು ಹಾಗೂ ಎಲ್ಲಾ ಕೆರೆಗಳ ತೂಬುಗಳು ಒತ್ತುವರಿಯಾಗಿರುವುದೇ ಎಂಬುದನ್ನು ಖುದ್ದು ಪರಿಶೀಲಿಸುವಂತೆ ತಿಳಿಸುತ್ತಾ ಎಲ್ಲಾ ಒತ್ತುವರಿ ತೂಬು ಗಳನ್ನು ತೆರವುಗೊಳಿಸಿ ಮತ್ತು ಅವುಗಳನ್ನು ಸ್ವಚ್ಛಗೊಳಿಸುವಂತೆ ಸೂಚಿಸಲಾಯಿತು ಹಾಗೂ ಈ ತೂಬಿನಲ್ಲಿ ನೀರು ಸರಾಗವಾಗಿ ಹರಿಯಲು ಅನುವು ಮಾಡಿಕೊಳ್ಳುವಂತೆ ಸೂಚಿಸಲಾಯಿತು. ಸಾಗರ ವಿಭಾಗದಲ್ಲಿ ಯಾವುದೇ ಕೆರೆಗಳು ಒಡೆದಿಲ್ಲವೆಂಬ ಮಾಹಿತಿಯನ್ನು ಸಭೆಯಲ್ಲಿ ಅನುಮೋದಿಸಲಾಯಿತು.

ಮೆಸ್ಕಾಂ ಇಲಾಖಾ ವತಿಯಿಂದ ಸಭೆಗೆ ಮಾಹಿತಿಯನ್ನು ನೀಡುತ್ತಾ ಜಿಲ್ಲೆಯ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಅಕೇಷಿಯಾ ಮರಗಳು ಬಿದ್ದು ಲೈನ್ ಗಳು ಹಾಗೂ ವಿದ್ಯುತ್ ಕಂಬಗಳು ಬಿದ್ದಿರುವುದಾಗಿ ತಿಳಿಸಿದರು. ಈವರೆಗೆ ಬಿದ್ದ 300 ವಿದ್ಯುತ್ ಕಂಬಗಳನ್ನು ದುರಸ್ತಿ ಮಾಡಿ ವಿದ್ಯುತ್ ಸಂಪರ್ಕ ನೀಡಿರುವುದಾಗಿ ತಿಳಿಸಿದರು. ಈ ವಿಚಾರದಲ್ಲಿ ಜಿಲ್ಲಾ ಕಾರ್ಯದರ್ಶಿಗಳು ಸೂಚನೆಗಳನ್ನು ನೀಡುತ್ತಾ ಈ ಕಾರ್ಯವನ್ನು ಅರಣ್ಯ ಇಲಾಖೆಯ ಸಹಮತಿಯೊಂದಿಗೆ ನಿರ್ವಹಿಸುವಂತೆ ಹಾಗೂ ಅತೀ ಹೆಚ್ಚು ಮಳೆಯಾಗುತ್ತಿರುವ ಪ್ರದೇಶದಲ್ಲಿ ವಿದ್ಯುತ್ ಕಂಬಗಳು ಮತ್ತು ವಿದ್ಯುತ್ ಲೈನ್ ಗಳನ್ನು ತುರ್ತಾಗಿ ದುರಸ್ತಿಪಡಿಸಿ ವಿದ್ಯುತ್ ಸಂಪರ್ಕವನ್ನು ನೀಡುವಂತೆ ಸೂಚಿಸಲಾಯಿತು.

ಜಿಲ್ಲಾ ಮಟ್ಟದಲ್ಲಿ ಕಂಟ್ರೋಲ್ ರೂಂ ತೆರೆದಿರುವ ಮಾಹಿತಿಯನ್ನು ಸಭೆಯಲ್ಲಿ ತಿಳಿಸಲಾಯಿತು ಹಾಗೂ ಕಂಟ್ರೋಲ್ ರೂಂ 1077 ಮತ್ತು 08182-221010 ಎಂದು ಪ್ರಚುರ ಪಡಿಸಿರುವ ಮಾಹಿತಿಯನ್ನು ಸಹ ಸಭೆಯಲ್ಲಿ ತಿಳಿಸಲಾಯಿತು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆಗಳನ್ನು ನೀಡುತ್ತಾ ತಾಲ್ಲೂಕು ಹಂತದಲ್ಲಿ ಕಂಟ್ರೋಲ್ ರೂಂ ಅನ್ನು ತೆರೆದಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲಾಯಿತು.

| ಕ್ರ.ಸಂ | ಜಿಲ್ಲಾ ಕೇಂದ್ರ / ತಾಲ್ಲೂಕು | ಕಂಟ್ರೋಲ್ ರೂಂ. ನಂ. |
|---|---|---|
| 1 | ಮಹಾನಗರ ಪಾಲಿಕೆ ಶಿವಮೊಗ್ಗ | 18004257677 |
| 2 | ತಾಲ್ಲೂಕು ಕಛೇರಿ ಶಿವಮೊಗ್ಗ | 08182-279311 |
| 3 | ತಾಲ್ಲೂಕು ಕಛೇರಿ ಭದ್ರಾವತಿ | 08282-263466 |
| 4 | ತಾಲ್ಲೂಕು ಕಛೇರಿ ತೀರ್ಥಹಳ್ಳಿ | 08181-228239 |
| 5 | ತಾಲ್ಲೂಕು ಕಛೇರಿ ಸಾಗರ | 08187-226074 |
| 6 | ತಾಲ್ಲೂಕು ಕಛೇರಿ ಶಿಕಾರಿಪುರ | 08187-222422 |
| 7 | ತಾಲ್ಲೂಕು ಕಛೇರಿ ಸೊರಬ | 08184-272241 |
| 8 | ತಾಲ್ಲೂಕು ಕಛೇರಿ ಹೊಸನಗರ | 08185-221235 |

ಶಿವಮೊಗ್ಗ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ತುಂಗಾನದಿಯಲ್ಲಿ ಪ್ರವಾಹ ಪರಿಸ್ಥಿತಿಯನ್ನು ಪರಿಶೀಲಿಸಲು ತಂಡವನ್ನು ರಚಿಸುವಂತೆ ತಿಳಿಸಲಾಯಿತು. ಹಾಗೂ ಪ್ರತೀ ವಾರ್ಡಗಳಲ್ಲಿ ತಂಡವನ್ನು ರಚಿಸಿ ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ನಿಯೋಜಿಸುವಂತೆ ಸೂಚಿಸಲಾಯಿತು. ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಹಾಲಿ ಆಯುಕ್ತರು, ಕೋವಿಡ್ ಸಂಬಂಧ ಚಿಕಿತ್ಸೆಯಲ್ಲಿರುವುದರಿಂದ ಮುಖ್ಯಅಭಿಯಂತರರು, ಸ್ಮಾರ್ಟ್ ಸಿಟಿ ರವರಿಗೆ ಹೆಚ್ಚುವರಿ ಪ್ರಭಾರವನ್ನು ನೀಡುವಂತೆ ಸೂಚಿಸಲಾಯಿತು.

ಜಿಲ್ಲಾಧಿಕಾರಿರವರು ಸಭೆಗೆ ಮಾಹಿತಿಯನ್ನು ನೀಡುತ್ತಾ ಈಗಾಗಲೇ SDRF ತಂಡಗಳಿಗೆ ಜಿಲ್ಲೆಯಲ್ಲಿ ವರದಿ ಮಾಡಿಕೊಳ್ಳಲು ಕೋರಿಕೊಂಡಿರುವುದಾಗಿ ಹಾಗೂ ಒಂದು ಮಿಲಿಟರಿ ತಂಡ ಬರುವುದಾಗಿ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಶಿವಮೊಗ್ಗ ರವರು ಸಭೆಗೆ ಮಾಹಿತಿಯನ್ನು ನೀಡುತ್ತಾ ವರದಾ ನದಿಯ ದಡದಲ್ಲಿ ಬರುವ ಸಾಗರ ಹಾಗೂ ಸೊರಬ ತಾಲ್ಲೂಕುಗಳಲ್ಲಿ 1200 ಹೆಕ್ಟೇರ್ ನಷ್ಟ ಬೆಳೆ ಮುಳುಗಡೆ ಯಾಗಿದೆ ಎಂಬ ಮಾಹಿತಿಯನ್ನು ತಿಳಿಸುತ್ತಾ ಈಗಾಗಲೇ ನೀರು ಇಳಿಮುಖವಾದ ನಂತರ ನಷ್ಟದ ಪರಿಹಾರವನ್ನು ಜಂಟಿಯಾಗಿ ಪರಿಶೀಲಿಸಿ ವರದಿ ಮಾಡುವುದಾಗಿ ತಿಳಿಸಿದರು.

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಶಿವಮೊಗ್ಗ ರವರು ಸಭೆಗೆ ಮಾಹಿತಿಯನ್ನು ನೀಡುತ್ತಾ ಈಗಾಗಲೇ ಜಿಲ್ಲೆಯಲ್ಲಿ ಕಂದಾಯ ಮತ್ತು ತೋಟಗಾರಿಕೆ ಇಲಾಖೆಯಿಂದ ಜಂಟಿ ಪರಿಶೀಲನೆ ನಡೆಸುತ್ತಿದ್ದು, ಪರಿಶೀಲನೆಯು ಪ್ರಗತಿಯಲ್ಲಿರುವ ಮಾಹಿತಿಯನ್ನು ತಿಳಿಸಿ ವರದಿಯನ್ನು ಸಲ್ಲಿಸುವುದಾಗಿ ಸಭೆಗೆ ತಿಳಿಸಿದರು.

ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಶಿವಮೊಗ್ಗ ರವರು ಜಿಲ್ಲೆಯಲ್ಲಿ ಒಂದು ಜಾನುವಾರು ಮೃತಪಟ್ಟಿರುವುದಾಗಿ ತಿಳಿಸಿದರು.

ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ನಷ್ಟವಾದ ಪ್ರಕರಣಗಳಲ್ಲಿ ಪರಿಶೀಲಿಸಿ ದಾಖಲಾತಿಗಳನ್ನು ಪಡೆದು ಪರಿಹಾರವನ್ನು ಶೀಘ್ರವಾಗಿ ಪರಿಹಾರ ವಿತರಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ/02/ಆಶಾ/2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 12-08-2020

ಇವರಿಗೆ :

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ಬೆಂಗಳೂರು.

ಮಾನ್ಯರೆ,

ವಿಷಯ : ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಬೆಳಗಾವಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ಕುರಿತು ವರದಿ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಳಗಾವಿ ಜಿಲ್ಲೆಗೆ ಉಸ್ತುವಾರಿ ಕಾರ್ಯದರ್ಶಿಯಾಗಿ ದಿನಾಂಕ : 07-08-2020 ರಂದು ಭೇಟಿ ನೀಡಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯನ್ನು ಹಾಗೂ ಕೋವಿಡ್ ರೋಗ ನಿಯಂತ್ರಣದ ಕುರಿತು ಸಭೆಯನ್ನು ನಡೆಸಲಾಗಿದೆ. ಸದರಿ ಸಭೆಯ ಪರಿಶೀಲನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ
ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಪ್ರತಿ – ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ:**

1. ಸರ್ಕಾರದ ಕಾರ್ಯದರ್ಶಿಗಳು, ಸಿ.ಆ.ಸು.ಇ (ಆ.ಸು)
2. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ ಜಿಲ್ಲೆ.
4. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.

# ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಜಿಲ್ಲಾ ಕೋವಿಡ್-19 ಹಾಗೂ ಜಿಲ್ಲಾ ಪ್ರಗತಿ ಪರಿಶೀಲನಾ ವರದಿ

ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನಾನು ದಿನಾಂಕ: 07-08-2020 ರಂದು ಬೆಳಗಾವಿ ಜಿಲ್ಲೆಗೆ ಭೇಟಿ ನೀಡಿ ಜಿಲ್ಲಾಡಳಿತದೊಂದಿಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಲಸಂಪನ್ಮೂಲ ಸಚಿವರಾದ ಶ್ರೀ ರಮೇಶ್ ಲಕ್ಷ್ಮಣರಾವ್ ಜಾರಕಿಹೊಳಿ ಇವರೊಂದಿಗೆ ನೆರೆ ಪರಿಸ್ಥಿತಿಯ ಬಗ್ಗೆ ಹಾಗೂ ಕೋವಿಡ್ ಕುರಿತು ಸಭೆಯನ್ನು ನಡೆಸಲಾಯಿತು.

**ಸದರಿ ಸಭೆಯ ವರದಿ ಈ ಕೆಳಕಂಡಂತಿದೆ :**

- ಜಿಲ್ಲೆಯಲ್ಲಿ ನೆರೆ ಪರಿಸ್ಥಿತಿಯನ್ನು ಪರಿಶೀಲಿಸಲಾಯಿತು. ಈಗ ಕೃಷ್ಣ, ಮಲಪ್ರಭ, ಘಟಪ್ರಭ, ವೇದಗಂಗಾ, ದೂದ್‌ಗಂಗಾ ನದಿಗಳಿಂದ ಬರುತ್ತಿರುವ ಒಳ ಹರಿವುಗಳನ್ನು ಪರಿಶೀಲಿಸಲಾಯಿತು. ಸದ್ಯದ ಪರಿಸ್ಥಿತಿಯಲ್ಲಿ ನೆರೆ ಬರುವಂತಹಾ ಸಂಭವಗಳು ಕಡಿಮೆ ಎಂಬುದನ್ನು ಗಮನಿಸಲಾಯಿತು. ಆದರೂ, ಮಹಾರಾಷ್ಟ್ರದಲ್ಲಿ ಹಾಗೂ ಪಶ್ಚಿಮ ಘಟ್ಟದಲ್ಲಿ ಹೆಚ್ಚಿನ ಮಳೆ ಬಂದಲ್ಲಿ ಕೇವಲ 2-3 ದಿನಗಳಲ್ಲಿ ಪರಿಸ್ಥಿತಿ ಬದಲಾಗುವ ಸಂಭವವಿರುತ್ತದೆ ಎಂಬುದನ್ನೂ ಕೂಡಾ ಅಧಿಕಾರಿಗಳಿಗೆ ಮನವರಿಕೆ ಮಾಡಲಾಯಿತು.

- ಮಹಾರಾಷ್ಟ್ರ ರಾಜ್ಯದ ಗಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡು ಕೊಯ್ನಾ ನದಿಯಿಂದ ಬಿಡುಗಡೆ ಮಾಡುವ ನೀರಿನ ಮಟ್ಟವನ್ನು ಸೂಕ್ಷ್ಮವಾಗಿ ಗಮನಿಸುತ್ತಿರಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

- ಕಳೆದ ವರ್ಷ ಪ್ರವಾಹದಿಂದ ಮುಳುಗಡೆಯಾದ ಪ್ರದೇಶದ ಪಟ್ಟಿಯನ್ನು ತೆಗೆದುಕೊಂಡು ಆ ಎಲ್ಲಾ ಪ್ರದೇಶಗಳ ನಗರ ಪಾಲಿಕೆ, ಪಟ್ಟಣ ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಗಳಿಗೆ ಮುಂಜಾಗ್ರತಾ ಸೂಚನೆಗಳನ್ನು ಈಗಾಗಲೇ ನೀಡಿರುವುದನ್ನು ಗಮನಿಸಲಾಯಿತು. ಕಳೆದ ವರ್ಷ ಸ್ಥಾಪಿಸಲಾದ ಪುನರ್ವಸತಿ ಕೇಂದ್ರಗಳ ಸ್ಥಳಗಳನ್ನು ಪರಿಶೀಲಿಸಲು ಜಿಲ್ಲಾಡಳಿತ ತಂಡಗಳನ್ನು ರಚಿಸಿರುತ್ತದೆ. ಪ್ರವಾಹ ಬಂದಲ್ಲಿ ಕೂಡಲೇ ಮುಳುಗಡೆಯಾಗಬಹುದಾದ ಪ್ರದೇಶಗಳಿಂದ ಜನರನ್ನು ಸ್ಥಳಾಂತರ ಮಾಡಲು ಎಲ್ಲಾ ಸಿದ್ಧತೆಗಳನ್ನು ಜಿಲ್ಲಾಡಳಿತ ಮಾಡಿಕೊಂಡಿರುವುದನ್ನು ಕೂಡಾ ಗಮನಿಸಲಾಯಿತು.

- ಜಿಲ್ಲೆಯಲ್ಲಿರುವಂತಹಾ ಎಲ್ಲಾ ಕೆರೆಗಳಿಗೆ ನೀರನ್ನು ನದಿ ಹಾಗೂ ನಾಲೆಗಳ ಮೂಲಕ ತುಂಬಿಕೊಳ್ಳಲು ಮಾನ್ಯ ಜಲಸಂಪನ್ಮೂಲ ಸಚಿವರು ನಿರ್ದೇಶನ ನೀಡಿದರು.

- NDRF ಮತ್ತು SDRF ತುಕಡಿಗಳ ಪೂರ್ವ ಸಿದ್ಧತೆಯನ್ನು ಹಾಗೂ ಮುಂಜಾಗ್ರತಾ ವಹಿಸಿರುವ ಕ್ರಮಗಳ ಬಗ್ಗೆ ಕೂಡಾ ಗಮನಿಸಲಾಯಿತು.

- ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ SDRF ಅಡಿಯಲ್ಲಿ ಸಾಕಷ್ಟು ಅನುದಾನ ಲಭ್ಯವಿರುವುದನ್ನು ಕೂಡಾ ಗಮನಿಸಲಾಯಿತು.

ಒಟ್ಟಾರೆ, ಬೆಳಗಾವಿ ಜಿಲ್ಲೆಯಲ್ಲಿ ನೆರೆ ಮುಂಜಾಗ್ರತೆಗಾಗಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಸಮಾಧಾನವನ್ನು ವ್ಯಕ್ತಪಡಿಸಿದರು.

**ಕೋವಿಡ್ ಪರಿಸ್ಥಿತಿಯ ಕುರಿತು ವರದಿ:**

- ಜಿಲ್ಲೆಯಲ್ಲಿ ದಿನಾಂಕ: 06–08–2020 ರವರೆಗೆ ಒಟ್ಟು 3158 ಆಕ್ಟೀವ್ ಪ್ರಕರಣಗಳಿದ್ದು, 1219 ಪ್ರಕರಣಗಳಲ್ಲಿ ಗುಣಮುಖರಾಗಿದ್ದು, 91 ಜನರು ನಿಧನರಾಗಿರುತ್ತಾರೆ.

- ದಿನಾಂಕ: 06–08–2020 ರವರೆಗೆ 44,148 ಸ್ವಾಬ್‌ಗಳನ್ನು ಪರೀಕ್ಷೆಗಾಗಿ ಸಂಗ್ರಹಿಸಲಾಗಿದ್ದು, ಇವುಗಳ ಪೈಕಿ 4,470 ಪಾಸಿಟೀವ್ ಆಗಿದ್ದು, 38,539 ನೆಗೆಟೀವ್ ಫಲಿತಾಂಶ ಬಂದಿರುತ್ತದೆ. ಸ್ವಾಬ್ ಪರೀಕ್ಷೆಯಲ್ಲಿ 285 SARI ಹಾಗೂ 1,277 ILI ಪ್ರಕರಣಗಳಾಗಿವೆ.

(ಎಲ್.ಕೆ.ಅತೀಕ್)
ಸರ್ಕಾರ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ
ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 701, 7ನೇ ಮಹಡಿ
3ನೇ ಹಂತ, ಬಹುಮಹಡಿಗಳ ಕಟ್ಟಡ
ಬೆಂಗಳೂರು – 560 001
ದೂ : 080–22252352, 22032726
ಇ–ಮೇಲ್: prsplanning@gmail.com

ಸಂಖ್ಯೆ: ಯೋಇ/ಅಮುಕಾ/364/2020

ದಿನಾಂಕ: 07.08.2020

ಮಾನ್ಯರೇ,

ದಿನಾಂಕ: 06.08.2020 ರಂದು ತಾವು ನೀಡಿರುವ ನಿರ್ದೇಶನದಂತೆ, ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಜಿಲ್ಲೆಯ ವಿವಿಧ ಅಧಿಕಾರಿಗಳಿಂದ ಅತಿವೃಷ್ಟಿಗೆ ಸಂಬಂಧಿಸಿದ ವಿವರಗಳನ್ನು ಪಡೆದು ಈ ಬಗ್ಗೆ ಕೈಗೊಂಡಿರುವ ಪೂರ್ವಭಾವಿ ಸಿದ್ಧತೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿ ಮಾಡಿರುತ್ತೇನೆ (ಪ್ರಾತ್ಯಕ್ಷಿಕೆ (PPT) ಮತ್ತು ಸಭೆಯ ನಡವಳಿ ಲಗತ್ತಿಸಿದೆ). ಒಟ್ಟಾರೆ ಮಲೆನಾಡು ಭಾಗದ ಈ ಜಿಲ್ಲೆಯಲ್ಲಿ ಪ್ರಸ್ತುತ ಮಳೆ ಪ್ರಮಾಣ ಸಾಮಾನ್ಯ ಜೀವನವನ್ನು ಅಸ್ತವ್ಯಸ್ತ ಮಾಡದೇ ಇದ್ದರೂ ಸಹ ಮುಂದಿನ ದಿನಗಳಲ್ಲಿ ಹೆಚ್ಚಿನ ಜಾಗ್ರತೆ ವಹಿಸಲು ಜಿಲ್ಲಾಡಳಿತ ವತಿಯಿಂದ ಈ ಕೆಳಕಂಡ ಕ್ರಮಗಳನ್ನುಕೈಗೊಳ್ಳಲಾಗಿದೆ.

1. ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಜೂನ್ ಮಾಹೆಯಲ್ಲಿ ಸಿಡಿಲು ಬಡಿದು 4 ವ್ಯಕ್ತಿಗಳು ಮೃತರಾಗಿದ್ದು, ಮೃತರ ವಾರಸುದಾರರಿಗೆ ತಲಾ ರೂ. 5 ಲಕ್ಷ ಪರಿಹಾರ ಧನವನ್ನು ನೀಡಲಾಗಿದೆ ಮತ್ತು ಇತ್ತೀಚೆಗೆ ಆಗಸ್ಟ ತಿಂಗಳಿನಲ್ಲಿ ಬೀಳುತ್ತಿರುವ ಮಳೆಯಿಂದಾಗಿ ಯಾವುದೇ ಮಾನವ ಹಾನಿ **ಸಂಭವಿಸಿರುವುದಿಲ್ಲ.**
2. ಜಿಲ್ಲೆಯಲ್ಲಿ ಒಟ್ಟು 8 ಜಾನುವಾರುಗಳ ಜೀವ ಹಾನಿಯಾಗಿದ್ದು, ಈ ಪೈಕಿ ಈಗಾಗಲೇ ಒಂದು ಪ್ರಕರಣಕ್ಕೆ ಪರಿಹಾರವನ್ನು ಪಾವತಿಸಲಾಗಿರುತ್ತದೆ ಮತ್ತು ಉಳಿದ **7 ಪ್ರಕರಣಗಳಿಗೆ ತುರ್ತಾಗಿ ಪರಿಹಾರ ಪಾವತಿಸಲು ಸೂಚಿಸಲಾಗಿರುತ್ತದೆ.**
3. ಜೂನ್-ಜುಲೈ ತಿಂಗಳಲ್ಲಿ ಜಿಲ್ಲೆಯಲ್ಲಿ ಒಟ್ಟು 186 ಮನೆಗಳು ಹಾನಿಯಾಗಿದ್ದು, ಆಗಸ್ಟ 1 ರಿಂದ 108 ಮನೆಗಳು ಹಾನಿಯಾಗಿರುತ್ತವೆ. ಈ ಸಾಲಿನ ಮಳೆಯಿಂದಾಗಿ ಹಾನಿಗೊಂಡಿರುವ ಮನೆಗಳನ್ನು 'ಎ' 'ಬಿ' 'ಸಿ' ವರ್ಗವಾರು ವರ್ಗೀಕರಿಸಿ, ಅನುಗುಣವಾಗಿ **RGRHCL ತಂತ್ರಾಂಶದ ಮೂಲಕ ಪರಿಹಾರವನ್ನು ನೀಡುವ ಕ್ರಮವಹಿಸಲು ಸೂಚಿಸಲಾಗಿದೆ.**
4. ಕಳೆದ ಸಾಲಿನಲ್ಲಿ ಹಾನಿಗೊಂಡ ವಾಸ್ತವ್ಯದ ಮನೆಗಳಿಗೆ ರಾಜೀವ್ ಗಾಂಧಿ ನಿಗಮದಿಂದ ಪರಿಹಾರವನ್ನು ಬಿಡುಗಡೆ ಮಾಡಲು ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ, ತುರ್ತಾಗಿ ನಿಗಮದಿಂದ ಹಣ ಬಿಡುಗಡೆಗೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.
5. ಕಳೆದ ವರ್ಷ ಹಾನಿಗೊಳಗಾದ ಮನೆಯ ಪುನರ್ ನಿರ್ಮಾಣಕ್ಕಾಗಿ 18.33 ಕೋಟಿ ರೂ.ಗಳನ್ನು ಬಳಕೆಯಾಗದಂತೆ ಇರಿಸಲಾಗಿದೆ ಏಕೆಂದರೆ ಸರ್ಕಾರದಿಂದ ಹಸಿರು ನಿಶಾನೆ (Green Signal) ನೀಡದಿರುವ ಕಾರಣದಿಂದಾಗಿ.
6. ಹಾನಿಗೊಂಡಿರುವ ಮನೆಗಳ ಪೈಕಿ, ಭಾಗಶ: ಹಾನಿಯಾಗಿರುವ ಪ್ರಕರಣಗಳಲ್ಲಿ ತ್ವರಿತವಾಗಿ ಪರಿಹಾರ ಕ್ರಮವಹಿಸಲು ಹಾಗೂ **ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೂಕ್ತ ಸಾಮಗ್ರಿ ಸಲಕರಣೆಗಳನ್ನು ಬಳಸಿ ತಾತ್ಕಾಲಿಕವಾಗಿ ಮನೆಯನ್ನು ದುರಸ್ಥಿಪಡಿಸಿ, ವಾಸಕ್ಕೆ ಅನುವು ಮಾಡಿಕೊಡುವ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ,**

**ಜಿಲ್ಲಾ ಪಂಚಾಯತ್ ರವರು ಎಲ್ಲಾ ಗ್ರಾಮ ಪಂಚಾಯ್ತಿಗಳಿಗೆ** ಸೂಕ್ತ ಸೂಚನೆಗಳನ್ನು ನೀಡುವಂತೆ ಸೂಚಿಸಲಾಯಿತು.

7. ಅತೀವೃಷ್ಠಿಯಿಂದ ರಸ್ತೆ ಸಂಪರ್ಕ ಕಡಿತವಾದ್ದಲ್ಲಿ ತಕ್ಷಣವೇ **24 ಗಂಟೆಯೊಳಗೆ ಸಂಚಾರಕ್ಕೆ ಮುಕ್ತಗೊಳಿಸುವ ಬಗ್ಗೆ ಸೂಚಿಸಲಾಗಿರುತ್ತದೆ.** ಪುನಶ್ಚೇತನ ಕಾರ್ಯವು ಸಮರೋಪಾದಿಯಲ್ಲಿ ನಡೆಯಬೇಕು ಮತ್ತು ಯಾವುದೇ ರೀತಿಯಲ್ಲಿ ವಿಳಂಬ ಮಾಡದಂತೆ ಕ್ರಮಕೈಗೊಳ್ಳಲು ಸೂಚಿಸಲಾಗಿರುತ್ತದೆ.

8. ತೀವ್ರ ಮಳೆಯಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿರುವ ಕುರಿತಂತೆ 919 ವಿದ್ಯುತ್ ಕಂಬಗಳು ಹಾನಿಗೊಂಡಿದ್ದು, ಆ ಪೈಕಿ 218 ಕಂಬಗಳನ್ನು ಪುನಶ್ಚೇತನಗೊಳಿಸಲಾಗಿದೆ. ಅದೇ ರೀತಿ 4 ಟ್ರಾನ್ಸ್‌ಫಾರ್ಮರ್‌ಗಳು ಹಾನಿಗೊಂಡಿದ್ದು, ಆ ಪೈಕಿ ಟ್ರಾನ್ಸ್ ಫಾರ್ಮರ್‌ಗಳನ್ನು ಪುನಶ್ಚೇತನಗೊಳಿಸಲಾಗಿದೆ. **ಉಳಿದಂತೆ ಬಾಕಿ ಇರುವ ಕಂಬಗಳು ಮತ್ತು ಟ್ರಾನ್ಸ್ ಫಾರ್ಮರ್‌ಗಳನ್ನು 3 ದಿನಗಳಲ್ಲಿ ಪುನಶ್ಚೇತನಗೊಳಿಸಲು ಸೂಚಿಸಲಾಗಿದೆ.** ಈ ಸಂಬಂಧವಾಗಿ **ಮೆಸ್ಕಾಂ ಇಲಾಖಾ ಅಧಿಕಾರಿಗಳಿಗೆ ಸ್ಥಳೀಯವಾಗಿ ಸಾಗಾಣಿಕೆ** ಇತ್ಯಾದಿ ಕ್ರಮಗಳಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ವತಿಯಿಂದ ಸ್ಥಳೀಯ ಗ್ರಾಮ ಪಂಚಾಯ್ತಿಗಳು ಹಾಗೂ ಇಂಜಿನೀಯರಿಂಗ್ ಇಲಾಖೆಗಳಿಗೆ ಸೂಕ್ತ ಸೂಚನೆಗಳನ್ನು ನೀಡಿ ಮೆಸ್ಕಾಂ ಸಿಬ್ಬಂದಿಗಳಿಗೆ ಸೂಕ್ತ ಸಹಕಾರವನ್ನು ನೀಡುವಂತೆ ಸೂಚಿಸಲಾಯಿತು (ಕಾರಣ ಮೆಸ್ಕಾಂ ಹತ್ತಿರ ಕೇವಲ ದೊಡ್ಡ ವಾಹನ ಇರುವುದರಿಂದ, ವಿದ್ಯುತ್ ಕಂಬಗಳನ್ನು ಚಿಕ್ಕ ಓಣಿಗಳಲ್ಲಿ ಸಾಗಿಸಲು ಸಣ್ಣ ವಾಹನಗಳು ಲಭ್ಯವಿರುವುದಿಲ್ಲವೆಂದು ಮೆಸ್ಕಾಂ ಇಂಜಿನೀಯರ್ ತಿಳಿಸಿದರು).

9. ಆಗಸ್ಟ್ ತಿಂಗಳಿನಲ್ಲಿ ಬಿದ್ದ ಮಳೆಯಿಂದಾಗಿ ಒಟ್ಟು 14 ಹೆಕ್ಟೇರ್ ತೋಟಗಾರಿಕೆ ಬೆಳೆ ಮತ್ತು 155 ಹೆಕ್ಟೇರ್ ಕೃಷಿ ಬೆಳೆಗೆ ಹಾನಿಯಾಗಿದ್ದು, **ಕೂಡಲೇ ಹಾನಿಯ ಅಂದಾಜನ್ನು ಪಡೆದು ಪರಿಹಾರ ಪಾವತಿಗೆ ಕ್ರಮವಹಿಸಲು ಸೂಚಿಸಲಾಯಿತು ಮತ್ತು ಪರಿಹಾರ ತಂತ್ರಾಂಶದಲ್ಲಿ ದಾಖಲೀಕರಣ ಮಾಡಲು ಕ್ರಮಕೈಗೊಳ್ಳಲು ಸೂಚಿಸಲಾಯಿತು.**

ಅವಗಾಹನೆಗಾಗಿ.

(ಡಾ: ಶಾಲಿನಿ ರಜನೀಶ್)<br>
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,<br>
ಯೋಜನೆ, ಕಾರ್ಯಕ್ರಮ ಸಂಯೋಜನೆ<br>
ಹಾಗೂ ಸಾಂಖ್ಯಿಕ ಇಲಾಖೆ ಹಾಗೂ<br>
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಶ್ರೀ ಮುನಿಶ್ ಮೌದ್ಗಿಲ್, ಭಾ.ಆ.ಸೇ.,<br>
ಸರ್ಕಾರದ ಕಾರ್ಯದರ್ಶಿಗಳು,<br>
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಸು)

ದಿನಾಂಕ: 07-08-2020 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಚಿಕ್ಕಮಗಳೂರು ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು ಮತ್ತು ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ನಡೆಸಿದ ವಿಡಿಯೋ ಸಂವಾದದ ನಡವಳಿಗಳು.

---

1) <u>ತುರ್ತಾಗಿ ಮಾಹಿತಿಯನ್ನು ಪಡೆಯುವ ಕುರಿತು</u>

1. ಅತಿವೃಷ್ಟಿಯಿಂದ ಜಿಲ್ಲೆಯ ಯಾವುದೇ ಭಾಗದಲ್ಲಿ ಘಟನೆ ಸಂಭವಿಸಿದ ನಂತರ ತಕ್ಷಣವೇ ಸದರಿ ಘಟನೆಯ ಕುರಿತು ಮಾಹಿತಿಯನ್ನು ಪಡೆಯುವ ಬಗ್ಗೆ ಸೂಕ್ತ ತಂಡವನ್ನು ರಚಿಸಿರುವ ಬಗ್ಗೆ ವಿವರಣೆ ಪಡೆಯಲಾಯಿತು.
2. ಇದರಂತೆ ಗ್ರಾಮ ಮಟ್ಟದಲ್ಲಿ ಸ್ಥಳೀಯ ಅಧಿಕಾರಿಗಳ ತಂಡವನ್ನು ರಚಿಸಿದ್ದು, ಸದರಿ ತಂಡವು ತಾಲ್ಲೂಕು ಮಟ್ಟದ ತಂಡದ ಮೂಲಕ ಮಾಹಿತಿಯನ್ನು ತಕ್ಷಣವೇ ಕಂಟ್ರೋಲ್ ರೂಂ ಮೂಲಕ ತಿಳಿಸಲಾಗುತ್ತದೆ ಹಾಗೂ ಜಿಲ್ಲಾ ಮಟ್ಟದಲ್ಲಿ ವಿಪತ್ತು ನಿರ್ವಹಣಾ Whats app Group ಅನ್ನು ರಚಿಸಿದ್ದು.
3. ಸದರಿ ಗ್ರೂಪ್ ನಲ್ಲಿ ಎಲ್ಲಾ ಇಲಾಖಾ ಅಧಿಕಾರಿಗಳು ಮತ್ತು ತಂಡದ ಸದಸ್ಯರು ಇರುತ್ತಾರೆ. ಯಾವುದೇ ಘಟನೆ ಸಂಭ ವಿಸಿದ ನಂತರ ತಕ್ಷಣವೇ ಮಾಹಿತಿಯನ್ನ Whats app Group ನಲ್ಲಿ ಆಯಾ ಇಲಾಖಾಧಿಕಾರಿಗಳಿಗೆ ತಲುಪುವಂತೆ ನೋಡಿಕೊಳ್ಳಲಾಗುತ್ತದೆ.
4. ಘಟನೆ ಸಂಭವಿಸಿದ ತಕ್ಷಣ ಸಂಬಂಧಿಸಿದ ಇಲಾಖಾಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಧಾವಿಸಿ ಸೂಕ್ತ ತೆರವು ಮತ್ತು ಪರಿಹಾರಾತ್ಮಕ ಕ್ರಮವನ್ನು ತಕ್ಷಣ ತೆಗೆದುಕೊಳ್ಳಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನಿರ್ದೇಶನ ನೀಡಿದರು ಹಾಗೂ ಮಾಹಿತಿ ನೀಡುವಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳುವಲ್ಲಿ ಯಾವುದೇ ವಿಳಂಬ ಆಗದಂತೆ ನಿಗಾವಹಿಸಲು ಸೂಚಿಸಲಾಯಿತು.

2) <u>ತಕ್ಷಣ ತುರ್ತಾಗಿ ಪುನಶ್ಚೇತನ (Restoration) ಮಾಡುವ ಕುರಿತು</u>

1. ಅತಿವೃಷ್ಟಿಯಿಂದ ರಸ್ತೆ ಸಂಪರ್ಕ ಕಡಿತವಾದಲ್ಲಿ ತಕ್ಷಣವೇ 24 ಗಂಟೆಯೊಳಗೆ ಸಂಚಾರಕ್ಕೆ ಮುಕ್ತಗೊಳಿಸುವ ಬಗ್ಗೆ ಚರ್ಚಿಸಲಾಯಿತು ಮತ್ತು ಇದರಂತೆ ಸಂಬಂಧಪಟ್ಟ ಇಲಾಖಾ ಅಭಿಯಂತರರು ಸೂಕ್ತ ಕ್ರಿಯಾ ಯೋಜನೆಯನ್ನು ತಯಾರಿಸಿಕೊಂಡು ತುರ್ತಾಗಿ ಬೇಕಾಗುವ ಸಾಧನ ಸಲಕರಣೆಗಳನ್ನು ಮುಂಜಾಗ್ರತೆಯಾಗಿ ಸಂಗ್ರಹಿಸಿಟ್ಟುಕೊಂಡು ಆ ಸ್ಥಳದಲ್ಲಿ ಬಳಕೆಗೆ ಅನುವಾಗುವಂತೆ ಕ್ರಮವಹಿಸಲು ಸೂಚಿಸಿದರು.
2. ಪುನಶ್ಚೇತನ ಕಾರ್ಯವು ಸಮರೋಪಾದಿಯಲ್ಲಿ ನಡೆಯಬೇಕು ಮತ್ತು ಯಾವುದೇ ರೀತಿಯಲ್ಲಿ ವಿಳಂಬವಾಗುವಂತಿಲ್ಲ.
3. ಸಂಬಂಧಪಟ್ಟ ಕಿರಿಯ ಅಭಿಯಂತರರು ಮತ್ತು ಸಹಾಯಕ ಅಭಿಯಂತರರುಗಳು ತಾಲ್ಲೂಕು ಕೇಂದ್ರದಲ್ಲಿ ವಾಸ್ತವ್ಯ ಮಾಡದೆ ಅತಿವೃಷ್ಟಿ ಸಂದರ್ಭದಲ್ಲಿ ತಮ್ಮ ಕಾರ್ಯಕ್ಷೇತ್ರ ವ್ಯಾಪ್ತಿಯ 10 ಕಿ.ಮೀ. ವ್ಯಾಪ್ತಿಯೊಳಗಡೆ ವಾಸ್ತವ್ಯ ಇರುವಂತೆ ಸೂಚನೆ ನೀಡಲಾಯಿತು.
4. ಅತಿ ತುರ್ತಾಗಿ ಪುನಶ್ಚೇತನ ಕಾರ್ಯವನ್ನು ಮುಂಗಡವಾಗಿ ಕಾರ್ಯಗತಗೊಳಿಸಿ ನಂತರ ನಿಯಮಾನುಸಾರ ಬಿಲ್ ಅನ್ನು ಪಾವತಿಗಾಗಿ ಸಲ್ಲಿಸಲು ಸೂಚಿಸಲಾಯಿತು.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಈ ಬಗ್ಗೆ ಸಂಬಂಧಿಸಿದ ಇಲಾಖಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, PRED ಮತ್ತು PWD)**

3) **ಕಳೆದ ವರ್ಷ ಸಂಭವಿಸಿದ ಭೂಕುಸಿತ ಪ್ರದೇಶಗಳ ಘಟನೆ ಆಧರಿಸಿ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವ ಕುರಿತು**

1. ಮೂಡಿಗೆರೆ ತಾಲ್ಲೂಕಿನ ಕಳಸ, ಬಾಳೂರು ವ್ಯಾಪ್ತಿಯಲ್ಲಿ ಅಲೇಖಾನ್ ಹೊರಟ್ಟಿ, ಮಧುಗುಂಡಿ, ದುರ್ಗದಹಳ್ಳಿ, ಬಲಿಗೆ, ಹೆಮ್ಮಕ್ಕಿ, ಕೋಟೆಮಕ್ಕಿ ಮುಂತಾದ ಪ್ರದೇಶಗಳಲ್ಲಿ ಭೂಕುಸಿತ ಸಂಭವಿಸಿದ್ದು, ಈ ಪ್ರದೇಶದಲ್ಲಿ ಈ ವರ್ಷ ಪರಿಸ್ಥಿತಿಯನ್ನು ಅವಲೋಕಿಸಿ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಲಾಯಿತು.
2. ಈ ಮೇಲಿನ ಪ್ರದೇಶದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯ ಮಾಡುವುದು ಮತ್ತು ಅವರಿಗೆ ತಿಳುವಳಿಕೆ ನೀಡಿ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳುವುದು.
3. ಅರಣ್ಯ ಇಲಾಖೆ ವತಿಯಿಂದ ಅರಣ್ಯೀಕರಣಕ್ಕೆ ಹೆಚ್ಚು ಒತ್ತು ನೀಡಿ ಸಸಿ ನೆಡುವ ಕಾರ್ಯಕ್ಕೆ ಕ್ರಿಯಾಯೋಜನೆ ರೂಪಿಸವುದು.

4) **ಚಾರ್ಮಾಡಿ ಘಾಟ್ ರಸ್ತೆ ಸಂಚಾರ ನಿರ್ಬಂಧಿಸುವ ಕುರಿತು**

1. ಕಳೆದ 2 ದಿವಸಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಗೆ ಚಾರ್ಮಾಡಿ ಘಾಟ್ ರಸ್ತೆಯಲ್ಲಿ ಕೆಲವು ಕಡೆ ಭೂಕುಸಿತ ಉಂಟಾಗಿದ್ದು, ವಾಹನಗಳ ಸಂಚಾರಕ್ಕೆ ಸೂಕ್ತವಾಗಿರುವುದಿಲ್ಲ ಎಂಬ ಅಂಶವನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಗಮನಕ್ಕೆ ತರಲಾಯಿತು. ಇದರಂತೆ ಸಂಬಂಧಪಟ್ಟ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ವರದಿ ಪಡೆದಿರುವ ವಿಚಾರವನ್ನು ಮಾನ್ಯ ಕಾರ್ಯದರ್ಶಿಗಳ ಗಮನಕ್ಕೆ ತರಲಾಯಿತು.
2. ಚಾರ್ಮಾಡಿ ಘಾಟ್ ಮುಖಾಂತರ ಮಂಗಳೂರಿಗೆ ತೆರಳುವ ರಸ್ತೆಯಲ್ಲಿ ಈ ದಿನದಿಂದ ದಿನಾಂಕ: 11-08-2020 ರ ಮಧ್ಯರಾತ್ರಿ 12.00 ಗಂಟೆಯವರೆಗೆ ಸಂಪರ್ಕವನ್ನು ನಿಷೇಧಿಸುತ್ತಿರುವುದಾಗಿ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು. ಈ ರೀತಿ ರಸ್ತೆ ಬಂದ್ ಮಾಡುವ ಬಗ್ಗೆ ಹಾಗೂ ಪರ್ಯಾಯ ರಸ್ತೆ ಬಗ್ಗೆ ತುರ್ತಾಗಿ ಮೀಡಿಯಾ ಬುಲೆಟಿನ್ ನೀಡುವುದು ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು.

5) **ತ್ವರಿತ Rescue Operation ವ್ಯವಸ್ಥೆ**

1. ಪ್ರಸ್ತುತ ಚಿಕ್ಕಮಗಳೂರು ಜಿಲ್ಲೆಗೆ ಮುಂಜಾಗ್ರತಾ ಕ್ರಮವಾಗಿ 30 ಜನರ NDRF ತಂಡವನ್ನು ನಿಯೋಜಿಸಿಕೊಳ್ಳಲಾಗಿದೆ.
2. ಸ್ಥಳೀಯವಾಗಿ Adventure Club ಗಳು ಸ್ವಯಂಪ್ರೇರಿತವಾಗಿ ರಕ್ಷಣಾ ಕ್ರಮಕ್ಕೆ ಮುಂದೆ ಬಂದಿದ್ದು, ಇವರ ಸೇವೆಯನ್ನು ಬಳಸಿಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ.
3. ಸ್ಥಳೀಯವಾಗಿ ಅರಣ್ಯ, Mescom, BSNL, ಇತರ ಇಲಾಖೆ ಸಿಬ್ಬಂದಿಗಳು ಕಾರ್ಯನಿರತರಾಗಿರುತ್ತಾರೆ.

6) **ಮನೆಗಳ ಪರಿಹಾರ**

1. ಕಳೆದ ಸಾಲಿನಲ್ಲಿ ಹಾನಿಗೊಂಡ ವಾಸ್ತವ್ಯದ ಮನೆಗಳಿಗೆ ರಾಜೀವ್ ಗಾಂಧಿ ನಿಗಮದಿಂದ ಪರಿಹಾರವನ್ನು ಬಿಡುಗಡೆ ಮಾಡಲು ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ತುರ್ತಾಗಿ ನಿಗಮದಿಂದ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
2. ಈ ಸಾಲಿನ ಮಳೆಯಿಂದಾಗಿ ಹಾನಿಗೊಂಡಿರುವ ಮನೆಗಳನ್ನು ಎ, ಬಿ, ಸಿ ವರ್ಗವಾರು ವರ್ಗೀಕರಿಸಿ ಅನುಗುಣವಾಗಿ RGRHCL ತಂತ್ರಾಂಶದ ಮೂಲಕ ಪರಿಹಾರವನ್ನು ನೀಡುವ ಕ್ರಮವಹಿಸಲು ಸೂಚಿಸಿದರು.
3. ಜೂನ್, ಜುಲೈ ತಿಂಗಳಲ್ಲಿ ಜಿಲ್ಲೆಯಲ್ಲಿ ಒಟ್ಟು 186 ಮನೆಗಳು ಹಾನಿಯಾಗಿದ್ದು, ಆಗಸ್ಟ 1 ರಿಂದ 108 ಮನೆಗಳು ಹಾನಿಯಾಗಿರುತ್ತವೆ.
4. ಹಾನಿಗೊಂಡಿರುವ ಮನೆಗಳ ಪೈಕಿ ಭಾಗಶಃ ಹಾನಿಯಾಗಿರುವ ಪ್ರಕರಣಗಳಲ್ಲಿ ತ್ವರಿತವಾಗಿ ಪರಿಹಾರ ಕ್ರಮವಹಿಸಲು ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೂಕ್ತ ಸಾಮಗ್ರಿ ಸಲಕರಣೆಗಳನ್ನು ಬಳಸಿ ತಾತ್ಕಾಲಿಕವಾಗಿ ಮನೆಯನ್ನು ದುರಸ್ಥಿಪಡಿಸಿ ವಾಸಕ್ಕೆ ಅನುವು ಮಾಡಿಕೊಡುವ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ ರವರು ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ಸೂಚಿಸಲಾಯಿತು

7) <u>MESCOM ಕ್ರಮಗಳು</u>

1. ತೀವ್ರ ಮಳೆಯಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಿರುವ ಕುರಿತಂತೆ 919 ಕಂಬಗಳು ಹಾನಿಗೊಂಡಿದ್ದು, ಆ ಪೈಕಿ 218 ಕಂಬಗಳನ್ನು ಪುನಶ್ಚೇತನಗೊಳಿಸಲಾಗಿದೆ. ಅದೇ ರೀತಿ 4 ಟ್ರಾನ್ಸ್ ಫಾರ್ಮರ್ ಗಳು ಹಾನಿಗೊಂಡಿದ್ದು, ಆ ಪೈಕಿ ಟ್ರಾನ್ಸ್ ಫಾರ್ಮರ್ ಗಳನ್ನು ಪುನಶ್ಚೇತನಗೊಳಿಸಲಾಗಿದೆ. ಉಳಿದಂತೆ ಬಾಕಿ ಇರುವ ಕಂಬಗಳು ಮತ್ತು ಟ್ರಾನ್ಸ್ ಫಾರ್ಮರ್ ಗಳನ್ನು 3 ದಿನಗಳಲ್ಲಿ ಪುನಶ್ಚೇತನಗೊಳಿಸಲು ಸೂಚಿಸಲಾಗಿದೆ.

-3-

2. ತೀವ್ರ ಮಳೆಯಿಂದ 373 ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ತೊಂದರೆಯಾಗಿದ್ದು, ಆ ಪೈಕಿ 189 ಗ್ರಾಮಗಳ ಸಂಪರ್ಕವನ್ನು ಪುನಶ್ಚೇತನಗೊಳಿಸಲಾಗಿದೆ. ಬಾಕಿ ಉಳಿದಿರುವ ಗ್ರಾಮಗಳ ವಿದ್ಯುತ್ ಸಂಪರ್ಕವನ್ನು 3 ದಿನಗಳೊಳಗೆ ಪುನಶ್ಚೇತನಗೊಳಿಸಲು ಸೂಚಿಸಲಾಗಿದೆ.
3. ಈ ಸಂಬಂಧವಾಗಿ ಮೆಸ್ಕಾಂ ಇಲಾಖಾ ಅಧಿಕಾರಿಗಳಿಗೆ ಸ್ಥಳೀಯವಾಗಿ ಸಾಗಾಣಿಕೆ ಇತ್ಯಾದಿ ಕ್ರಮಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,ಜಿಲ್ಲಾ ಪಂಚಾಯಿತಿ ವತಿಯಿಂದ ಸ್ಥಳೀಯ ಗ್ರಾಮ ಪಂಚಾಯಿತಿಗಳು ಹಾಗೂ ಇಂಜಿನಿಯರಿಂಗ್ ಇಲಾಖೆಗಳಿಗೆ ಸೂಕ್ತ ಸೂಚನೆಗಳನ್ನು ನೀಡಿ ಮೆಸ್ಕಾಂ ಸಿಬ್ಬಂದಿಗಳಿಗೆ ಸೂಕ್ತ ಸಹಕಾರವನ್ನು ನೀಡುವಂತೆ ಸೂಚಿಸಲಾಯಿತು.

8) **BSNL ಸಂಪರ್ಕ**

ದೂರ ಸಂಪರ್ಕಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ಹಾಗೂ ಮೂಡಿಗೆರೆ ತಾಲ್ಲೂಕು ವ್ಯಾಪ್ತಿಯ ಕೆಲವು ಭಾಗದಲ್ಲಿ OFC ಮಾರ್ಗ ಹಾನಿಗೊಂಡಿದ್ದು, ಪುನಶ್ಚೇತನ ಕಾಮಗಾರಿ ಪ್ರಗತಿಯಲ್ಲಿರುವುದಾಗಿ ತಿಳಿಸಿದ ಮೇರೆ ಕೂಡಲೇ ಪುನಶ್ಚೇತನಗೊಳಿಸಲು, ಈ ಬಗ್ಗೆ ಅವಶ್ಯಾನುಸಾರ ಜಿಲ್ಲಾಡಳಿತದಿಂದ ಸಹಕಾರವನ್ನು ಪಡೆದುಕೊಳ್ಳುವಂತೆ ಸೂಚಿಸಲಾಯಿತು.

9) **ಪುನಶ್ಚೇತನ ಕಾಮಗಾರಿಗಳ ಪ್ರಗತಿ**

2019-20 ನೇ ಸಾಲಿನ ಅತಿವೃಷ್ಟಿಯಿಂದ ಸಂಭವಿಸಿದ ಸಾರ್ವಜನಿಕ ಆಸ್ತಿ ಪಾಸ್ತಿಗಳ ಕಾಮಗಾರಿ ಕುರಿತಂತೆ ಜಿಲ್ಲೆಗೆ ರೂ.20.00 ಕೋಟಿ ಅನುದಾನವನ್ನು ನೀಡಲಾಗಿದ್ದು, ಸದರಿ ಅನುದಾನದಲ್ಲಿ 851 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಸದರಿ ಕಾಮಗಾರಿಗಳ ಬಾಬ್ತು ಅಂತಿಮ ಬಿಲ್ ಸಲ್ಲಿಕೆಗೆ ಬಾಕಿ ಇದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯವರು ಸೂಕ್ತ ಪ್ರಸ್ತಾವನೆಯನ್ನು ಪೂರಕ ದಾಖಲೆಯೊಂದಿಗೆ ಕೂಡಲೇ ಸಲ್ಲಿಸಲು ಹಾಗೂ ಪೂರ್ಣಗೊಳಿಸಲು ಬಾಕಿ ಇರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸಲು ಸೂಚಿಸಲಾಯಿತು.

ಬಾಕಿ ಇರುವ ಬಿಲ್ ಗಳನ್ನು ಒಂದು ವಾರದಲ್ಲಿ ಸಲ್ಲಿಸುವಂತೆ, ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ಕ್ರಮವಹಿಸಲು ಸೂಚಿಸಲಾಯಿತು.

10) **ಮಾನವ ಪ್ರಾಣ ಹಾನಿ**

ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಜೂನ್ ಮಾಹೆಯಲ್ಲಿ ಸಿಡಿಲು ಬಡಿದು 4 ವ್ಯಕ್ತಿಗಳು ಮೃತರಾಗಿದ್ದು, ಮೃತರ ವಾರಸುದಾರರಿಗೆ ತಲಾ ರೂ.5.00 ಲಕ್ಷ ಪರಿಹಾರ ಧನವನ್ನು ನೀಡಲಾಗಿದೆ ಮತ್ತು ಇತ್ತೀಚೆಗೆ ಆಗಸ್ಟ ತಿಂಗಳಲ್ಲಿ ಬೀಳುತ್ತಿರುವ ಮಳೆಯಿಂದಾಗಿ ಯಾವುದೇ ಮಾನವ ಹಾನಿ ಸಂಭವಿಸಿರುವುದಿಲ್ಲ.

ಅತಿವೃಷ್ಟಿ ಹಿನ್ನೆಲೆಯಲ್ಲಿ ಜಲಾವೃತ ಹಾಗೂ ಭೂಕುಸಿತಗಳು ಸಂಭವಿಸಬಹುದಾದ ಪ್ರದೇಶಗಳ ಬಗ್ಗೆ ನಿಗಾ ವಹಿಸಿ ಜನ ಜಾನುವಾರುಗಳನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸುವ ಬಗ್ಗೆ, ಸೂಕ್ತ ಸ್ಥಳಗಳನ್ನು ಮತ್ತು ಆಹಾರ, ಆರೋಗ್ಯ ಮತ್ತು ಆಶ್ರಯವನ್ನು ತಾತ್ಕಾಲಿಕವಾಗಿ ಒದಗಿಸುವ ಬಗ್ಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸುತ್ತಾ, ಒಟ್ಟಾರೆಯಾಗಿ ಪರಿಸ್ಥಿತಿಯನ್ನು ಸಮರ್ಪಕವಾಗಿ ಮತ್ತು ತ್ವರಿತವಾಗಿ ನಿಭಾಯಿಸುವಂತೆ ಎಲ್ಲಾ ಅಧಿಕಾರಿಗಳಿಗೆ ಸೂಚಿಸುತ್ತಾ, ವಂದನೆಗಳೊಂದಿಗೆ ಸಂವಾದವನ್ನು ಮುಕ್ತಾಯಗೊಳಿಸಲಾಯಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ ಹಾಗೂ
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಯೋಜನೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಬೆಂಗಳೂರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.

**ಶ್ರೀ ಮನೋಜ ಜೈನ್ ಭಾ.ಆ.ಸೇ ವಿಶೇಷ ಆಯುಕ್ತರು ಯೋಜನೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:07-08-2020 ರಂದು ಹಾವೇರಿ ಜಿಲ್ಲೆಯಲ್ಲಿ ಮಳೆ ಹಾನಿಯ ಬಗ್ಗೆ ಕ್ರಮಕೈಗೊಳ್ಳುವ ಕುರಿತು ನಡೆದ ಸಭೆಯ ನಡಾವಳಿ.**

ಸಭೆಗೆ ಹಾಜರಿದ್ದವರು:
ಹಾಜರಾತಿ ಪುಸ್ತಕದಲ್ಲಿದಂತೆ

ಜಿಲ್ಲಾಧಿಕಾರಿರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಮಾನ್ಯ ಶ್ರೀ ಮನೋಜ ಜೈನ್ (ಭಾ.ಆ.ಸೇ) ವಿಶೇಷ ಆಯುಕ್ತರು ಯೋಜನೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,ಬೆಂಗಳೂರು ಇವರನ್ನು ಸ್ವಾಗತಿಸಿದರು.

ಜಿಲ್ಲೆಯಲ್ಲಿ ಸುರಿಯುತ್ತಿರುವ ಮಳೆಯಿಂದ ಹಾನಿಯಾಗಿರುವ ಕೃಷಿ ಬೆಳೆಯ ಕುರಿತು ಚರ್ಚಿಸುತ್ತಾ, ಇದುವರೆಗೂ ಆದ ಮಳೆಯಿಂದ ಹಾನಿ ಸಂಭವಿಸಿರುವ ಬಗ್ಗೆ ಕೃಷಿ ಇಲಾಖೆ ನೇತೃತ್ವದಲ್ಲಿ ಕಂದಾಯ ಇಲಾಖೆಯು ಸೇರಿಕೊಂಡು ಜಂಟಿ ಸರ್ವೆ ನಡೆಸುವಂತೆ ಸೂಚಿಸಿದರು. ಮತ್ತು ಅದೇ ದಿನ ನಿಯಮಾನುಸಾರ ಪರಿಹಾರ ವಿತರಿಸುವಂತೆ ಹಾಗೂ ವಿತರಿಸಿದ ಜಿ.ಪಿ.ಎಸ್. ಆಪ್ ನಲ್ಲಿ ಫೋಟೋ ತೆಗೆದು ಮಾಹಿತಿ ನೀಡುವಂತೆ ಸಹ ಸೂಚಿಸಿದರು.

ಯೂರಿಯಾ ರಾಸಾಯನಿಕ ಗೊಬ್ಬರವನ್ನು ಕೊರತೆಯಾಗದಂತೆ ಪ್ರತಿ ತಾಲ್ಲೂಕಿಗೆ ಸಹಕಾರಿ ಸಂಘಗಳ ಮೂಲಕ ಗೊಬ್ಬರ ಹಂಚಿಕೆ ಮಾಡುವಂತೆ ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಇವರಿಗೆ ಸೂಚಿಸಲಾಯಿತು.

ವರದಾ, ಧರ್ಮ, ತುಂಗಾಭದ್ರ, ಕುಮುದ್ವತಿ ನದಿಗಳ ನೀರಿನ ಮಟ್ಟವನ್ನು ಪ್ರತಿನಿತ್ಯ ಅವಲೋಕಿಸುತ್ತಿದ್ದು, ನದಿಗಳು ಅಪಾಯದ ಮಟ್ಟದಲ್ಲಿ ಹರಿಯಲು ಆರಂಭಿಸಿದಾಗ ಕೂಡಲೇ ತಗ್ಗಿನ ಪ್ರದೇಶದಲ್ಲಿರುವ ಜನರನ್ನು ಈಗಾಗಲೇ ಗುರುತಿಸಿರುವ ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲು ಕ್ರಮವಹಿಸುವಂತೆ ಹಾಗೂ ಈ ಕಾಳಜಿ ಕೇಂದ್ರಗಳ ಸ್ಥಿತಿಯ ಬಗ್ಗೆ ವರದಿ ನೀಡುವಂತೆ ತಹಶೀಲ್ದಾರ್ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ. ಮತ್ತು ಜಿಲ್ಲಾ ಪಂಚಾಯತ್ ಇವರಿಗೆ ಸೂಚಿಸಲಾಯಿತು. ನದಿ ಪಾತ್ರದಲ್ಲಿ ಬರುವ ಗ್ರಾಮಗಳನ್ನು ಗುರುತಿಸಿ, ನದಿ ತೀರದಲ್ಲಿ ವಾಸಿಸುವ ಜನರಿಗೆ ಡಂಗುರ ಸಾರುವ ಮೂಲಕ ಮುನ್ಸೂಚನೆಯನ್ನು ನೀಡುವಂತೆ ಸೂಚಿಸಿದರು.

ಸದರಿ ಸಭೆಯಲ್ಲಿ ಇಲ್ಲಿಯವರೆಗೆ ಜಿಲ್ಲೆಯಾದ್ಯಂತ ಮಳೆ ಹಾನಿಗೆ ಒಳಗಾಗಿ ಸಂಪರ್ಕ ಕಡಿತವಾಗಿರುವ ಕೂಡಲ ನಾಗನೂರು ರಸ್ತೆಯ ಸೇತುವೆ ಮೇಲೆ ವರದಾ ನದಿಯ ನೀರು ಹರಿಯುತ್ತಿದ್ದು, ಈ ಬಗ್ಗೆ ಎಚ್ಚರಿಕೆ ಕ್ರಮ ಅಳವಡಿಸಿ ರಾತ್ರಿ ಯಾರೂ ಆ ಸೇತುವೆ ಮೇಲೆ ಸಂಚರಿಸದಂತೆ ನೋಡಿಕೊಳ್ಳುವಂತೆ ತಹಶೀಲ್ದಾರ್ ಹಾಗೂ ಕಾರ್ಯಪಾಲಕ ಅಭಿಯಂತರರು ಪಿ.ಡಬ್ಲ್ಯೂ.ಡಿ ಇವರು ಸಭೆಗೆ ಗೈರು ಹಾಜರಿದ್ದರಿಂದ ಇವರಿಗೆ ಕಾರಣ ಕೇಳಿ ನೋಟಿಸ್ ನೀಡಲು ಅಪರ ಜಿಲ್ಲಾಧಿಕಾರಿಯವರಿಗೆ ಸೂಚಿಸಲಾಯಿತು.

ಪ್ರಸ್ತುತ ಜಿಲ್ಲೆಯಲ್ಲಿ ಆದ ಮಳೆಯಿಂದ ಇಲ್ಲಿಯವರೆಗೆ ಒಟ್ಟು 387 ಮನೆಗಳು ಭಾಗಶಃ ಹಾನಿಯಾಗಿರುವ ಬಗ್ಗೆ ತಹಶೀಲ್ದಾರ್ ರು ವರದಿ ನೀಡಿರುವ ಹಿನ್ನಲೆಯಲ್ಲಿ ಹಾನಿಯಾಗಿರುವ ಸ್ಥಳಗಳಿಗೆ, ತಹಶೀಲ್ದಾರ್ ರವರು, ಗ್ರಾಮಲೆಕ್ಕಿಗರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಮಹಜರ್ ಮಾಡಿ, ಜಿ.ಪಿ.ಎಸ್. ಆಪ್ ಬಳಸಿ ಹಾನಿಯಾದ ಮನೆಯ ಪಕ್ಕದಲ್ಲಿ ತಹಶೀಲ್ದಾರ್ ರವರು ಫಲಾನುಭವಿಗೆ ಚೆಕ್ ನೀಡುವ ಫೋಟೋ ದೊಂದಿಗೆ ಪರಿಹಾರ ಧನವನ್ನು ವಿತರಿಸಿದ ಬಗ್ಗೆ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ವರದಿ ಸಲ್ಲಿಸಲು ಸೂಚಿಸಿದರು.

ಹಾಜರಿದ್ದ ಸಣ್ಣ ಮತ್ತು ಬೃಹತ್ ನೀರಾವರಿ ಇಲಾಖೆಯ ಇಂಜಿನೀಯರ್ ರವರಿಗೆ ಎಷ್ಟು ಕೆರೆಗಳು ಹಾನಿಗೊಳಗಾಗಿವೆ ಎಂಬ ಮಾಹಿತಿಯನ್ನು ದಿ:08-08-2020 ರ ಸಂಜೆ 5-00 ಗಂಟೆಯೊಳಗೆ ಜಿಲ್ಲಾಧಿಕಾರಿಯವರಿಗೆ ನೀಡುವಂತೆ ಸೂಚಿಸಲಾಯಿತು.

ತಾಲ್ಲೂಕಿನಾದ್ಯಂತ ನದಿ, ಹೊಳೆ, ಹಳ್ಳ-ಕೊಳ್ಳಗಳು ಈ ಹಿಂದೆ ತುಂಬಿ ಹರಿದಿರುವ ಬಗ್ಗೆ ಮಾಹಿತಿ ಪಡೆದು ತಹಶೀಲ್ದಾರ್ ಗಳು ರಸ್ತೆ, ಮನೆ ಮುಳುಗಡೆ ಆಗುವ ಪ್ರದೇಶಗಳನ್ನು ಗುರುತಿಸಿಕೊಳ್ಳುವಂತೆ ಸೂಚಿಸಿದರು.

ದಿನಾಂಕ:08-08-2020ರ ಸಂಜೆ 5-00 ಗಂಟೆಯೊಳಗೆ ಪಿ.ಡಬ್ಲ್ಯೂ.ಡಿ. ಹಾಗೂ ಜಿಲ್ಲಾ ಪಂಚಾಯತ್ ರಸ್ತೆಗಳು ಮಳೆಯಿಂದ ಹಾನಿಯಾಗಿ ಎಷ್ಟು ಊರುಗಳಲ್ಲಿ ಸಂಪರ್ಕ ಕಡಿತಗೊಂಡಿವೆ ಎಂಬ ಮಾಹಿತಿಯನ್ನು ಜಿಲ್ಲಾಧಿಕಾರಿಯವರಿಗೆ ನೀಡುವಂತೆ ಸೂಚಿಸಿದರು.

( ಮನೋಜ ಜೈನ್ ಭಾ.ಆ.ಸೇ)

ಯೋಜನೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಬೆಂಗಳೂರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ: ಪೌನಿ/ವರದಿ/ಇತರೆ/ಸಿಆರ್.06/2019-20 ದಿನಾಂಕ: 10.08.2020

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಆಡಳಿತ ಸುಧಾರಣೆ)
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ನದಿ ಪಾತ್ರದಲ್ಲಿ ಪ್ರವಾಹಕ್ಕೆ ಒಳಗಾಗಬಹುದಾದ ಗ್ರಾಮಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ದಿನಾಂಕ: 07.08.2020ರ ಭೇಟಿಯ ವರದಿ.

ಉಲ್ಲೇಖ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 02 ಇಸಪ 2019 ದಿನಾಂಕ: 03.04.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ನದಿ ಪಾತ್ರದಲ್ಲಿ ಪ್ರವಾಹಕ್ಕೆ ಒಳಗಾಗಬಹುದಾದ ಗ್ರಾಮಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ದಿನಾಂಕ: 07.08.2020ರಂದು ಭೇಟಿ ನೀಡಿ ನಡೆಸಿದ ಪರಿಶೀಲನಾ ವರದಿಯನ್ನು ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ

(ಬಿ.ಬಿ.ಕಾವೇರಿ, ಭಾ.ಆ.ಸೇ)
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಪ್ರತಿಯನ್ನು:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಬೆಂಗಳೂರು.

ದಿನಾಂಕ: 07.08.2020ರಂದು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ನದಿ ಪಾತ್ರದಲ್ಲಿ ಪ್ರವಾಹಕ್ಕೆ ಒಳಗಾಗಬಹುದಾದ ಗ್ರಾಮಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಭೇಟಿ ನೀಡಿ ನಡೆಸಿದ ಪರಿಶೀಲನಾ ವರದಿ

| ಕ್ರ.ಸಂ: | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಚಾಮರಾಜನಗರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಶ್ರೀಮತಿ ಬಿ.ಬಿ.ಕಾವೇರಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ |
| 3 | ಪ್ರವಾಸ ಕೈಗೊಂಡ ದಿನಾಂಕ | 07-08-2020 |

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಕಬಿನಿ ನದಿ ಪಾತ್ರದ 2019-20ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ದಾಸನಪುರ, ಹಳೇ ಅಣ್ಣಗಳ್ಳಿ, ಹಳೇ ಹಂಪಾಪುರ, ಮುಳ್ಳೂರು ಮತ್ತು ಎಡಕುರಿಯ ಗ್ರಾಮಗಳಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಭೇಟಿ ನೀಡಲಾಯಿತು. ಕಾವೇರಿ ನೀರಾವರಿ ನಿಗಮ ನಿಯಮಿತ, ಕೊಳ್ಳೇಗಾಲ ಉಪವಿಭಾಗದ ಕಾರ್ಯಪಾಲಕ ಅಭಿಯಂತರರು ದಿನಾಂಕ: 06.08.2020ರಂದು 50,000 ಕ್ಯುಸೆಕ್ಸ್ ಮತ್ತು ದಿನಾಂಕ: 07.08.2020ರಂದು 60,000 ಕ್ಯುಸೆಕ್ಸ್ ನೀರನ್ನು ಕಬಿನಿ ಜಲಾಶಯದಿಂದ ಬಿಡಲಾಗಿರುತ್ತದೆ, ಹಾಗೂ ಕೆ.ಆರ್.ಎಸ್ ಜಲಾಶಯದಿಂದ ನೀರು ಬಿಡಲಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಗ್ರಾಮಗಳಲ್ಲಿ ಪೂರ್ಣ ಮತ್ತು ತೀವ್ರ ಜಲಾವೃತವಾಗಿ ಹಾನಿಯಾಗಿರುವ ಮನೆಗಳ ಬಗ್ಗೆ ವಿಚಾರಿಸಲಾಯಿತು. ಹಾನಿಗೊಳಗಾದ ಫಲಾನುಭವಿಗಳಿಗೆ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ವತಿಯಿಂದ 3ನೇ ಕಂತಿನ ಪರಿಹಾರ ಮೊತ್ತ ವಿಳಂಬವಾಗಿ ಬಿಡುಗಡೆಯಾಗಿರುತ್ತದೆ ಎಂದು ಫಲಾನುಭವಿಗಳು ತಿಳಿಸಿರುತ್ತಾರೆ. ಎನ್.ಡಿ.ಆರ್.ಎಫ್ ಅನುದಾನದಿಂದ ದುರಸ್ಥಿ ಮಾಡಲಾದ ಅಂಗನವಾಡಿ ಶಾಲೆ ಕಟ್ಟಡಗಳಿಗೆ ಭೇಟಿ ನೀಡಲಾಯಿತು.

ಚಾಮರಾಜನಗರ ಜಿಲ್ಲಾ ಮಟ್ಟದ ಮತ್ತು ಕೊಳ್ಳೇಗಾಲ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಗಿ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಯಿತು.

1) ಕೊಳ್ಳೇಗಾಲ ತಾಲ್ಲೂಕಿನ ಗ್ರಾಮಗಳಲ್ಲಿ ಮೂಲ ಸೌಕರ್ಯಗಳಾದ ಗ್ರಾಮೀಣ ರಸ್ತೆ, ಸೇತುವೆ ಮತ್ತು ವಿದ್ಯುತ್ ಸರಬರಾಜು (ಕಂಬಗಳು, ಟ್ರಾನ್ಸ್‌ಫಾರ್ಮರ್ಸ್) ಕುರಿತಾಗಿ ಕ್ರಮವಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಲಾಖೆ, ಲೋಕೋಪಯೋಗಿ ಇಲಾಖೆ ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಕೊಳ್ಳೇಗಾಲ ಉಪವಿಭಾಗ ರವರಿಗೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಯಿತು.
2) ಶಾಲೆಗಳು, ಅಂಗನವಾಡಿಗಳು ಈಗಾಗಲೇ ದುರಸ್ಥಿಯಾಗಿದ್ದು ಪುನಃ ಪ್ರವಾಹ ನೀರು ಬಂದು ದಾಖಲೆಗಳು ಮತ್ತು ಸಾಮಗ್ರಿಗಳು ಹಾನಿಗೊಳಗಾಗುವ ಸಾಧ್ಯತೆಗಳಿದ್ದು, ಈ ಬಗ್ಗೆ

ಮುಂಜಾಗ್ರತಾ ಕ್ರಮವಹಿಸಲು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರಿಗೆ ಸೂಚಿಸಲಾಯಿತು.

3) ಕಾವೇರಿ ನದಿ ಪಾತ್ರದ ಮುಳಗಡೆಯಾಗಬಹುದಾದ ಗ್ರಾಮಗಳಲ್ಲಿ ಬೆಳೆಗಳಾದ ರಾಗಿ, ಕಬ್ಬು, ಮುಸುಕಿನ ಜೋಳ ಇತ್ಯಾದಿ ಕೃಷಿ/ ತೋಟಗಾರಿಕೆ ಬೆಳೆಗಳ ಬಗ್ಗೆ ಕೃಷಿ ಮತ್ತು ಕಂದಾಯ ಇಲಾಖೆಯಿಂದ ಜಿ.ಪಿ.ಎಸ್ ಮುಖಾಂತರ ಜಂಟಿ ಸರ್ವೇ ಮಾಡಿ ಛಾಯಾಚಿತ್ರಗಳನ್ನು ಮುನ್ನೆಚ್ಚರಿಕೆ ಕ್ರಮವಾಗಿ ಪಡೆಯಲು ಸೂಚಿಸಲಾಯಿತು.

4) ಕೊಳ್ಳೆಗಾಲ ತಾಲ್ಲೂಕಿನ ದಾಸನಪುರ, ಹಳೇ ಅಣ್ಣಗಳ್ಳಿ, ಹಳೇ ಹಂಪಾಪುರ, ಮುಳ್ಳೂರು, ಎಡಕುರಿಯ, ಧನಗೆರೆ ಮತ್ತು ಹರಳೆ ಗ್ರಾಮಗಳ ಗ್ರಾಮಸ್ಥರಿಗೆ ಕೊಳ್ಳೇಗಾಲದ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ವಿದ್ಯಾರ್ಥಿನಿಯಲಗಳಲ್ಲಿ ಅಗತ್ಯ ಸಿಬ್ಬಂದಿಗಳನ್ನು ನೇಮಿಸಿ ಪರಿಹಾರ ಕೇಂದ್ರಗಳನ್ನು ಕೋವಿಡ್-19 ಮುಂಜಾಗ್ರತಾ ಕ್ರಮಗಳನ್ನೊಳಗೊಂಡಂತೆ ವಹಿಸಿ ಸ್ಥಾಪಿಸಲು ಸೂಚಿಸಲಾಯಿತು.

5) ಪರಿಹಾರ ಕೇಂದ್ರಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಿ ಅಗತ್ಯ ದಾಖಲೆಗಳನ್ನು ನಿರ್ವಹಿಸಲು ಸೂಚಿಸಲಾಯಿತು.

   a) ಪ್ರವಾಹದಿಂದ ಜಲಾವೃತವಾಗಬಹುದಾದ ಗ್ರಾಮಗಳ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಿ, ಸದರಿ ಕೇಂದ್ರಗಳಲ್ಲಿ ಅಗತ್ಯವಾದ ಸೌಲಭ್ಯಗಳಾದ ಉತ್ತಮ ಗುಣಮಟ್ಟದ ಆಹಾರ, ಶೌಚಾಲಯ, ಪೋಲೀಸ್ ಬಂದೋಬಸ್ತ್, ಆರೋಗ್ಯ ತಪಾಸಣಾ ಸೌಲಭ್ಯ, ವಸತಿ, ಹೊದಿಕೆ, ಕುಡಿಯುವ ನೀರು, ಇನಿತರ ಸೌಲಭ್ಯಗಳನ್ನು ಒದಗಿಸುವುದು.

   b) ಪರಿಹಾರ ಕೇಂದ್ರಗಳ ನಿರ್ವಹಣೆಗಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸುವುದು.

   c) ಪರಿಹಾರ ಕೇಂದ್ರಗಳಲ್ಲಿ ಶುಚಿತ್ವಕ್ಕೆ ಆದ್ಯತೆ ನೀಡಿ ಪೌರಕಾರ್ಮಿಕರನ್ನು ನಿಯೋಜಿಸುವುದು ಮತ್ತು ಕೋವಿಡ್-19 ಸೋಂಕು ಹರಡುವ ಸಾಧ್ಯತೆ ಇರುವುದರಿಂದ ಅಗತ್ಯ ವೈದ್ಯಕೀಯ ವ್ಯವಸ್ಥೆ, ಥರ್ಮಲ್ ಸ್ಕ್ಯಾನರ್ಸ್, ಪಲ್ಸ್ ಆಕ್ಸಿಮೀಟರ್ಸ್, ಸ್ಯಾನಿಟೈಸರ್ ಇತ್ಯಾದಿಗಳ ಬಗ್ಗೆ ಮುಂಜಾಗ್ರತೆ ಕ್ರಮವಹಿಸುವುದು.

6) ಮುಳಗಡೆಯಾಗಬಹುದಾದ ಗ್ರಾಮಗಳಲ್ಲಿ ಜಾನುವಾರುಗಳ ರಕ್ಷಣೆಗಾಗಿ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಲಾಯಿತು.

   i. ಪ್ರವಾಹ ಪ್ರದೇಶಗಳಲ್ಲಿ ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವುದು ಮತ್ತು ಹಾನಿಯಾಗದಂತೆ ಮುಂಜಾಗ್ರತೆ ಕ್ರಮವಹಿಸುವುದು.

ii. ಜಾನುವಾರುಗಳಿಗೆ ಮೇವು ಖರೀದಿಸಿ ಪೂರೈಸುವುದು ಮತ್ತು ಈ ಬಗ್ಗೆ ದಾಖಲೆ ನಿರ್ವಹಿಸುವುದು.

iii. ಮುಂಜಾಗ್ರತೆಯಾಗಿ ಗಳಲೆ ರೋಗ ಮತ್ತು ಕರುಳು ಬೇನೆ ರೋಗ ತಡೆಗಟ್ಟಲು ಲಸಿಕೆ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

7) ಪ್ರವಾಹ ಉಂಟಾದಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಯಿತು.

a) ಪ್ರವಾಹ ಪೀಡಿತ ಗ್ರಾಮಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸುವುದು. ವಿಲೇಜ್ ರೆಸ್ಪಾನ್ಸ್ ಟೀಂ, ಅಗ್ನಿಶಾಮಕ ಸಿಬ್ಬಂದಿಗಳು, ಪೋಲೀಸ್ ಸಿಬ್ಬಂದಿಗಳ ಸಹಯೋಗದೊಂದಿಗೆ ಜನ-ಜಾನುವಾರುಗಳಿಗೆ ತೊಂದರೆಯಾಗದಂತೆ ಮುನ್ನೆಚ್ಚರಿಗೆ ವಹಿಸಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವುದು.

b) ಇದಕ್ಕೆ ಸಾಕಷ್ಟು ಸಂಖ್ಯೆ ಕೊಪ್ಪರಿಕೆ, ಲೈಫ್ ಜಾಕೆಟ್ಸ್ ಹಾಗೂ ನುರಿತ ಈಜುಗಾರರುನ್ನು ಗುರುತಿಸಲು ಅಗ್ನಿಶಾಮಕ ಠಾಣಾಧಿಕಾರಿ, ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ರವರಿಗೆ ಸೂಚಿಸಲಾಯಿತು.

c) ಕುಡಿಯುವ ನೀರಿನ ಗುಣಮಟ್ಟವನ್ನು ಪರೀಕ್ಷಿಸಿ ಶುದ್ಧ ಕುಡಿಯುವ ನೀರನ್ನು ಪ್ರವಾಹ ಪೀಡಿತ ಗ್ರಾಮಗಳಿಗೆ ನೀಡುವ ಮೇಲುಸ್ತುವಾರಿಯನ್ನು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ರವರಿಗೆ ವಹಿಸುವುದು.

d) ಪ್ರವಾಹದ ನಂತರ ಗ್ರಾಮಗಳಲ್ಲಿ ಚರಂಡಿ ಹೂಳೆತ್ತಿಸಲು ಮತ್ತು ನಿಂತಿರುವ ನೀರನ್ನು ಸರಾಗವಾಗಿ ಹೋಗುವಂತೆ ಆಯಾ ಗ್ರಾಮ ಪಂಚಾಯಿತಿಗಳು ಕ್ರಮವಹಿಸುವುದು. ಹಾಗೂ ಈ ಕಾರ್ಯಕ್ಕೆ ಕೊಳ್ಳೇಗಾಲ ನಗರಸಭೆಯ ಪೌರಕಾರ್ಮಿಕರನ್ನು ನಿಯೋಜಿಸುವುದು.

e) ಪ್ರವಾಹ ಪೀಡಿತ ಪ್ರದೇಶದ ನಾಗರೀಕರಿಗೆ ಯಾವುದೇ ಸಾಂಕ್ರಾಮಿಕ ರೋಗಗಳು ಹರಡದಂತೆ ಮತ್ತು ಕೋವಿಡ್-19 ಸೋಂಕು ಹರಡುವಿಕೆಯನ್ನು ತಡೆಗಟ್ಟಲು ಎಲ್ಲಾ ಮುಂಜಾಗ್ರತೆ ಕ್ರಮಗಳನ್ನು ಆರೋಗ್ಯ ಇಲಾಖೆ ವತಿಯಿಂದ ಕೈಗೊಳ್ಳುವುದು.

f) ಪ್ರವಾಹದಿಂದ ಉಂಟಾಗಿರುವ ಮನೆ ಮತ್ತು ಬೆಳೆ ಹಾನಿಗೆ ಸಂಬಂಧಿಸಿದಂತೆ ಸಮೀಕ್ಷೆ ನಡೆಸಲು ತಂಡಗಳು ರಚಿಸುವುದು. ಈ ಬಗ್ಗೆ ತಹಶೀಲ್ದಾರ್, ಕೊಳ್ಳೇಗಾಲ, ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಮತ್ತು ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ರವರುಗಳು ಮೇಲುಸ್ತುವಾರಿ ವಹಿಸುವುದು.

g) ಪ್ರವಾಹ ಪೀಡಿತ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕವನ್ನು ಮುಂಜಾಗೃತವಾಗಿ ಕಡಿತಗೊಳಿಸುವುದು ನಂತರದಲ್ಲಿ ವಿದ್ಯುತ್ ಸಂಪರ್ಕ ತುರ್ತಾಗಿ ನೀಡಲು ಕ್ರಮವಹಿಸುವುದು.

h) ಬೆಳೆ ಹಾನಿಯಾದಲ್ಲಿ ಆ ರೈತರಿಗೆ ಉಚಿತವಾಗಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ ರವರಿಗೆ ಸೂಚಿಸಲಾಯಿತು.

i) ಆಹಾರದ ಸಮಸ್ಯೆ ಉಂಟಾಗದಂತೆ ಕ್ರಮವಹಿಸಲು ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ರವರಿಗೆ ಸೂಚಿಸಲಾಯಿತು.

8) ಚಾಮರಾಜನಗರ ಜಿಲ್ಲೆಯಲ್ಲಿ ಕೋವಿಡ್-19 ಸೋಂಕು ಹರಡುವುದನ್ನು ತಡೆಗಟ್ಟಲು ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಬಗ್ಗೆ ಪರಿವೀಕ್ಷಿಸಿ ಸರ್ಕಾರದ ಮಾರ್ಗಸೂಚಿಗಳಂತೆ ಅಗತ್ಯ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಯಿತು.

ಬಿ.ಬಿ.ಕಾವೇರಿ

(ಬಿ.ಬಿ.ಕಾವೇರಿ)
ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ಚಾಮರಾಜನಗರ

ಎನ್. ಜಯರಾಮ್, ಭಾ.ಆ.ಸೇ.
ಅಧ್ಯಕ್ಷರು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
1ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು - 560 009.
ಕಛೇರಿ : 080-22945100 ಫ್ಯಾಕ್ಸ್ : 080-22945101
E-mail : chairman@bwssb.gov.in www.bwssb.gov.in

ದಿನಾಂಕ: 09/08/2020.

ಮಾನ್ಯರೆ,

ವಿಷಯ: ಮೈಸೂರು ಜಿಲ್ಲೆಯ ಪ್ರವಾಹ ಪರಿಸ್ಥಿತಿ ಹಾಗೂ ಕೋವಿಡ್ ನಿಯಂತ್ರಣದ ಕುರಿತು.

-----****-----

ದಿನಾಂಕ: 30/07/2020 ಹಾಗೂ 07/08/2020ರಂದು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಜಿಲ್ಲಾಧಿಕಾರಿ ಹಾಗೂ ಇತರ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ಮಾಡಿರುತ್ತೇನೆ. ಜಿಲ್ಲೆಯಲ್ಲಿ ಪ್ರಸ್ತುತ ಪ್ರವಾಹ ಪರಿಸ್ಥಿತಿ ನಿಭಾಯಿಸುತ್ತಿರುವ ಹಾಗೂ ಮುಂದಿನ ಸಂಭವನೀಯ ಪ್ರವಾಹ ನಿಭಾಯಿಸಲು ತೆಗೆದುಕೊಳ್ಳಲಾಗುತ್ತಿರುವ ಕ್ರಮಗಳು ಈ ಕೆಳಕಂಡಂತಿರುತ್ತದೆ.

1. ಈ ಹಿಂದಿನ ವರ್ಷಗಳಲ್ಲಿ ಉಂಟಾಗಿರುವ ಪ್ರವಾಹದ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಪ್ರಸ್ತುತ ಹವಾಮಾನ ಪರಿಸ್ಥಿತಿಯ ಮೇಲೆ ನಿಗಾ ಇಟ್ಟು ಜಿಲ್ಲಾಡಳಿತ ಎಲ್ಲಾ ಏರ್ಪಾಡುಗಳನ್ನು ಮಾಡಿಕೊಳ್ಳುತ್ತಿದೆ.

2. ಜಿಲ್ಲೆಯಲ್ಲಿ ಉದ್ಭವಿಸಬಹುದಾದ ಸಂಭವನೀಯ ಪ್ರವಾಹದ ಸಂದರ್ಭದಲ್ಲಿ 46 ಗ್ರಾಮಗಳಲ್ಲಿ ಸಮಸ್ಯೆಗಳು ಉದ್ಭವಿಸಬಹುದೆಂದು ಗುರುತಿಸಲಾಗಿರುತ್ತದೆ. ಹಾಗೂ ಈ ಎಲ್ಲಾ ಗ್ರಾಮಗಳಿಂದ ಸುಮಾರು 650 ಕುಟುಂಬಗಳು ತೊಂದರೆಗೊಳಗಾಗಬಹುದಾದ ಸಂಭವವಿದೆ.

3. ಈ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ತೊಂದರೆಗೊಳಗಾಗುವ ಕುಟುಂಬಗಳಿಗೆ ತಾತ್ಕಾಲಿಕ ಪುನರ್‌ವಸತಿಗಾಗಿ ಆಯಾ ಪ್ರದೇಶಗಳಲ್ಲಿ ಸುರಕ್ಷಿತವಾದ ಹಾಗೂ ಸೌಲಭ್ಯಗಳನ್ನು ಹೊಂದಿರುವ 48 ಸರಕಾರಿ ಕಟ್ಟಡಗಳನ್ನು ಗುರುತಿಸಿಕೊಂಡು ಸಿದ್ಧತೆ ಮಾಡಿಕೊಳ್ಳಲಾಗಿದೆ.

4. ಸಮಸ್ಯಾತ್ಮಕ ಗ್ರಾಮಗಳ ಜಾನುವಾರುಗಳ ಸುರಕ್ಷತೆಯನ್ನು ಗಮನದಲ್ಲಿರಿಸಿಕೊಂಡು ಗೋಶಾಲೆಗಳನ್ನು ಸಹ ಆರಂಭಿಸಲು ಸೂಕ್ತ ಸ್ಥಳಗಳನ್ನು ಗುರುತಿಸಿಕೊಳ್ಳಲಾಗಿದೆ. ಜಾನುವಾರುಗಳಿಗೆ ನೀರು ಮತ್ತು ಮೇವಿನ ಲಭ್ಯತೆ ಕುರಿತು ಸಹ ಪೂರ್ವಸಿದ್ಧತೆಗೆ ಗಮನ ನೀಡಲಾಗಿರುತ್ತದೆ.

5. ಸಂಭವನೀಯ ಪ್ರವಾಹದಿಂದ ಸಂತ್ರಸ್ಥರಾಗಬಹುದಾದ ಕುಟುಂಬದವರಿಗೆ ವಸತಿಯೊಂದಿಗೆ ಊಟೋಪಚಾರದ ಹಾಗೂ ವೈದ್ಯಕೀಯ ಸೇವೆ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಅಲ್ಲದೇ,

ಕೋವಿಡ್ ಕಾರಣದಿಂದ ಸಾಮಾಜಿಕ ಅಂತರವನ್ನು ಸಹ ಈ ಪುನರ್‌ವಸತಿ ಕೇಂದ್ರಗಳಲ್ಲಿ ಕಾಪಾಡಿಕೊಳ್ಳಲು ಎಚ್ಚರಿಕೆ ಕ್ರಮಗಳನ್ನು ಸಹ ತೆಗೆದುಕೊಳ್ಳಲಾಗುತ್ತದೆ.

6. 46 ಗ್ರಾಮಗಳನ್ನು ಒಳಗೊಂಡಿರುವ ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬರಂತೆ ನೋಡಲ್ ಅಧಿಕಾರಿ ನೇಮಕ ಮಾಡಲಾಗಿದೆ.

7. ಪ್ರತಿ ತಾಲ್ಲೋಕಿಗೂ ಸಹ ಅದೇ ರೀತಿ ಜಿಲ್ಲಾಮಟ್ಟದ ಹಿರಿಯ ಅಧಿಕಾರಿಯೊಬ್ಬರನ್ನು ನೋಡಲ್ ಅಧಿಕಾರಿಯಾಗಿ ನಿಯೋಜಿಸಿದ್ದು, ಈ ಅಧಿಕಾರಿಗಳು ವಾರದಲ್ಲಿ ಕನಿಷ್ಠ ಎರಡು ಬಾರಿ ತಾಲ್ಲೋಕಿನಲ್ಲಿ ಪ್ರವಾಸ ಮಾಡಿ ಪರಿಸ್ಥಿತಿಯನ್ನು ನಿಭಾಯಿಸಲು ಸ್ಥಳೀಯ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡಲು ಅವಶ್ಯವೆನಿಸಿದ ದಿವಸಗಳಲ್ಲಿ ಪ್ರವಾಹಕ್ಕೆ ಒಳಗಾಗುವ ಗ್ರಾಮಗಳಲ್ಲಿ ವಾಸ್ತವ್ಯ ಮಾಡಿ ಪರಿಹಾರ ಕೆಲಸಗಳ ಮೇಲ್ವಿಚಾರಣೆಯಲ್ಲಿ ತೊಡಗಿಸಿಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿದೆ.

8. ಪ್ರವಾಹಕ್ಕೆ ಒಳಗಾಗುವ ಸಂಭವನೀಯ ಗ್ರಾಮಗಳಲ್ಲಿ ಪ್ರಮುಖ ಅಧಿಕಾರಿಗಳನ್ನು ಸಂಪರ್ಕಿಸಲು ಸಾಧ್ಯವಾಗುವಂತೆ ಅವರ ಮೊಬೈಲ್ ನಂಬರುಗಳನ್ನು ಗ್ರಾಮಗಳ ಪ್ರಮುಖ ಸ್ಥಳಗಳಲ್ಲಿ ಪ್ರಚುರ ಪಡಿಸಲು ತಿಳಿಸಿರುತ್ತೇನೆ.

9. ಪ್ರತಿನಿತ್ಯ ಮಳೆಯ ಪರಿಸ್ಥಿತಿಯನ್ನು, ನದಿಗಳಲ್ಲಿ ನೀರಿನ ಹರಿವಿನ ಪ್ರಮಾಣ, ಜಲಾಶಯಗಳಲ್ಲಿ ಶೇಖರಣೆ ಸಾಮರ್ಥ್ಯ ಇತ್ಯಾದಿ ವಿವರಗಳನ್ನು ನಿರಂತರವಾಗಿ ನಿಗಾವಹಿಸಲು ಮೈಸೂರು,ಕೊಡಗು,ಹಾಸನ,ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯ ಸಂಬಂಧಿಸಿದ ಅಧಿಕಾರಿಗಳು, ರಾಜ್ಯದ ಹವಾಮಾನ ಇಲಾಖೆ ಮತ್ತು ಕೇಂದ್ರ ಜಲ ಆಯೋಗದ ಅಧಿಕಾರಿಗಳಲ್ಲದೇ, ಕೇರಳ ರಾಜ್ಯದ ಅಧಿಕಾರಿಗಳೊಂದಿಗೆ ಸಂಪರ್ಕವಿಟ್ಟುಕೊಂಡು ಅಗತ್ಯವಿರುವ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.(ಕಬಿನಿ, ಕೆ.ಆರ್. ಸಾಗರ ಮತ್ತು ಲಕ್ಷ್ಮಣ ತೀರ್ಥ) ಅಗತ್ಯ ಬಂದಾಗ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಿ ಜನ-ಜಾನುವಾರುಗಳನ್ನು ಅಪಾಯದಿಂದ ಪಾರು ಮಾಡಲು ಪೂರ್ವಸಿದ್ಧತೆ ಮಾಡಿಕೊಳ್ಳಲಾಗಿದೆ. ಮನೆಗಳಿಗೆ ಹಾನಿಯಾದ ಸಂದರ್ಭಗಳಲ್ಲಿ ಕೂಡಲೇ ಹಾನಿಯ ಅಂದಾಜು ಮಾಡಿ ಸರ್ಕಾರದ ಆದೇಶ/ಮಾರ್ಗಸೂಚಿ ಅನುಸಾರ ಪರಿಹಾರವನ್ನು ಹಾಗೂ ಸಾವುಗಳು ಸಂಭವಿಸಿದಲ್ಲಿ ಅಂತಹ ಪ್ರಕರಣಗಳಲ್ಲಿ ಸಂತ್ರಸ್ಥರ ಕುಟುಂಬಕ್ಕೆ ಪರಿಹಾರವನ್ನು ತ್ವರಿತವಾಗಿ ಒದಗಿಸಲು ಸಜ್ಜಾಗಿರುವಂತೆ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

10. ಪ್ರವಾಹ ಉದ್ಭವವಾದ ಸಂದರ್ಭದಲ್ಲಿ ಪ್ರವಾಹದಲ್ಲಿ ಸಿಲುಕಿಕೊಂಡ ಜನರನ್ನು ರಕ್ಷಿಸಲು ಅಗತ್ಯವಿರುವ ಸಲಕರಣೆಗಳನ್ನು ಸುಸ್ಥಿತಿಯಲ್ಲಿಡಲು ಮತ್ತು ನುರಿತ ಈಜುಗಾರರನ್ನು ಗುರುತು ಮಾಡಿಕೊಳ್ಳಲು ಮತ್ತು ಪೊಲೀಸ್ ಹಾಗೂ ಅಗ್ನಿಶಾಮಕ ಸಹ "Alert" ಆಗಿರಲು ತಿಳಿಸಲಾಗಿದೆ.

11. ಪ್ರವಾಹ ಪರಿಸ್ಥಿತಿ ನಿಭಾಯಿಸಲು ಅಗತ್ಯವಿರುವ ವಿವಿಧ ಇಲಾಖೆಯ ಯಾವುದೇ ಅಧಿಕಾರಿಗಳು ಮುಂದಿನ ಆರು ವಾರಗಳ ಅವಧಿಯಲ್ಲಿ ತುರ್ತು ಸಂದರ್ಭ ಹೊರತುಪಡಿಸಿ ರಜೆ ಪಡೆಯದಂತೆ ಹಾಗೂ 24*7 ಆಧಾರದಲ್ಲಿ ಜಿಲ್ಲೆಯಲ್ಲಿ ಲಭ್ಯವಿರುವಂತೆ ತಿಳುವಳಿಕೆ ನೀಡಲಾಗಿದೆ.

12. ಪ್ರವಾಹ ಕಾರಣಗಳಿಂದ ಸಾರ್ವಜನಿಕರ ಆಸ್ತಿಗಳಿಗೆ ಹಾಗೂ ಬೆಳೆಗಳು ನಷ್ಟವಾದಲ್ಲಿ ಅಂತಹ ಪ್ರಕರಣಗಳು ಮತ್ತು ಸಾರ್ವಜನಿಕ ಸಂಸ್ಥೆಗಳ/ಇಲಾಖೆಗಳ ಆಸ್ತಿಗಳಿಗೆ ಹಾನಿಯಾದಲ್ಲಿ ಅದನ್ನು ಪರಿಶೀಲಿಸಿ ಅಂದಾಜಿಸಲು ವಿವಿಧ ಇಲಾಖೆಗಳ ಅಧಿಕಾರಿಗಳ ತಂಡಗಳನ್ನು ಸಹ ರಚಿಸಿಕೊಂಡು ಸನ್ನದ್ಧರಾಗಿರುವಂತೆ ಮಾರ್ಗದರ್ಶನ ನೀಡಿರುತ್ತೇನೆ.

13. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇತರ ಪ್ರವಾಹ ನಿಭಾಯಿಸಲು ಅವಶ್ಯವಿರುವ ಅಧಿಕಾರಿಗಳೊಂದಿಗೆ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಖುದ್ದಾಗಿ ಪರಿಶೀಲಿಸುತ್ತಿರುವುದನ್ನು ಗಮನಿಸಿರುತ್ತೇನೆ.

ಒಟ್ಟಾರೆ ಜಿಲ್ಲೆಯಲ್ಲಿ ಸಂಭವನೀಯ ಪ್ರವಾಹ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ಜಿಲ್ಲಾಡಳಿತ ಎಲ್ಲಾ ರೀತಿಯ ಪೂರ್ವಸಿದ್ಧತೆಗಳನ್ನು ತೆಗೆದುಕೊಂಡಿರುವುದು ಹಾಗೂ ಈಗಾಗಲೇ ಸಮಸ್ಯೆಯಾಗಿರುವ ಪ್ರಕರಣಗಳಲ್ಲಿ ತೆಗೆದುಕೊಂಡಿರುವ ಪರಿಹಾರ ಕ್ರಮಗಳು ತೃಪ್ತಿಕರವಾಗಿರುತ್ತವೆ. ಪ್ರತಿನಿತ್ಯ ಜಿಲ್ಲಾಧಿಕಾರಿಗಳು ಹಾಗೂ ಇತರ ಪ್ರಮುಖ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದು ಪರಿಸ್ಥಿತಿಯ ಮೇಲೆ ನಿಗಾವಹಿಸುತ್ತಿದ್ದೇನೆ. ಅಗತ್ಯಬಿದ್ದಾಗ ನಾನು ಸಹ ಪ್ರವಾಸ ಕೈಗೊಂಡು ಜಿಲ್ಲಾಡಳಿತಕ್ಕೆ ಬೇಕಾದ ನೆರವು/ಮಾರ್ಗದರ್ಶನ ಮಾಡುತ್ತೇನೆಂದು ತಮ್ಮ ಅವಗಾಹನೆಗೆ ತರಬಯಸುತ್ತೇನೆ.

<u>ಕೋವಿಡ್-19ರ ನಿಯಂತ್ರಣ ಹಾಗೂ ಚಿಕಿತ್ಸೆ ಕುರಿತು ಈ ಕೆಳಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.</u>

1. ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣ ಹಾಗೂ ಚಿಕಿತ್ಸೆ ವಿಷಯದಲ್ಲಿ ಜಿಲ್ಲಾಧಿಕಾರಿ ಹಾಗೂ ಸಂಬಂಧಿಸಿದ ಅವರ ಸಹೋದ್ಯೋಗಿಗಳು ಜಿಲ್ಲೆಯ ಕೋವಿಡ್ ನಿಯಂತ್ರಣ, ಚಿಕಿತ್ಸೆ, ಕ್ವಾರೆಂಟೈನ್ ವಿಷಯಗಳನ್ನು, Contact Tracing ಹಾಗೂ ಇನ್ನಿತರೇ ಕೋವಿಡ್ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಜಿಲ್ಲಾಧಿಕಾರಿ ಹಾಗೂ ಸಂಬಂಧಿತ ತಂಡ ಅತ್ಯುತ್ತಮವಾಗಿ ನಿಭಾಯಿಸುವುದನ್ನು ಮುಂದುವರೆಸಿರುತ್ತಾರೆ.

2. ರೋಗ ಪತ್ತೆ ವಿಷಯದಲ್ಲಿಯೂ ಸಹ ನಿಗದಿ ಮಾಡಿರುವ ಗುರಿಗೆ ಅನುಗುಣವಾಗಿ ಟೆಸ್ಟ್‌ಗಳನ್ನು ಮಾಡಿ ಪ್ರಯೋಗಾಲಯಗಳ ಗರಿಷ್ಠ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತಿದ್ದಾರೆ.

3. ಆದರೆ ಕೋವಿಡ್ ಕಾರಣದಿಂದ ಸಂಭವಿಸುತ್ತಿರುವ ಸಾವುಗಳ ಸಂಖ್ಯೆಯನ್ನು ಗಮನಿಸಿದಾಗ ಈ ವಿಷಯದಲ್ಲಿ ಮತ್ತಷ್ಟು ಗಮನ ನೀಡುವುದು ಅಗತ್ಯವಿದೆ. ಸೋಂಕಿಗೆ ಒಳಗಾದ ರೋಗಿಗಳು ಸೋಂಕಿನ ರೋಗಲಕ್ಷಣಗಳು ಹೆಚ್ಚಾದ ನಂತರ ಆಸ್ಪತ್ರೆಗಳಿಗೆ ಚಿಕಿತ್ಸೆಗೆ ದಾಖಲಾಗುತ್ತಿದ್ದು, ಇದರಿಂದ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಪಡೆಯದೆ ಇರುವುದು ಕೂಡ ಪ್ರಮುಖ ಕಾರಣವಾಗಿರಬಹುದು. ಆದ್ದರಿಂದ, ಸೋಂಕಿನ ಲಕ್ಷಣಗಳನ್ನು ಬೇಗ ತಿಳಿದುಕೊಳ್ಳಲು ಸಹಾಯವಾಗುವಂತೆ ಕ್ವಾರಂಟೈನ್‌ನಲ್ಲಿರುವ ಪ್ರತಿಯೊಬ್ಬರಿಗೂ ಪಲ್ಸ್ ಆಕ್ಸಿಮೀಟರ್‌ಗಳನ್ನು ಉಚಿತವಾಗಿ ಸರಬರಾಜು ಮಾಡಿದಲ್ಲಿ ರೋಗದ ಪ್ರಮಾಣ ಉಲ್ಬಣಗೊಳ್ಳುವ ಮೊದಲೇ ರೋಗಿಗಳು ಆಸ್ಪತ್ರೆಗೆ ದಾಖಲಾಗಲು ಸಹಾಯವಾಗುತ್ತದೆ. ಇದರಿಂದ, ಚಿಕಿತ್ಸೆ ಸಕಾಲದಲ್ಲಿ ದೊರೆಯುವುದರಿಂದ ಸಾವುಗಳ ಪ್ರಮಾಣ ಇಳಿಮುಖವಾಗಬಹುದು. ಉಚಿತವಾಗಿ ಆಕ್ಸಿಮೀಟರ್‌ಗಳನ್ನು ಖಾಸಗಿ ಪ್ರಾಯೋಜಕತ್ವದಲ್ಲಿ(CSR ಅಡಿಯಲ್ಲಿ) ವಿತರಣೆ ಮಾಡುವ ಅವಕಾಶಗಳ ಕುರಿತು ಪ್ರಯತ್ನಿಸುವಂತೆ ಜಿಲ್ಲಾಧಿಕಾರಿಗಳಿಗೆ ಸಲಹೆ ನೀಡಿರುತ್ತೇನೆ. ಸರ್ಕಾರದ ವತಿಯಿಂದ ಉಚಿತವಾಗಿ ಪಲ್ಸ್ ಆಕ್ಸಿಮೀಟರ್‌ಗಳನ್ನು ವಿತರಿಸುವ ವಿಷಯವನ್ನು ಪರಿಗಣಿಸುವಂತೆ ತಮ್ಮಲ್ಲಿ ವಿನಂತಿಸುತ್ತೇನೆ.

4. ಕೋವಿಡ್ ಆಸ್ಪತ್ರೆಗಳಿಗೆ ಐಸೋಲೇಷನ್ ವಾರ್ಡ್‌ಗಳಲ್ಲಿ ಕೆಲಸ ಮಾಡಿ ಅನುಭವ ಹೊಂದಿರುವ ನರ್ಸ್‌ಗಳ ಕೊರತೆ ಇರುತ್ತದೆ. ಸರ್ಕಾರದ ಇತರ ಆಸ್ಪತ್ರೆಗಳಲ್ಲಿಯೂ ಈ ರೀತಿ ಅನುಭವ ಹೊಂದಿರುವ ನರ್ಸ್‌ಗಳ ಲಭ್ಯತೆ ಕೂಡ ಇರುವುದಿಲ್ಲ. ಆದ್ದರಿಂದ, ಮೈಸೂರು ಕೋವಿಡ್ ಆಸ್ಪತ್ರೆಗೆ ಹಾಲಿ ಇರುವ ನರ್ಸ್‌ಗಳ ಜೊತೆಗೆ 30 ನರ್ಸ್‌ಗಳನ್ನು ಹೊರಗುತ್ತಿಗೆ ಮುಖಾಂತರ ಪಡೆದು ಅಲ್ಪಕಾಲದ ತರಬೇತಿಯನ್ನು ಕೋವಿಡ್ ಆಸ್ಪತ್ರೆಯಲ್ಲಿಯೇ ನೀಡಿ ಅವರ ಸೇವೆಯನ್ನು ಬಳಸಿಕೊಳ್ಳುವುದೇ ಸೂಕ್ತವೆಂಬುದು ನನ್ನ ಅಭಿಪ್ರಾಯವಾಗಿದೆ. ಆದರೆ, ಸರ್ಕಾರ ಹೊರಗುತ್ತಿಗೆ ಅಡಿಯಲ್ಲಿ ನಿಗದಿಮಾಡಿರುವ ನರ್ಸ್‌ಗಳ ಮಾಹೆಯಾನ ವೇತನ ಅಷ್ಟೊಂದು ಆಕರ್ಷಕವಾಗಿರುವುದಿಲ್ಲವೆಂಬುದನ್ನು ಗಮನಿಸಬಹುದಾಗಿದೆ ಹಾಗೂ ಈ ಕಡಿಮೆ ವೇತನಕ್ಕೆ ಕೋವಿಡ್ ಸಂಬಂಧದ ಚಿಕಿತ್ಸಾ ಕೆಲಸಗಳಲ್ಲಿ ತೊಡಗಿಕೊಳ್ಳಲು ಹೊರಗುತ್ತಿಗೆ ಆಧಾರದಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಲು ಯಾರು ಮುಂದೆ ಬರುತ್ತಿಲ್ಲವೆಂದು ಆಸ್ಪತ್ರೆಯ ಹಾಗೂ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ನನ್ನ ಗಮನಕ್ಕೆ ತಂದಿರುತ್ತಾರೆ.

ಕೋವಿಡ್ ಆಸ್ರತ್ರೆಗಳಲ್ಲಿ ಕೆಲಸ ಮಾಡುವ 'ಡಿ' ದರ್ಜೆ ನೌಕರರಿಗೆ ಅವರ ವೇತನದ ಜೊತೆಗೆ 10ಸಾವಿರ ಹೆಚ್ಚುವರಿಯಾಗಿ ಪ್ರತಿ ತಿಂಗಳು ಸರ್ಕಾರದಿಂದ ನೀಡಲಾಗುತ್ತಿದೆ. ಈ 10 ಸಾವಿರ ಸೇರಿದರೆ ಪ್ರತಿ ತಿಂಗಳು 'ಡಿ' ಗ್ರೂಪ್ ನೌಕರ ಕನಿಷ್ಠ 30–35 ಸಾವಿರ ವೇತನ ಪಡೆಯುತ್ತಿದ್ದಾರೆ. ಆದರೆ, ಅದೇ ವಾರ್ಡ್‌ಗಳಲ್ಲಿ ಕೆಲಸ ಮಾಡುವ ಹೊರಗುತ್ತಿಗೆ ನರ್ಸ್‌ಗಳಿಗೆ ನಿಗದಿ ಮಾಡಿರುವ ವೇತನ ಬಹಳ ಕಡಿಮೆ ಇರುತ್ತದೆ.

ಆದ್ದರಿಂದ, ಹೊರಗುತ್ತಿಗೆ ಕೆಲಸ ಮಾಡುವ ನರ್ಸ್‌ಗಳೂ ಸೇರಿದಂತೆ ಇತರ ಪ್ಯಾರಾಮೆಡಿಕಲ್ ಸಿಬ್ಬಂದಿಗಳಿಗೆ ಕನಿಷ್ಠ 35 ಸಾವಿರ ಮಾಹೆಯಾನ ವೇತನ ಲಭ್ಯವಾಗುವಂತೆ ನಿಗದಿ ಮಾಡಿ ಅಗತ್ಯ ಪ್ರಮಾಣದ ಸಿಬ್ಬಂದಿಯನ್ನು (ಮುಂದಿನ ಆರು ತಿಂಗಳ ಅವಧಿಗಾದರೂ) ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲು ವಿನಂತಿಸುತ್ತೇನೆ. ಇದರಿಂದ ರೋಗಿಗಳ ಚಿಕಿತ್ಸೆಯ/ಆರೈಕೆಯ ಗುಣಮಟ್ಟ ಉತ್ತಮಗೊಂಡು ಚಿಕಿತ್ಸೆ ಫಲಪ್ರದವಾಗುತ್ತದೆ ಮತ್ತು ಸಾವಿನ ಸಂಖ್ಯೆಗಳನ್ನು ಸಹ ತಗ್ಗಿಸಬಹುದು.

ಈ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಈ ಕುರಿತು ಸೂಕ್ತ ನಿರ್ದೇಶನ/ಆದೇಶ ನೀಡಬೇಕೆಂದು ವಿನಂತಿಸುತ್ತೇನೆ.

ಗೌರವದೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-
ಅಧ್ಯಕ್ಷರು, ಬೆಂ.ಜ.ಮಂ ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಮೈಸೂರು ಜಿಲ್ಲೆ.

ರವರಿಗೆ,
ಶ್ರೀ ಟಿ.ಎಂ. ವಿಜಯಭಾಸ್ಕರ್, ಭಾ.ಆ.ಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ, ವಿಧಾನಸೌಧ,
ಬೆಂಗಳೂರು.

ಸಹಿ/-
ಅಧ್ಯಕ್ಷರು, ಬೆಂ.ಜ.ಮಂ ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಮೈಸೂರು ಜಿಲ್ಲೆ.

ಪ್ರತಿಯನ್ನು:
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ವಿಪತ್ತು ನಿರ್ವಹಣೆ), ಕಂದಾಯ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಡಿಪಿಎಆರ್(ಆಡಳಿತ ಸುಧಾರಣೆ) ಬೆಂಗಳೂರು.
4. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
5. ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಎಸ್.ಆರ್. ಉಮಾಶಂಕರ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)

ದೂರವಾಣಿ : ಕಛೇರಿ : 080–22257334
ಫ್ಯಾಕ್ಸ್ : 080–22385545
6ನೇ ಮಹಡಿ, ಗೇಟ್ ನಂ. 2
ಬಹುಮಹಡಿಗಳ ಕಟ್ಟಡ
ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು – 560 001
E-mail: prsprim-edu@karnataka.gov.in

ಸಂಖ್ಯೆ:ಪ್ರಕಾ:ಪ್ರಾಪ್ರೌಶಿ:120/2020 ದಿನಾಂಕ: 08.09.2020

ಮಾನ್ಯರೆ,

ತಮ್ಮ ಟಿಪ್ಪಣಿ ಸಂಖ್ಯೆ: ಮುಕಾ 1178 2019, ದಿನಾಂಕ: 13.12.2019 ಹಾಗೂ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 02 ಇಸಪ 2019ರಲ್ಲಿ ತಿಳಿಸಿರುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಆಗಸ್ಟ್ 2020ರಲ್ಲಿ ಕೈಗೊಂಡ ಪ್ರಮುಖ ಚಟುವಟಿಕೆಗಳು ಹಾಗೂ ಮಹತ್ವದ ಸಾಧನೆಗಳ ಮಾಹಿತಿಯನ್ನು ಈ ಕೆಳಕಂಡಂತೆ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ :–

| ಕ್ರಮ ಸಂಖ್ಯೆ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1. | ಜಿಲ್ಲೆಯ ಹೆಸರು | ದಾವಣಗೆರೆ |
| 2. | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಎಸ್.ಆರ್ ಉಮಾಶಂಕರ್, ಭಾ.ಆ.ಸೇ |
| 3. | ಭೇಟಿಯಾದ/ಪ್ರವಾಸದ ದಿನಾಂಕ | ದಿನಾಂಕ 29.08.2020 |
| 4. | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | 1. ದಾವಣಗೆರೆ ಸ್ಮಾರ್ಟ್‌ಸಿಟಿಯ 20ನೇ ಆಡಳಿತ ಮಂಡಳಿಯ ಸಭೆಯನ್ನು ನಡೆಸಲಾಯಿತು.<br>2. ಜಿಲ್ಲಾಧಿಕಾರಿಗಳೊಂದಿಗೆ ಕೊರೋನಾ ಸೋಂಕು ನಿಯಂತ್ರಣದ ಕುರಿತು ನಡೆಸಿದ ಸಭೆಯ ನಡವಳಿಯ ಪ್ರತಿ ಲಗತ್ತಿಸಿದೆ. |

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

8/9/20

ಶ್ರೀ ಮುನೀಶ್ ಮುದ್ಗಿಲ್, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ,
ಸಿಆಸು ಇಲಾಖೆ (ಆಡಳಿತ ಸುಧಾರಣೆ),
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

**ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:29.08.2020 ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೊರೋನಾ ವೈರಸ್ ಸೋಂಕು ನಿಯಂತ್ರಣದ ಸಂಬಂಧ ನಡೆದ ಪ್ರಗತಿ ಪರಿಶೀಲನಾ ಸಭೆಯ ಸಭಾ ನಡವಳಿ.**

****

ದಾವಣಗೆರೆ ಜಿಲ್ಲಾಧಿಕಾರಿಗಳು ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು ಹಾಗೂ ಸಭೆಯನ್ನು ಕರೆದ ಉದ್ದೇಶವನ್ನು ಸಭೆಯಲ್ಲಿ ಪ್ರಸ್ತಾಪಿಸುತ್ತಾ, ಜಿಲ್ಲೆಯಲ್ಲಿ ಕೋರೋನಾ ಸೋಂಕು ಹೆಚ್ಚುತ್ತಿರುವುದರಿಂದ ಈವರೆವಿಗೂ ಜಿಲ್ಲೆಯಲ್ಲಿ ಕೋವಿಡ್-19 ನಿಯಂತ್ರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಕೈಗೊಳ್ಳಲಾಗುತ್ತಿರುವ ಕ್ರಮಗಳ ಕುರಿತು ಸಭೆಗೆ ಮಾಹಿತಿ ನೀಡುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾ ಆರೋಗ್ಯ ಅಧಿಕಾರಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಈ ದಿನದವರೆವಿಗೂ ಒಟ್ಟು 8526 ಕೋವಿಡ್-19 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, 6236 ವ್ಯಕ್ತಿಗಳನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಒಟ್ಟು 2111 ಸಕ್ರೀಯ ಪ್ರಕರಣಗಳು ಇರುತ್ತವೆ. ಜಿಲ್ಲೆಯ ಪಾಸಿಟಿವಿಟಿ ದರವು 18.2% ಇರುತ್ತದೆ. ದಿನಾಂಕ :28.8.2020 ರವರೆಗೆ 75816 ಗಂಟಲು ದ್ರವ ಮಾದರಿಗಳನ್ನು ಕೋವಿಡ್ ಪರೀಕ್ಷೆಗಾಗಿ ಕಳುಹಿಸಿದ್ದು, 8526 ಪಾಸಿಟಿವ್ ಬಂದಿದ್ದು, 66652 ನೆಗೆಟೀವ್ ಬಂದಿರುತ್ತವೆ. 638 ಗಂಟಲು ದ್ರವ ಮಾದರಿಗಳ ಫಲಿತಾಂಶವು ಬಾಕಿ ಇರುತ್ತದೆ. ಜಿಲ್ಲೆಯಲ್ಲಿ ಈವರೆಗೆ 179 ಮರಣಗಳು ಸಂಭವಿಸಿರುತ್ತವೆ. ಈ ಪೈಕಿ 14 ವ್ಯಕ್ತಿಗಳು ಹೊರ ಜಿಲ್ಲೆಯವರಾಗಿದ್ದು, ಜಿಲ್ಲೆಯ ಫ್ಯಾಟಿಲಿಟಿ ದರವು 2.2% ಇರುತ್ತದೆ. ಮೃತಪಟ್ಟ ಎಲ್ಲಾ ವ್ಯಕ್ತಿಗಳನ್ನು ಕೋವಿಡ್-19 ರ ಮಾರ್ಗಸೂಚಿಗಳು ಮತ್ತು ನಿಯಮಾನುಸಾರ ಅಂತ್ಯಸಂಸ್ಕಾರ ಮಾಡಲಾಗಿರುತ್ತದೆ. ಜಿಲ್ಲೆಯಲ್ಲಿ ಇದುವರೆಗೂ 843 ವಲಯಗಳನ್ನು ಕಂಟೇನ್ಮಂಟ್ ಝೋನ್ ಎಂದು ಘೋಷಿಸಲಾಗಿದ್ದು, ಈ ಪೈಕಿ 610 ವಲಯಗಳು ಯಾವುದೇ ಹೊಸ ಪ್ರಕರಣಗಳು ಇಲ್ಲದ ಕಾರಣ ಡಿನೋಟಿಫೈ ಮಾಡಲಾಗಿದೆ. 223 ಸಕ್ರೀಯ ಕಂಟೇನ್ಮಂಟ್ ಝೋನ್‌ಗಳು ಇದ್ದು, ಇವುಗಳಲ್ಲಿ ಪ್ರತಿದಿನ ಸಮೀಕ್ಷೆ ನಡೆಸಲಾಗುತ್ತಿದೆ. ಬಫರ್ ಝೋನ್‌ನಲ್ಲಿ 3 ದಿನಗಳಿಗೊಮ್ಮೆ ಸಮೀಕ್ಷೆ ನಡೆಸಲಾಗುತ್ತಿದೆ. ಇದುವರೆಗೂ 230915 ಮನೆಗಳಿಂದ 898848 ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.

ಜಿಲ್ಲೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ 200 ಬೆಡ್‌ಗಳ ಕೋವಿಡ್ ಆಸ್ಪತ್ರೆ ಎಂದು ಗುರುತಿಸಲಾಗಿದ್ದು, ಹೆಚ್ಚುವರಿ 250 ಬೆಡ್‌ಗಳ ಐಸೋಲೇಷನ್ ವಾರ್ಡ್ ಗುರುತಿಸಲಾಗಿದೆ. ಜಿಲ್ಲೆಯ 4 ತಾಲ್ಲೂಕುಗಳಲ್ಲಿ ತಲಾ 20 ಐಸೋಲೇಷನ್ ಬೆಡ್‌ಗಳನ್ನು ಸ್ಥಾಪಿಸಲಾಗಿದೆ ಹಾಗೂ ಪ್ರತಿ ತಾಲ್ಲೂಕಿನಲ್ಲಿ ಲಕ್ಷಣಗಳು ಇಲ್ಲದ ಪಾಸಿಟಿವ್ ಪ್ರಕರಣಗಳನ್ನು ಚಿಕಿತ್ಸೆಗೆ ಒಳಪಡಿಸಲು 100 ಬೆಡ್‌ಗಳ ಕೋವಿಡ್ ಕೇರ್ ಸೆಂಟರ್‌ಗಳಾಗಿ ಕಾರ್ಯನಿರ್ವಹಿಸಲು ಗುರುತಿಸಲಾಗಿದೆ.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಕೋವಿಡ್ ಸೆಂಟರ್‌ಗಳಲ್ಲಿ ಬೆಡ್‌ಗಳ ಸಾಮರ್ಥ್ಯವನ್ನು ಹೆಚ್ಚಿಗೆ ಮಾಡಲಾಗಿದೆ ಹಾಗೂ ಸರ್ಕಾರದ ನಿರ್ದೇಶನದಂತೆ **ಹೋಂ ಐಸೋಲೇಷನ್‌ಗೆ** ಹೆಚ್ಚಿನ ಒತ್ತು ನೀಡಿ ಕ್ರಮವನ್ನು ಸಹ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜ್ವರದ ಕ್ಲೀನಿಕ್‌ಗಳಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಕೋವಿಡ್-19 ಗೆ ಸಂಬಂಧಿಸಿದಂತೆ ಕಾಂಟ್ಯಾಕ್ಟ್ ಟ್ರೇಸಿಂಗ್‌ನ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಾತಿ ಮಾಡುತ್ತಿರುವ ಬಗ್ಗೆ ಮಾಹಿತಿ ಕೇಳಿದಾಗ, ಜಿಲ್ಲಾ ವೈದ್ಯಾಧಿಕಾರಿಗಳು ಮಾತನಾಡುತ್ತಾ, ಅಪರ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಾಂಟ್ಯಾಕ್ಟ್ ಟ್ರೇಸಿಂಗ್ ತಂಡ ಮತ್ತು ಸರ್ವೇಕ್ಷಣಾ ತಂಡದಿಂದ ಈವರೆಗೆ 48227 ಪ್ರಾಥಮಿಕ ಸಂಪರ್ಕಗಳು, ಅವುಗಳ ಪೈಕಿ 2257 ಪಾಸಿಟಿವ್ ಮತ್ತು 48077 ದ್ವಿತೀಯ ಸಂಪರ್ಕಗಳನ್ನು ಅವುಗಳ ಪೈಕಿ 967 ಪಾಸಿಟಿವ್ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಹಾಗೂ ಆನ್‌ಲೈನ್‌ನಲ್ಲಿ ಮಾಹಿತಿಯನ್ನು ದಾಖಲಿಸಲಾಗುತ್ತಿದೆ ಎಂದು ತಿಳಿಸಿದರು.

ಮುಂದುವರೆದು ಮಾತನಾಡುತ್ತಾ, ಇದುವರೆಗೂ ಜಿಲ್ಲೆಯಲ್ಲಿ ತೀವ್ರ ಶ್ವಾಸಕೋಶದ ಸೋಂಕು (SARI) 1292 ಪ್ರಕರಣಗಳು ದಾಖಲಾಗಿದ್ದು, 204 ಪಾಸಿಟಿವ್ ಬಂದಿರುತ್ತವೆ. (ILI) ಪ್ರಕರಣಗಳು 6116 ಇದ್ದು, 534 ಪಾಸಿಟಿವ್ ಬಂದಿರುತ್ತವೆ. ಕೋವಿಡ್ ಪಾಸಿಟಿವ್ ಪ್ರಕರಣಗಳು ಕಂಡುಬಂದಿರುವ ಪ್ರದೇಶಗಳಲ್ಲಿ 1. ಕಂಟೇನ್ಮೆಂಟ್ ಝೋನ್ ಮತ್ತು 2. ಬಫರ್ ವಲಯಗಳಲ್ಲಿ ನಿಯಮಾನುಸಾರ ಸರ್ವೇಕ್ಷಣೆ ನಡೆಸಲಾಗುತ್ತಿದ್ದು, ಕೋವಿಡ್ ಮರಣಗಳನ್ನು ತಡೆಯಲು ತೀವ್ರ ತರದ ಸರ್ವೇಕ್ಷಣಾ ಚಟುವಟಿಕೆಗಳನ್ನು ಕೈಗೊಳ್ಳಲು 1. ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿ ಮತ್ತು 2. ವಾರ್ಡ್ ಹಾಗೂ ಬೂತ್ ಮಟ್ಟದ ಸಮಿತಿಗಳನ್ನು ರಚಿಸಿ ಆದೇಶಿಸಲಾಗಿದ್ದು, ಸಮಿತಿಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ ಎಂದು ಸಭೆಗೆ ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಕೋವಿಡ್ ಪಾಸಿಟಿವ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಹೋಂ ಐಸೋಲೇಷನ್‌ನಲ್ಲಿ ಇರುವುದಕ್ಕಿಂತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಿದ್ದರೆ ಹೆಚ್ಚಿನ ಫಲಕಾರಿಯಾಗಿ ಮರಣದ ಪ್ರಮಾಣ ತಗ್ಗಿಸಬಹುದಾಗಿತ್ತು ಎಂಬಂತಹ ಪ್ರಕರಣಗಳು ಕಂಡುಬಂದಿವೆಯೇ ? ಹಾಗೂ ಹೋಂ ಐಸೋಲೇಷನ್‌ನಿಂದ ಯಾರಾದರೂ ಮರಣ ಹೊಂದಿದ್ದಾರೆಯೇ ? ಎಂದು ಕೇಳಿದರು. ಎಸ್‌ಎಸ್‌ಎಂಐಎಸ್ ನ ವೈದ್ಯರಾದ ಡಾ॥ಕಾಳಪ್ಪನವರು ಮಾತನಾಡುತ್ತಾ, 4 ಕೋವಿಡ್ ಪಾಸಿಟಿವ್ ಪ್ರಕರಣಗಳು ನಮ್ಮ ಆಸ್ಪತ್ರೆಗೆ ದಾಖಲಾಗಿದ್ದು, ಸದರಿ ರೋಗಿಗಳನ್ನು ಮೊದಲೇ ಆಸ್ಪತ್ರೆಗೆ ದಾಖಲಾಗಿದ್ದರೆ ಹೆಚ್ಚಿನ ಅನುಕೂಲವಾಗುತ್ತಿತ್ತೆಂದು ಸಭೆಗೆ ತಿಳಿಸಿದರು. ಮುಂದುವರೆದು ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಹೋಂ ಐಸೋಲೇಷನ್ ಕುರಿತು ಅಭಿಪ್ರಾಯ ನೀಡುವಂತೆ ವೈದ್ಯಾಧಿಕಾರಿಗಳಿಗೆ ತಿಳಿಸಿದರು. ಖಾಸಗಿ ವೈದ್ಯರು ಮಾತನಾಡುತ್ತಾ, ಹೋಂ ಐಸೋಲೇಷನ್‌ನಿಂದ ಕೆಲವೊಂದು ಬಾರಿ ತೊಂದರೆ ಉಂಟಾಗುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು.

ಉಸ್ತುವಾರಿ ಕಾರ್ಯದರ್ಶಿಗಳು ಹೋಂ ಐಸೋಲೇಷನ್‌ಗೆ ಸಂಬಂಧಿಸಿದಂತೆ ತಾಲ್ಲೂಕುವಾರು ವರದಿ ನೀಡುವಂತೆ ಕೇಳಲಾಗಿ, ಎಲ್ಲಾ ತಾಲ್ಲೂಕುಗಳಲ್ಲಿ ನೇಮಕಗೊಂಡ ನೋಡಲ್ ಅಧಿಕಾರಿಗಳು ಆಯಾ ತಾಲ್ಲೂಕುವಾರು ಹೋಂ ಐಸೋಲೇಷನ್‌ನಲ್ಲಿರುವ ಪ್ರಕರಣಗಳ ಕುರಿತು ಮಾಹಿತಿಯನ್ನು ಸಭಾಧ್ಯಕ್ಷರಿಗೆ ನೀಡಿದರು. ಸಾರ್ವಜನಿಕರಲ್ಲಿ ಕೋವಿಡ್-19 ರ ಬಗ್ಗೆ ಜಾಗೃತಿ ಮೂಡಿಸಲು ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸುವಂತೆ ಜಿಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಹಾಗೂ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳನ್ನು ಕೇಳಿದಾಗ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಸಾರ್ವಜನಿಕರಲ್ಲಿ ಕೋವಿಡ್-19 ರ ಬಗ್ಗೆ ಜಾಗೃತಿ ಮೂಡಿಸಲು ಪಾಂಪ್ಲೇಟ್‌ಗಳನ್ನು ಹಾಗೂ ಪೋಸ್ಟರ್‌ಗಳನ್ನು ಮುದ್ರಿಸಿ ಎಲ್ಲಾ ತಾಲ್ಲೂಕು ಹಾಗೂ ಹಳ್ಳಿಗಳಲ್ಲಿ ಅಂಟಿಸಲಾಗಿದ್ದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಜಿಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮಾತನಾಡುತ್ತಾ, ಪತ್ರಿಕೆಗಳಲ್ಲಿ, ವಾಟ್ಸ್‌ಆಪ್, ಫೇಸ್‌ಬುಕ್‌ಗಳಲ್ಲಿ ಮಾಹಿತಿಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆ ಹಾಗೂ ಸ್ಥಳೀಯ ಕೇಬಲ್ ಚಾನಲ್‌ನಲ್ಲಿಯೂ ಸಹ ಜಾಹೀರಾತು ನೀಡಲಾಗಿದ್ದು, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

ಮುಂದುವರೆದು, ಕೋವಿಡ್-19 ನಿಯಂತ್ರಣದಲ್ಲಿ ಸಾರ್ವಜನಿಕ ಸಹಕಾರವು ತುಂಬಾ ಮುಖ್ಯವಾಗಿದ್ದು, ಇದಕ್ಕಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಈ ಜಿಲ್ಲೆಯಲ್ಲಿ ಗಮನಿಸಿದಾಗ ವಾರ್ತಾ ಇಲಾಖೆ ಹಾಗೂ ಆರೋಗ್ಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದ ಗಮನಾರ್ಹ ಪ್ರಚಾರ ಕಾರ್ಯವು ಕೈಗೊಂಡಿರುವುದು ಕಂಡುಬರುತ್ತಿಲ್ಲ. ಜಿಲ್ಲೆಯಲ್ಲಿ ಪ್ರಚಾರದ ಕೊರತೆಯು ಎದ್ದು ಕಾಣುತ್ತಿದೆ. ಆದ್ದರಿಂದ ಕೂಡಲೇ ಸಾರ್ವಜನಿಕರಲ್ಲಿ ಕೋವಿಡ್-19 ರ ಕುರಿತು ಜಾಗೃತಿ ಮೂಡಿಸುವ ಸಂಬಂಧ ಯೋಜನೆಯನ್ನು ಸಿದ್ಧಪಡಿಸಿಕೊಂಡು ಜಿಲ್ಲಾಧಿಕಾರಿಗಳಿಗೆ ಮಂಡಿಸಿ ಅನುಮೋದನೆ ಪಡೆದು ಕೂಡಲೇ ಹೆಚ್ಚಿನ ರೀತಿಯಲ್ಲಿ ಕಾರ್ಯಪ್ರವೃತ್ತರಾಗುವಂತೆ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಾಧ್ಯವಿರುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಪ್ರಚಾರಕ್ಕೆ ಅಗತ್ಯವಿರುವ ವಾಹನಗಳನ್ನು ಬಾಡಿಗೆ ಪಡೆಯುವ ಮೂಲಕ ಪೂರೈಸುವಂತೆ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ ಇವರಿಗೆ ತಿಳಿಸಿದರು.

ಮುಂದುವರೆದು ಕ್ವಾರೆಂಟೈನ್ ವಾಚ್ ಆಪ್ ಬಗ್ಗೆ ಮಾಹಿತಿ ಕೇಳಲಾಗಿ ಆಯುಕ್ತರು, ಮಹಾನಗರಪಾಲಿಕೆ ಇವರು ಮಾತನಾಡುತ್ತಾ, ಕ್ವಾರೆಂಟೈನ್ ವಾಚ್ ಆಪ್‌ನ ಪ್ರಗತಿ ಕುರಿತು ಸಭೆಗೆ ಮಾಹಿತಿ ನೀಡಿದರು. ಮಾನ್ಯ ಅಧ್ಯಕ್ಷರು ಪ್ರಗತಿಯನ್ನು ಪರಿಶೀಲಿಸುತ್ತಾ, ಪ್ರಗತಿಯು ಕುಂಠಿತವಾಗಿದ್ದು, ಕೂಡಲೇ ಸಂಬಂಧಪಟ್ಟವರಿಗೆ ಸಭೆ ನಡೆಸಿ ಸೂಚನೆ ನೀಡಿ ಕ್ವಾರೆಂಟೈನ್ ವಾಚ್ ಆಪ್‌ನಲ್ಲಿ ಯಾವುದೇ ಬಾಕಿ ಇರದಂತೆ ನೋಡಿಕೊಳ್ಳುವಂತೆ ಸೂಚಿಸಿದರು.

ಜಿಲ್ಲಾ ವೈದ್ಯಾಧಿಕಾರಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ತಜ್ಞವೈದ್ಯರ ಹಾಗೂ ಇತರೆ ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿಗಳ ತುಂಬಾ ಕೊರತೆ ಉಂಟಾಗಿದ್ದು, ಇದರಿಂದಾಗಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು. ಅಧ್ಯಕ್ಷರು ಮಾತನಾಡುತ್ತಾ, ಜಿಲ್ಲಾ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಗೆ ಅಗತ್ಯವಿರುವ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ವಿಪತ್ತು ನಿರ್ವಹಣಾ ನಿಧಿಯಿಂದ ಹಾಗೂ ಆರೋಗ್ಯ ರಕ್ಷಾ ಸಮಿತಿ ನಿಧಿಯಿಂದ ಅನುದಾನವನ್ನು ಬಳಸಿಕೊಂಡು ಕ್ರಮವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಬೇರೆ ಬೇರೆ ಜಿಲ್ಲೆಗಳಿಂದ ರೋಗಿಗಳು ದಾವಣಗೆರೆ ಜಿಲ್ಲೆಗೆ ಚಿಕಿತ್ಸೆಗಾಗಿ ಬರುತ್ತಿರುವುದರಿಂದ ಜಿಲ್ಲೆಯಲ್ಲಿ ಲಭ್ಯವಿರುವ ಎಲ್ಲಾ ಐ.ಸಿ.ಯು.ಗಳು ತುಂಬಿರುತ್ತವೆ. ಚಿಗಟೇರಿ ಆಸ್ಪತ್ರೆಯಲ್ಲಿ ಅಗತ್ಯ ಸಲಕರಣೆಗಳು / ಸೌಲಭ್ಯಗಳು ಇರುತ್ತವೆ. ಆದರೆ, ಇಲ್ಲಿ ಮಾನವ ಸಂಪನ್ಮೂಲದ ಕೊರತೆ ಇದ್ದು, ತಜ್ಞವೈದ್ಯರನ್ನು ಹಾಗೂ ಇತರೆ ವೈದ್ಯಕೀಯ ಸಿಬ್ಬಂದಿಗಳನ್ನು ನೇಮಕ ಮಾಡಿಕೊಡುವಂತೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು ಹಾಗೂ ಸರ್ಕಾರದಿಂದ ನೀಡಲಾಗಿರುವ ವೆಂಟಿಲೇಟರ್‌ಗಳನ್ನು ಬೇರೆ ಬೇರೆ ಖಾಸಗಿ ಆಸ್ಪತ್ರೆಗಳಿಗೆ ಹಂಚಿಕೆ ಮಾಡಿ ನಿರ್ವಹಣೆ ಮಾಡಲು ಅನುಮತಿ ನೀಡುವಂತೆಯು ಸಹ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಅಧ್ಯಕ್ಷರು ಮಾತನಾಡುತ್ತಾ, ಬೆಂಗಳೂರು ನಗರದಲ್ಲಿ ಈಗಾಗಲೇ ಅಗತ್ಯ ವೈದ್ಯರನ್ನು ಹಾಗೂ ಇತರೆ ಸಿಬ್ಬಂದಿಗಳನ್ನು ವಿಪತ್ತು ನಿರ್ವಹಣಾ ನಿಧಿ ಹಾಗೂ ಆರೋಗ್ಯ ರಕ್ಷಾ ಸಮಿತಿ ನಿಧಿಯನ್ನು ಬಳಸಿಕೊಂಡು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿರುತ್ತಾರೆ. ಅದೇ ರೀತಿ ಈ ಜಿಲ್ಲೆಯಲ್ಲಿಯೂ ಕ್ರಮವಹಿಸುವಂತೆ ಸೂಚಿಸಿದರು. ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ತಮ್ಮ ನಿರ್ದೇಶನದಂತೆ ವಿಪತ್ತು ನಿರ್ವಹಣಾ ನಿಧಿಯನ್ನು ಬಳಸಿಕೊಂಡು ಜಿಲ್ಲಾ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಗೆ ಅಗತ್ಯವಿರುವ ತಜ್ಞವೈದ್ಯರನ್ನು ಹಾಗೂ ಇತರೆ